ಡಾ. ಗೀತಾ ನಾಗಭೂಷಣರವರ 'ಬದುಕು' ಕಾದಂಬರಿ : ಸಾಮಾಜಿಕ - ಸಾಹಿತ್ಯಿಕ ಅಧ್ಯಯನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿರುವ ಸಂಪ್ರಬಂಧ)

ಸಂಶೋಧಕರು

ಮಹಿಬೂಬವಲಿ ನಬೀಸಾಬ್

ಮಾರ್ಗದರ್ಶಕರು

ಡಾ. ಮಲ್ಲಿಕಾರ್ಜುನ ವಣೇನೂರು

ಮುಖ್ಯಸ್ಥರು ಹಾಗೂ ಸಹಾಯಕ ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೯-೧೦

ಡಾ. ಗೀತಾ ನಾಗಭೂಷಣರವರ 'ಬದುಕು' ಕಾದಂಬರಿ : ಸಾಮಾಜಿಕ – ಸಾಹಿತ್ಯಿಕ ಅಧ್ಯಯನ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿರುವ ಸಂಪ್ರಬಂಧ)

ಸಂಶೋಧಕರು

ಮಹಿಬೂಬವಲಿ ನಬೀಸಾಬ್

ಮಾರ್ಗದರ್ಶಕರು

ಡಾ. ಮಲ್ಲಿಕಾರ್ಜುನ ವಣೇನೂರು

ಮುಖ್ಯಸ್ಥರು ಹಾಗೂ ಸಹಾಯಕ ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ–೫೮೩ ೨೭೬

೨೦೦೯–೧೦

ಮಾರ್ಗದರ್ಶಕರ ದೃಢೀಕರಣ ಪತ್ರ

ಡಾ. ಗೀತಾನಾಗಭೂಷಣರವರ 'ಬದುಕು' ಕಾದಂಬರಿ : ಸಾಮಾಜಿಕ - ಸಾಹಿತ್ಯಿಕ ಅಧ್ಯಯನ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ **ಮಹಿಬೂಬವಲಿ ನಬೀಸಾಬ್** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 15/9/2010

ಸ್ಥಳ : ಕನ್ನಡ ವಿಶ್ವವಿದ್ಯಾಲಯ, ಹಂಪಿ

(ಡಾ. ಮಲ್ಲಿಕಾರ್ಜುನ ವಣೇನೂರು)
ಮಾರ್ಗದರ್ಶಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಸಂಶೋಧಕರ ಪ್ರಮಾಣ ಪತ್ರ

ಡಾ. ಗೀತಾನಾಗಭೂಷಣರವರ 'ಬದುಕು' ಕಾದಂಬರಿ : ಸಾಮಾಜಿಕ - ಸಾಹಿತ್ಯಿಕ ಅಧ್ಯಯನ ಎಂಬ ಸಂಪ್ರಬಂಧವನ್ನು **ಡಾ. ಮಲ್ಲಿಕಾರ್ಜುನ ವಣೇನೂರು** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಲಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 15/9/2010

ಸ್ಥಳ : ಕನ್ನಡ ವಿಶ್ವವಿದ್ಯಾಲಯ, ಹಂಪಿ

Mahs

(ಮಹಿಬೂಬವಲಿ ನಬೀಸಾಬ್)

ಸಂಶೋಧಕ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಪರಿವಿಡಿ

ಅಧ್ಯಾಯ - 1

ಅಧ್ಯಯನದ ಸ್ವರೂಪ, ಮಹತ್ವ, ವ್ಯಾಪ್ತಿ ಹಾಗೂ ವಿಧಾನ

ಅಧ್ಯಾಯ –1

ಅಧ್ಯಯನದ ಸ್ವರೂಪ, ಮಹತ್ವ, ವ್ಯಾಪ್ತಿ ಹಾಗೂ ವಿಧಾನ

ಪೀಠಿಕೆ

ಸಾಹಿತ್ಯ ಚಲನಶೀಲವಾಗಿರುತ್ತದೆ. ಹಳೆಯ ನೀರನ್ನು ಹೊಸ ನೀರು ಕೊಚ್ಚಿಕೊಂಡೊಯ್ಯುವಂತೆ ಸಾಹಿತ್ಯವು ಸಹಿತ ಕಾಲಕಾಲಕ್ಕೆ ಸೃಷ್ಟಿಯಾಗುತ್ತ ಅಂದಂದಿನ ಸಾಮಾಜಿಕ ಚಿತ್ರಣವನ್ನು, ಸಂಸ್ಕೃತಿಯ ಮಟ್ಟವನ್ನು ಬಿಂಬಿಸುವ ಮಾನವನ ಜೀವನವನ್ನು ಪ್ರತಿಬಿಂಬಿಸುತ್ತದೆ. ಕನ್ನಡ ಸಾಹಿತ್ಯವು ಇದಕ್ಕೆ ಹೊರತಲ್ಲ. ಹಳಗನ್ನಡದಿಂದ ಹೊಸಗನ್ನಡವನ್ನು ಒಳಗು ಮಾಡಿಕೊಂಡು ನವ್ಯೋತ್ತರದವರೆಗೆ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ತನ್ನ ನಿರಂತರವಾದ ಸಾಹಿತ್ಯಾತ್ಮಕ ಅರಿವನ್ನು ಸಾಗಿಸುತ್ತಿದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯ, ಈ ನಾಲ್ಕು ಕಾಲಘಟ್ಟಗಳಲ್ಲಿ ಬರಹಗಾರನು ತನ್ನ ಸಂವೇದನೆಗಳನ್ನು, ಅಭಿವ್ಯಕ್ತಿಸುವ ಮಾಧ್ಯಮವನ್ನು ಕಾವ್ಯ, ಕಥೆ, ಕಾದಂಬರಿ, ನಾಟಕ ಮುಂತಾದ ಪ್ರಕಾರಗಳಲ್ಲಿ ಸೃಜನಶೀಲಾತ್ಮಕವಾಗಿ ರಚಿಸುವಲ್ಲಿ ತೊಡಗಿಸಿಕೊಂಡಿದ್ದಾನೆ.

ಆಧುನಿಕ ಸಾಹಿತ್ಯದಲ್ಲಿ ಕಾದಂಬರಿಯು ಅತ್ಯಂತ ಜನಪ್ರಿಯವಾದ ಸಾಹಿತ್ಯ ಪ್ರಕಾರವಾಗಿ ಬೆಳೆದುಬಂದಿದೆ. ಈ ಕಾದಂಬರಿ ಸಾಹಿತ್ಯವು ಜನಸಾಮಾನ್ಯರ ಬದುಕನ್ನು ಪ್ರತಿಬಿಂಬಿಸಲು ಹುಟ್ಟಿಕೊಂಡಿದೆ. ಕಾದಂಬರಿ ನಮಗೆ ಬಂದದ್ದು ಮುಖ್ಯವಾಗಿ ಬಂಗಾಳಿ ಮತ್ತು ಮರಾಠಿಗಳ ಮೂಲಕ, ಇವು ಅನುವಾದಿತ ಇಲ್ಲವೇ ಐತಿಹಾಸಿಕ ಕೃತಿಗಳು ಇದರ ಜೊತೆಗೆ ಸಾಮಾಜಿಕ ವಸ್ತುಗಳನ್ನು ಆರಿಸಿಕೊಂಡು ಕಾದಂಬರಿಗಳನ್ನು ಬರೆಯುವ ಪ್ರಯತ್ನ ನಡೆಸಿದರು. ಕನ್ನಡದಲ್ಲಿ ಬ್ರಿಟಿಷ ವಸಾಹತು ಆಡಳಿತ ಕಾಲದಲ್ಲಿ ಆಧುನಿಕ ಶಿಕ್ಷಣ ಪಡೆದ ಸಾಹಿತಿಗಳು ಪಶ್ಚಿಮ ದೇಶಗಳ ಸಾಹಿತ್ಯವನ್ನು ಅಧ್ಯಯನ ಮಾಡಿದ ಫಲವಾಗಿ ಕನ್ನಡದಲ್ಲಿ ಕಾದಂಬರಿಗಳು ಸೃಷ್ಟಿಯಾಗತೊಡಗಿದವು.

[illegible]

[illegible]

ಆರಂಭದಲ್ಲಿ ಸಂಪ್ರದಾಯದ ರೀತಿಯಲ್ಲಿ 'ಇಂದಿರಾಬಾಯಿ', 'ವಾಗ್ದೇವಿ', 'ಇಂದಿರಾ', 'ಮಾಡಿದ್ದುಣ್ಣೋ ಮಹಾರಾಯ', 'ಮುಸುಗತೆಗೆಯೇ ಮಾಯಾಂಗನೆ', ಮುಂತಾದ ಕಾದಂಬರಿಗಳು ರಚನೆಯಾದವು. ಈ ಕಾದಂಬರಿಗಳ ಮೇಲೆ ಅಂದರೆ ರಚನಾ ತಂತ್ರ, ನಿರೂಪಣಾ ವಿಧಾನ, ಭಾಷೆಯ ಬಳಕೆ ಮುಂತಾದ ಅಂಶಗಳಲ್ಲಿ ಆಧುನಿಕತೆಯ ಪ್ರಭಾವವಿದೆ. ನಂತರ ಬಂದ ಕಾದಂಬರಿಗಳು ಪರಿಪೂರ್ಣವಾಗುತ್ತ ಶ್ರೇಷ್ಠ ಕಾದಂಬರಿಗಳು ಕನ್ನಡದಲ್ಲಿ ರಚನೆಯಾಗತೊಡಗಿದವು. 'ಚಿಕ್ಕ ವೀರರಾಜೇಂದ್ರ', 'ಕಾನೂರು ಸುಬ್ಬಮ್ಮ ಹೆಗ್ಗಡಿತಿ', 'ಮರಳಿ ಮಣ್ಣಿಗೆ', 'ಗ್ರಾಮಾಯಣ', 'ಗಂಗವ್ವ ಗಂಗಾಮಾಯಿ', 'ಸಮರಸವೇ ಜೀವನ', ಮುಂತಾದ ಕಾದಂಬರಿಗಳು ರಚನೆಯಾಗುತ್ತ ಕನ್ನಡ ಕಾದಂಬರಿ ಪ್ರಪಂಚ ಸಮೃದ್ಧವಾಗತೊಡಗಿದವು.

ಮುಂದೆ ಈ ಕಾದಂಬರಿ ಸಾಹಿತ್ಯವನ್ನು ಚದುರಂಗ, ಚಿತ್ತಾಲ, ಅನಂತಮೂರ್ತಿ, ದೇಸಾಯಿ, ಲಂಕೇಶ, ತೇಜಸ್ವಿ, ಆಲನಹಳ್ಳಿ, ದೇವನೂರು, ಕುಂ.ವೀರಭದ್ರಪ್ಪ ಮುಂತಾದವರು ಬರೆಯುತ್ತ ಬಂದರು. 'ವೈಶಾಖ', 'ಶಿಕಾರಿ', 'ಮುಕ್ತಿ', 'ಸಂಸ್ಕಾರ', 'ಮುಸ್ಸಂಜೆಯ ಕಥಾಪ್ರಸಂಗ', 'ಕರ್ವಾಲೊ', 'ಕಾಡು', 'ಒಡಲಾಳ', ಮುಂತಾದ ಕಾದಂಬರಿಗಳು ಕನ್ನಡದಲ್ಲಿ ರಚನೆಯಾಗಿ ಪ್ರಸಿದ್ಧಗೊಂಡಿವೆ. ಕನ್ನಡ ನಾಡಿನ ಮನುಷ್ಯರ ಬದುಕನ್ನು ಆ ಮೂಲಕ ಸಂಸ್ಕೃತಿಯನ್ನು ಈ ಕಾದಂಬರಿಗಳು ಮರು ಸೃಷ್ಟಿಸಿವೆ. ಪುರುಷ ಬರಹಗಾರರ ಸಂದರ್ಭದಲ್ಲಿ ಬರಹದಲ್ಲೂ ಬಂಡಾಯವೆದ್ದು, ಸಾಹಿತ್ಯದೊಳಗೂ ಬಂಡಾಯದ ಚಿತ್ರಣವನ್ನು ನಿರೂಪಿಸುವ ತಂತ್ರಗಾರಿಕೆಯ ಮಹಿಳಾ ಕಾದಂಬರಿಗಾರ್ತಿ ಗೀತಾ ನಾಗಭೂಷಣರವರು.

ಅಧ್ಯಯನದ ಉದ್ದೇಶ ಮತ್ತು ಮಹತ್ವ:

ಡಾ. ಗೀತಾ ನಾಗಭೂಷಣ ಅವರು ಹೈದ್ರಾಬಾದ್ ಕರ್ನಾಟಕದ ಹೆಮ್ಮೆಯ ಬರಹಗಾರ್ತಿ ಎಂದೇ ಖ್ಯಾತಿ ಪಡೆದಿರುವ ಕಾದಂಬರಿಗಾರ್ತಿ. ಇವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೈಯಾಡಿಸುತ್ತಾ ಕಾದಂಬರಿ ಪ್ರಕಾರದಲ್ಲಿ ವಿಶೇಷವಾಗಿ ಅಂದಿನಿಂದ ಇಂದಿನವರೆಗೂ ಕೃಷಿ ಮಾಡುತ್ತ ಬಂದಿದ್ದಾರೆ. ಇವರ ಕಾದಂಬರಿಗಳ ಸಂಖ್ಯೆ ಮುವ್ವತ್ತು ದಾಟಿದೆ. ಇದು ಕಾದಂಬರಿ ಕ್ಷೇತ್ರಕ್ಕೆ ಇವರು ಸಲ್ಲಿಸಿದ ಗಣನೀಯ ಸೇವೆ, ಯಾವ ಕಾಲಘಟ್ಟ, ಪರಂಪರೆಯ ಹಣೆಪಟ್ಟಿಯನ್ನು ಅಂಟಿಸಿಕೊಳ್ಳದೆ, ತಮ್ಮದೇ ಆದ ಪ್ರಗತಿಪರ ವಿಚಾರಗಳನ್ನಿಟ್ಟುಕೊಂಡು ಕಾದಂಬರಿಗಳನ್ನು ರಚಿಸಿದ್ದಾರೆ.

* ಗೀತಾ ನಾಗಭೂಷಣರವರ 'ಬದುಕು' ಕಾದಂಬರಿಯು ಹೈದ್ರಾಬಾದ್ ಕರ್ನಾಟಕದ ಭಾಷೆಯನ್ನು ಒಳಗೊಂಡಿದೆ. ಈ ಕಾದಂಬರಿಯಲ್ಲಿ ಸಾಮಾಜಿಕ ವ್ಯವಸ್ಥೆಯಾದ ಜಾತಿ, ವರ್ಗ, ಲಿಂಗ,

ಹಾಗೂ ಸಾಹಿತ್ಯಿಕ ನೆಲೆಯಲ್ಲಿ ಕಾದಂಬರಿಯನ್ನು ವಿಶ್ಲೇಷಣೆಗೆ ಒಳಪಡಿಸುವುದು ಈ ಸಂಪ್ರಬಂಧದ ಮುಖ್ಯ ಉದ್ದೇಶವಾಗಿದೆ.

* 'ಬದುಕು' ಕಾದಂಬರಿಯಲ್ಲಿ ಸಾಮಾಜಿಕ ಸಮಸ್ಯೆಗಳು ಮತ್ತು ವರ್ಗಗಳ ನಡುವೆ ಇರುವ ಸಾಮರಸ್ಯವನ್ನು ಅರಿಯುವುದು ಹಾಗೂ ಸಮಾಜದ ಕುರಿತು ಅವರಿಗಿರುವ ಬದ್ಧತೆಯನ್ನು ತಿಳಿಯುವುದು ನನ್ನ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

* 'ಬದುಕು' ಕಾದಂಬರಿಯಲ್ಲಿನ ಲೇಖಕರ ಭಾಷೆ, ವಸ್ತು, ಶೈಲಿ, ಅಭಿವ್ಯಕ್ತಿ ಕ್ರಮಗಳು ಹೇಗೆ ಕಾದಂಬರಿಗೆ ಭಿನ್ನವಾದ ಜನಪದೀಯ ನೆಲೆಯನ್ನು ಒದಗಿಸಿದೆ ಎಂಬುದನ್ನು ತಿಳಿಯುವುದು ಮುಖ್ಯವಾಗಿದೆ.

* ಕಾದಂಬರಿಯಲ್ಲಿ ಬರುವ ಪಾತ್ರಗಳನ್ನು ಗೀತಾರವರು ಹೇಗೆ ರೂಪಿಸಿದ್ದಾರೆ. ಅವುಗಳ ಮೂಲಕ ಕಾದಂಬರಿಯ ವಸ್ತುವನ್ನು ಕಟ್ಟಿಕೊಡುವ ತಂತ್ರಗಾರಿಕೆಯನ್ನು ತಿಳಿಯುವುದು ನನ್ನ ಮುಖ್ಯ ಉದ್ದೇಶವಾಗಿದೆ.

* ಗೀತಾರವರು ಮಹಿಳಾ ಬರಹಗಾರ್ತಿಯಾಗಿದ್ದು, ಅನೇಕ ಪ್ರಕಾರಗಳಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡಿದ್ದಾರೆ. ಇವರು ತಮ್ಮ 'ಬದುಕು' ಕಾದಂಬರಿಯ ಮೂಲಕ ಮಹಿಳಾ ಸಂವೇದನೆಗಳನ್ನು ಹೇಗೆ ನಿರೂಪಿಸಿದ್ದಾರೆ ಎಂಬುದನ್ನು ಅರಿಯುವುದು ಮುಖ್ಯವಾದ ಉದ್ದೇಶವಾಗಿದೆ.

ಕಾದಂಬರಿ ಅತ್ಯಂತ ಸ್ವತಂತ್ರವಾದ, ಸ್ವಚ್ಛಂದವಾದ ನಿರ್ಮಾಣದಿಂದಾದ ಸಾಹಿತ್ಯ ಪ್ರಕಾರ ಕಾದಂಬರಿಯನ್ನು 'ಕರತಲ ರಂಗಭೂಮಿ' ಎಂದು ಔಚಿತ್ಯ ಪೂರ್ಣವಾಗಿ ಕರೆಯಲಾಗಿದೆ. ಕಾದಂಬರಿ ಎಂದರೆ ಘಟನೆಗಳು ಮತ್ತು ಕ್ರಿಯೆಗಳೊಡನೆ ಅನುಭವಿಸಿದ ಮತ್ತು ಮಾಡಿದ ಸಂಗತಿಗಳು ಇವು ಜನಜೀವನದಲ್ಲಿ ಉಂಟಾಗಿ ಕಾದಂಬರಿಯಲ್ಲಿ ಪಾತ್ರಗಳಾಗುತ್ತವೆ. ವಿಶ್ವ ಸಾಹಿತ್ಯದಲ್ಲಿ ಕಾದಂಬರಿ ಅದರದೇ ಆದ ವಿಶಿಷ್ಟ ಸ್ಥಾನವಿದ್ದು ಜನಪ್ರಿಯ ಓದಿನ ಮಾಧ್ಯಮವಾಗಿದೆ. ಗೀತಾ ನಾಗಭೂಷಣರವರು ಕ್ಲಾಸಿಕಲ್ ಕಾದಂಬರಿ 'ಬದುಕು'ಗೆ ೨೦೦೪ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದರು. ಜೊತೆಗೆ ಕನ್ನಡದಲ್ಲಿ ಮಹಿಳೆಯೊಬ್ಬರಿಗೆ ಮೊದಲ ಬಾರಿಗೆ ಈ ಬಹುಮಾನ ದೊರೆತದ್ದು ಕನ್ನಡ ನಾಡಿಗೆ ಒಂದು ಘನತೆಯ ಸಂಕೇತವಾಗಿದೆ. ಈ ಕೃತಿ ಇವರ ಇದುವರೆಗಿನ ಬದುಕಿನ ಎಲ್ಲ ಅನುಭವ, ವೈಚಾರಿಕತೆಯ ಘನೀಕೃತ ರೂಪವಾಗಿ

ಮೂಢಿಬಂದಿದೆ.

'ಬದುಕು' ಕನ್ನಡ ಕಾದಂಬರಿ ಸಾಹಿತ್ಯದಲ್ಲಿ ಒಂದು ಮಹತ್ವದ ಕೃತಿ. ಒಂದು ಸಾಂಸ್ಕೃತಿಕ ಸಂಕಥನ. ಅಲಕ್ಷಿತ ಸಮುದಾಯವೊಂದರ ಬದುಕಿನ ಜೀವನಾಡಿಯನ್ನು ವಿಶಿಷ್ಟ ಭಾಷೆಯಲ್ಲಿ ಚಿತ್ರಿಸಿರುವ ಅಪರೂಪದ ಪ್ರಯತ್ನ. ಈ ಕಾದಂಬರಿಯು ಸ್ವತಂತ್ರಪೂರ್ವದ, ನಿಜಾಮರ ಕಾಲದ ಹೈದ್ರಾಬಾದ್ ಕರ್ನಾಟಕದ ಹಳ್ಳಿಯೊಂದರ ಜೀವನವನ್ನು ತನ್ನೊಡಲೊಳಗಿಟ್ಟಿಕೊಂಡಿದೆ. ಮೊದಲ ಬಾರಿಗೆ ಕನ್ನಡ ಸಾಹಿತ್ಯದಲ್ಲಿ ಜೋಗಣಿಯರ ಸಮಸ್ಯೆಯನ್ನು ಅತ್ಯಂತ ಸಾಂದ್ರವಾಗಿ ಮತ್ತು ವರ್ಣಾತ್ಮಕವಾಗಿ ಚಿತ್ರಿಸಿರುವ ಕಾದಂಬರಿಯಾಗಿದೆ. ಹೀಗೆ ವಿಭಿನ್ನ ಆಯಾಮಗಳಲ್ಲಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ.

ಅಧ್ಯಯನದ ವ್ಯಾಪ್ತಿ:

ಗೀತಾ ನಾಗಭೂಷಣರವರ 'ಬದುಕು' ಕಾದಂಬರಿಯನ್ನು ಸಾಮಾಜಿಕವಾಗಿ ಜಾತಿ, ಲಿಂಗ, ವರ್ಗ, ಧರ್ಮ, ವಿವಾಹ ಮತ್ತು ಕುಟುಂಬ ಇತ್ಯಾದಿಗಳನ್ನು ಚರ್ಚಿಸಲಾಗಿದೆ. ಸಾಹಿತ್ಯಿಕವಾಗಿ ವಸ್ತು, ಭಾಷೆ, ಶೈಲಿ, ಪಾತ್ರ, ಚಿತ್ರಣ, ಇತ್ಯಾದಿಗಳನ್ನು ಸಹ ಚರ್ಚಿಸಲಾಗಿದೆ. ಜೊತೆಗೆ ಗೀತಾ ನಾಗಭೂಷಣರವರ ಜೀವನ ಸಾಧನೆಯನ್ನು ಚರ್ಚಿಸಲಾಗುವುದು. ಹೀಗೆ ಕಾದಂಬರಿಯನ್ನು ವಿಸ್ತೃತ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನದ ವಿಧಾನ:

ಹೊಸಗನ್ನಡ ಸಾಹಿತ್ಯದ ಪ್ರಕಾರಗಳಲ್ಲಿಯೇ ಅತ್ಯಂತ ವಿಪುಲವಾಗಿ ಬೆಳೆದ ಸಾಹಿತ್ಯ ಪ್ರಕಾರವೆಂದರೆ ಕಾದಂಬರಿ ಸಾಹಿತ್ಯ. ಈ ಕಾದಂಬರಿಯು ಒಂದು ಸಮಾಜದ ಒಂದು ಪ್ರದೇಶದ ಜನರ ನೋವು, ನಲಿವು, ಜೀವನ ವಿಧಾನ, ದೌರ್ಜನ್ಯ ಇವೇ ಮುಂತಾದ ಅಂಶಗಳನ್ನು ಎಳೆ ಎಳೆಯಾಗಿ ಬಿಡಿಸಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಆದ್ದರಿಂದ ಈ ಸಾಹಿತ್ಯ ಪ್ರಕಾರವು ವಿವಿಧ ಸಾಹಿತ್ಯ ಪ್ರಕಾರಗಳಿಂದ ವಿಭಿನ್ನವಾದ ಮಹತ್ವವಾದ ಸಾಹಿತ್ಯ ಪ್ರಕಾರವಾಗಿ ಕನ್ನಡ ಸಾಹಿತ್ಯದಲ್ಲಿ ಬೆಳೆದುಬಂದಿದೆ.

ಪ್ರಸ್ತುತ ಗೀತಾ ನಾಗಭೂಷಣರವರ 'ಬದುಕು' ಕಾದಂಬರಿಯನ್ನು ಸಾಮಾಜಿಕ, ಸಾಹಿತ್ಯಿಕ, ನೆಲೆಗಳಲ್ಲಿ ನೋಡಲಾಗಿದೆ. 'ಬದುಕು' ಕಾದಂಬರಿಯನ್ನು ಐದು ಅಧ್ಯಾಯಗಳಾಗಿ ವಿಂಗಡಿಸಿ ವಿಶ್ಲೇಷಿಸಲಾಗಿದೆ. ಒಂದನೇ ಅಧ್ಯಾಯದಲ್ಲಿ ಉದ್ದೇಶ ಮತ್ತು ಮಹತ್ವ, ವ್ಯಾಪ್ತಿ, ಅಧ್ಯಯನದ

ವಿಧಾನವನ್ನು ಮಾಡಲಾಗಿದೆ. ಎರಡನೇ ಅಧ್ಯಾಯದಲ್ಲಿ ಗೀತಾ ನಾಗಭೂಷಣರವರ ಜೀವನ ಸಾಧನೆಯನ್ನು ಚರ್ಚಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಸಾಮಾಜಿಕವಾಗಿ ಜಾತಿ, ಲಿಂಗ, ವರ್ಗ, ಧರ್ಮ, ವಿವಾಹ ಮತ್ತು ಕುಟುಂಬ, ಹಬ್ಬಗಳು, ಜಾತ್ರೆಗಳು ಇತ್ಯಾದಿಗಳನ್ನು ಚರ್ಚಿಸಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ಸಾಹಿತ್ಯಿಕವಾಗಿ ವಸ್ತು, ಭಾಷೆ, ಶೈಲಿ, ಪಾತ್ರ ಚಿತ್ರಣ, ನಿರೂಪಣ ವಿಧಾನವನ್ನು ಮಾಡಲಾಗಿದೆ. ಕೊನೆಯ ಅಧ್ಯಾಯದಲ್ಲಿ ಸಮಾರೋಪವನ್ನು ವಿವರಿಸಲಾಗಿದೆ.

ಅಧ್ಯಾಯ - 2

ಗೀತಾ ನಾಗಭೂಷಣರವರ ಜೀವನ ಮತ್ತು ಸಾಧನೆ

ಅಧ್ಯಾಯ –2

ಗೀತಾ ನಾಗಭೂಷಣರವರ ಜೀವನ ಮತ್ತು ಸಾಧನೆ

ಕನ್ನಡ ನಾಡು ಕಂಡ ಪ್ರಮುಖ ಬಂಡಾಯ ಲೇಖಕಿ ಗೀತಾ ನಾಗಭೂಷಣರು ಜನಿಸಿದ್ದು 25--3–1942 ರಲ್ಲಿ. ಗುಲ್ಬರ್ಗಾ ಜಿಲ್ಲೆಯ ಸಾವಳಗಿ ಗ್ರಾಮದ ಬಡ ತಳವಾರ ಕುಟುಂಬವೊಂದರಲ್ಲಿ . ತಂದೆ ಶಾಂತಪ್ಪ ತಾಯಿ ಶರಣಮ್ಮರ ಮುದ್ದಿನ ಮಗಳಾಗಿ ಗೀತಾರವರು ಬೆಳೆದರು. ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿಯೇ ಮುಗಿಸಿ ಪ್ರೌಢಶಾಲಾ ಶಿಕ್ಷಣವನ್ನು ಗುಲ್ಬರ್ಗಾದಲ್ಲಿ ಪಡೆದುಕೊಂಡರು. ಮನೆಯ ಆಗಿನ ಕಷ್ಟದ ಪರಿಸ್ಥಿತಿಯಲ್ಲಿ ಗೀತಾರವರು ಮೆಟ್ರಿಕ್‌ವರೆಗೆ ಶಿಕ್ಷಣ ಪಡೆದುಕೊಂಡಿದ್ದೇ ಒಂದು ದೊಡ್ಡ ಸಾಧನೆ. ಮನೆಯಲ್ಲಿ ಕಿತ್ತು ತಿನ್ನುವ ಬಡತನ. ಇದೆಲ್ಲವನ್ನು ಮೆಟ್ಟಿ ನಿಂತು ಕಷ್ಟದಲ್ಲಿದ್ದುಕೊಂಡೇ ಶಿಕ್ಷಣವನ್ನು ಪಡೆದುಕೊಂಡರು. ಮೆಟ್ರಿಕ್ ಶಿಕ್ಷಣ ಮುಗಿಯುತ್ತಲೇ ಅನಿವಾರ್ಯವಾಗಿ ಬದುಕಿನ ನೊಗಕ್ಕೆ ಹೆಗಲು ಕೊಡಬೇಕಾಯಿತು. ಹೀಗಾಗಿ ಕಲಬುರ್ಗಿಯ ಕಲೆಕ್ಟರ್ ಕಛೇರಿಯೊಂದರಲ್ಲಿ ಲೆಕ್ಕ ಬರೆಯುವ ಕೆಲಸಕ್ಕೆ ಸೇರಿಕೊಂಡರು.

ಗೀತಾರವರಿಗೆ ಬಾಲ್ಯದಿಂದಲೇ ಅಕ್ಷರ-ಪುಸ್ತಕಗಳ ಮೇಲೆ ಅಗಾಧವಾದ ಪ್ರೀತಿಯಿತ್ತು. ಹೀಗಾಗಿ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಲೇ ಬೆಳಗಿನ ಅವಧಿಯಲ್ಲಿ ಶರಣ ಬಸವೇಶ್ವರ ಕಾಲೇಜಿಗೆ ಹೋಗಿ ಕಾಲೇಜು ಶಿಕ್ಷಣವನ್ನು ಪಡೆದುಕೊಂಡರು. ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಮಹಿಳೆಯರು ಯಾರೂ ಕಚೇರಿಯಲ್ಲಿ ಕೆಲಸಕ್ಕೆ ಸೇರಿರಲಿಲ್ಲ. ಇವರೊಬ್ಬರೇ ಮಹಿಳೆ. ಇದೆಲ್ಲ ಅರವತ್ತರ ದಶಕದ ಮಾತು. ಅವರಿವರ ಕುಹಕದ ಮಾತು, ಸರಿಯಾದ ವಾತಾವರಣ ಸುತ್ತಮುತ್ತ ಇರಲಿಲ್ಲ. ನಂತರ ಈ ಕೆಲಸವನ್ನು ಬಿಟ್ಟು ಶರಣಬಸವೇಶ್ವರ ಪ್ರೌಢಶಾಲೆಯಲ್ಲಿ ಕೆಲ ವರ್ಷಗಳವರೆಗೆ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದರು. ನಂತರ ಬಿ.ಎಡ್., ಎಂ.ಎ. ಸ್ನಾತಕೋತ್ತರ ಪದವಿಗಳನ್ನು ಪಡೆದುಕೊಂಡು ಗುಲ್ಬರ್ಗಾದ ಶ್ರೀ ನಗರೇಶ್ವರ ಸಂಯುಕ್ತ

ಕಿರಿಯ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ ಸುಮಾರು ಮೂರು ದಶಕಗಳ ಕಾಲ ಅರ್ಥಪೂರ್ಣವಾದ ಸೇವೆಯನ್ನು ಸಲ್ಲಿಸಿ ನಿವೃತ್ತರಾದರು.

ಗೀತಾರವರು ಬಾಲ್ಯದಲ್ಲಿರುವಾಗಲೇ ಅನೇಕ ಅಪಮಾನ, ಅವಮಾನ, ತಿರಸ್ಕಾರಗಳನ್ನು ಉಂಡರು. ಏಕೆಂದರೆ ಇವರು ವಾಸಿಸುವ ಮನೆಯ ಸುತ್ತಮುತ್ತಲೂ ಮೇಲ್ವರ್ಗದವರಾದ ಬ್ರಾಹ್ಮಣರು ವಾಸಿಸುತ್ತಿದ್ದರು. ಮಡಿ, ಮೈಲಿಗೆ ಎಂದು ಮಾತನಾಡುವ ಅವರು ಶೂದ್ರರಾದ ಇವರನ್ನು ಸುಲಭವಾಗಿ ಮುಟ್ಟಿಸಿಕೊಳ್ಳುತ್ತಿರಲಿಲ್ಲ. ತಾವು ತಿಂದು ಉಳಿದ ಅನ್ನದ ಪದಾರ್ಥವನ್ನು ಕೈಗೆ ಕೈ ತಾಕದಂತೆ ದೂರದಿಂದಲೇ ಇವರ ಕೈಗೆ ಒಗೆಯುತ್ತಿದ್ದರು. ಇವರಲ್ಲೇ ಕೆಲವರು ಪ್ರೀತಿಯಿಂದ ಕಾಣುತ್ತಿದ್ದರು.

ತಾವು ಬದುಕಿನಲ್ಲಿ ಕಂಡ ನೋವು, ಅಪಮಾನ, ಸಂಕಷ್ಟ, ಜೊತೆಗೆ ಸುತ್ತಮುತ್ತಲೂ ನಡೆಯುತ್ತಿರುವ ಶೋಷಣೆ, ಅತ್ಯಾಚಾರ, ಮೋಸ, ದೇವರ ಹೆಸರಿನಲ್ಲಿ ನಡೆಯುವ ದೇವದಾಸಿ ಪದ್ಧತಿ, ಮುಂತಾದವುಗಳನ್ನು ವಸ್ತುವಾಗಿಟ್ಟುಕೊಂಡು ಕಥೆ-ಕಾದಂಬರಿಗಳನ್ನು ಬರೆಯಲು ತೊಡಗಿದರು. ಇವರು ಬರವಣಿಗೆಗೆ ತೊಡಗುವುದಕ್ಕಿಂತ ಮುಂಚೆ ಓದುವ ಹವ್ಯಾಸವನ್ನು ಬೆಳೆಸಿಕೊಂಡಿದ್ದರು. ಅ.ನ.ಕೃ., ಟಿ.ಕೆ.ರಾಮರಾವ್, ತ್ರಿವೇಣಿ, ಎಂ.ಕೆ.ಇಂದಿರಾ ಮುಂತಾದವರು ಬರೆದ ಕಾದಂಬರಿಗಳನ್ನು ಓದಿ ಪ್ರಭಾವಿತರಾದರು. ಇವು ಜನಪ್ರಿಯ ಕಾದಂಬರಿಗಳು ಆಗಿದ್ದರೂ ಇವುಗಳ ಪ್ರಭಾವಕ್ಕೆ ಒಳಗಾಗಿ ಇದೇ ಧಾಟಿಯ ಕಾದಂಬರಿಗಳನ್ನು ಪ್ರಾರಂಭದಲ್ಲಿ ಗೀತಾ ನಾಗಭೂಷಣರವರು ಬರೆದರು. ಜೊತೆಗೆ ಕತೆಗಳನ್ನು ಕೂಡಾ ಬರೆದು ಪತ್ರಿಕೆಗಳಲ್ಲಿ ಪ್ರಕಟಿಸಿದರು.

ಹಿರಿಯರ ನಿರ್ಧಾರದಂತೆ ಮದುವೆಯಾದ ಗೀತಾರವರ ದಾಂಪತ್ಯ ಜೀವನ ಬಹುಕಾಲ ಮುಂದುವರಿಯಲಿಲ್ಲ. ಇಬ್ಬರಲ್ಲೂ ಹೊಂದಾಣಿಕೆಯಾಗದೆ ಮುರಿದು ಬಿತ್ತು. ನಂತರ ಇವರ ಬದುಕಿನಲ್ಲಿ ವಿವಾಹಿತ ನಾಗಭೂಷಣರ ಪ್ರವೇಶವಾಯಿತು. ಮದುವೆಯೂ ಆಯಿತು. ಇದು ಕುಟುಂಬದ ಇತರ ಸದಸ್ಯರಿಗೆ ಹಿಡಿಸಲಿಲ್ಲ. ಎಲ್ಲರನ್ನೂ ಈ ಸಂದರ್ಭದಲ್ಲಿ ಎದುರು ಹಾಕಿಕೊಂಡರು. ನಾಗಭೂಷಣರ ಪ್ರೀತಿಯನ್ನೇ ನೆಚ್ಚಿಕೊಂಡು ಧೈರ್ಯದಿಂದ ಬದುಕು ಸಾಗುತ್ತಿರುವಾಗಲೇ ನಾಗಭೂಷಣ ಇವರಿಗೆ ನಡು ನೀರಿನಲ್ಲೇ ಕೈ ಬಿಟ್ಟು ಮೊದಲ ಹೆಂಡತಿಯ ಕಡೆ ಹೋದ. ಇವರಿಬ್ಬರ ದಾಂಪತ್ಯದ ಪ್ರತಿಫಲದಿಂದ ಒಂದು ಹೆಣ್ಣು ಒಂದು ಗಂಡು ಮಕ್ಕಳಿದ್ದಾರೆ. ನಾಗಭೂಷಣರು ಇವರಿಂದ ದೂರವಾದಾಗ ಇವರಿಗೆ ತುಂಬಾ ಆಘಾತವಾಯಿತು. ಇವರ ಸುದೈವಕ್ಕೆ ನೌಕರಿ ಇತ್ತು. ಇಲ್ಲದಿದ್ದರೆ ಇವರ ಕಷ್ಟ ಹೇಳತೀರದು. ಬದುಕಿನಲ್ಲಿ ಹೀಗೆ ಉಂಡ ನೋವು - ಕಷ್ಟಗಳೆಲ್ಲವೂ ಅವರ ಬರೆಹದಲ್ಲಿ ದಾಖಲಾಗಿವೆ. ಬರೆಹ ಅವರಿಗೆ ಸುಖ-ಸಮೃದ್ಧಿ, ಕೀರ್ತಿಯನ್ನು ತಂದುಕೊಟ್ಟಿದೆ. ಬರಹದ ಮೂಲಕ ತಮಗಾದ ಆಘಾತವನ್ನೆಲ್ಲ ಅವರು ಅಭಿವ್ಯಕ್ತಿಸಿದ್ದಾರೆ.

ಗೀತಾ ನಾಗಭೂಷಣರು ತಾಯಿಯ ತವರೂರಾದ ಚುಂಚೂರು ಎನ್ನುವ ಸ್ಥಳಕ್ಕೆ ಹೋದಾಗ ಅಲ್ಲಿ ದೇವರ ಹೆಸರಲ್ಲಿ ನಡೆಯುತ್ತಿದ್ದ ಬೆತ್ತಲೆ ಸೇವೆ, ಹೆಣ್ಣುಮಕ್ಕಳನ್ನು 'ಜೋಗಿಣಿ'ಯಾಗಿ ಬಿಡುವ ಪದ್ಧತಿಗಳು ಆಶ್ಚರ್ಯವನ್ನು ಹುಟ್ಟಿಸುತ್ತವೆ. ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣು ಮಕ್ಕಳನ್ನು ಹೀಗೆ ಬಗೆಬಗೆಯಲ್ಲಿ ಶೋಷಿಸುವುದನ್ನು ಕಂಡು ಕಿಡಿಕಾರುತ್ತಾರೆ. ಈ ಎಲ್ಲಾ ಘಟನೆಗಳನ್ನು ಲೇಖಕಿ ಗೀತಾ ನಾಗಭೂಷಣರವರು ತಮ್ಮ ಕಥೆ-ಕಾದಂಬರಿಗಳಿಗೆ ವಸ್ತುವನ್ನಾಗಿ ಸಮರ್ಥವಾಗಿ ದುಡಿಸಿಕೊಳ್ಳುತ್ತಾರೆ. ಜೊತೆಗೆ ಗುಲ್ಬರ್ಗಾ ಆಡು ಭಾಷೆಯ ಸೊಗಡನ್ನು ಬಳಸುತ್ತಾರೆ. ಇವರು ಬರೆದ ಕಾದಂಬರಿಗಳು ಸುಧಾ, ಲಂಕೇಶ, ತರಂಗ, ಮುಂತಾದ ವಾರ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಹರಿದು ಬರುತ್ತವೆ. ಜೊತೆಗೆ ಸಾಮಾಜಿಕ ಅಸಮಾನತೆಯನ್ನು, ಶೋಷಣೆಯನ್ನು, ತಾರತಮ್ಯ ಭಾವನೆಯನ್ನು ಪ್ರಶ್ನಿಸುತ್ತವೆ.

ಮೊದ ಮೊದಲು ಜನಪ್ರಿಯ ಧಾಟಿಯಲ್ಲಿ ಕಥೆ-ಕಾದಂಬರಿಗಳನ್ನು ಬರೆಯಲು ತೊಡಗಿದ ಗೀತಾ ನಾಗಭೂಷಣರು ನಂತರ ನಿಜವಾದ ಬದುಕಿನ ಬಗೆಗೆ, ಸಾಮಾಜಿಕ ಅಸಮಾನತೆ, ಸ್ತ್ರೀ ಸಂವೇದನೆ, ಅವಮಾನ, ನೋವು-ಸಂಕಟಗಳನ್ನು ಕುರಿತು ಬರೆಯುತ್ತಲೇ ತಮ್ಮ ಜನಪರ ನಿಲುವುಗಳನ್ನು ಎತ್ತಿ ಹಿಡಿದಿದ್ದಾರೆ. ಅವರಿಗೆ ಮರಾಠಿ ದಲಿತ ಸಾಹಿತ್ಯ, ಆತ್ಮಕತೆಗಳು, ಈ ರೀತಿಯ ಬರವಣಿಗೆಗೆ ತೊಡಗುವಲ್ಲಿ ತುಂಬಾ ಸಹಾಯಕವಾಗಿವೆ. ಗೀತಾ ನಾಗಭೂಷಣರು ತಮ್ಮ ಕಾದಂಬರಿಯ ವಸ್ತುವನ್ನು ಕುರಿತಂತೆ "ನನ್ನ ಕಾದಂಬರಿಯ ವಸ್ತುಗಳೆಲ್ಲ ಇದೇ ಹಳ್ಳಿಯ ಕೆಳಗೇರಿಯ ಪಟ್ಟಣದ ಕೊಳಗೇರಿಯ, ನಗರದ ಝೋಪಡಿಪಟ್ಟಿಯ ಮುಗ್ಧ ಮೂರ್ಖ - ಹೆಂಗಸರ ನೂರಾರು ಸಮಸ್ಯೆಗಳೇ ಆದುವು. ನಾನು ಬರೆಯಬೇಕಾದದ್ದು ಇದು, ಇಂಥದ್ದು ಅನ್ನುವ ನಿಚ್ಚಳ ಸತ್ಯ ನನ್ನ ಕಣ್ಣ ಮುಂದೆ ಬಂದು ನಿಂತಿತು" ಎನ್ನುತ್ತಾರೆ.

ಗೀತಾ ನಾಗಭೂಷಣರವರು ಇದುವರೆಗೆ 27 ಕಾದಂಬರಿಗಳನ್ನು ಬರೆದಿದ್ದಾರೆ. ಅವುಗಳೆಂದರೆ ತಾವರೆಯ ಹೂವು, ಚಂದನದ ಚಿಗುರು, ಮಹಾಮನೆ, ಮರಳಿನ ಮನೆ, ಸಪ್ತವರ್ಣದ ಸ್ವಪ್ನ, ಮಾಪುರ ತಾಯಿಯ ಮಕ್ಕಳು, ಹಸಿಮಾಂಸ ಮತ್ತು ಹದ್ದುಗಳು, ಆಘಾತ, ಆವಾಂತರ, ಚಿಕ್ಕಿಯ ಹರೆಯದ ದಿನಗಳು, ಬದಲಾಗುವ ಬಣ್ಣಗಳು, ನೀಲಗಂಗಾ, ಪ್ರೀತಿಸಿದ್ದು ನಿನ್ನನ್ನೇ, ಮೋಹಾ, ನಿನ್ನ ತೋಳುಗಳಲ್ಲಿ, ನಿನ್ನೊಲವು ನನಗಿರಲಿ, ಸವತಿ ಶ್ರೀಗಂಧ, ನನ್ನ ನಿನ್ನ ನಡುವೆ, ಚೈತ್ರದ ಹಾಡು, ಧುಮ್ಮಸ್ಸು, ಏರಿಳಿತಗಳು, ಆಸರೆಗಳು, ನನ್ನ ಒಲವು ನಿನ್ನ ಚೆಲುವು, ದಂಗೆ, ಅಭಿಮಾನ, ಬದುಕು, ಕಾಗೆ ಮುಟ್ಟಿತು ಜೊತೆಗೆ ಜ್ವಲಂತ, ಅವ್ವ ಮತ್ತು ಇತರ ಕಥೆಗಳು, ಕಥಾ ಸಂಕಲನಗಳೊಂದಿಗೆ ಅವರ ಸಮಗ್ರ ಕಥಾ ಸಂಕಲನವು ಕೂಡ ಪ್ರಕಟವಾಗಿದೆ. ಇವುಗಳಲ್ಲದೆ ದುರಗ ಮುರಗಿಯರ ಸಂಸ್ಕೃ ತಿ, ಖೇಮಣ್ಣ ಎಂಬ ಎರಡು ಕೃತಿಗಳು ಕೂಡ ಪ್ರಕಟವಾಗಿವೆ.

'ಹೆಣ್ಣಿನ ಕೂಗು' ಎನ್ನುವ ಚಲನಚಿತ್ರವು ಇವರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯಾಧಾರಿತದ್ದು. ಜೋಗಿಣಿ, ಅವ್ವ, ಸತ್ತ ಹೆಣ್ಣಿನ ಸುತ್ತ ಇವು ಕಥಾನಾಟಕಗಳಾಗಿವೆ. ಅಲ್ಲದೆ ಜೀವನ ಚಕ್ರ, ನೀಲಗಂಗಾ ಕೃತಿಗಳು ಧಾರಾವಾಹಿಗಳಾಗಿ ದೂರದರ್ಶನದಲ್ಲಿ ಪ್ರಸಾರಗೊಂಡಿವೆ.

ಗೀತಾನಾಗಭೂಷಣರವರು ಹಲವಾರು ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿ, ಮೌಲ್ಯಿಕವಾದ ಸೇವೆಯನ್ನು ಸಲ್ಲಿಸಿದ್ದಾರೆ. ಸದಸ್ಯರಾಗಿ ಸೇವೆ ಸಲ್ಲಿಸಿದ ಸಂಸ್ಥೆಗಳೆಂದರೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಡಾ. ಶಿವರಾಮ ಕಾರಂತ ಪ್ರಶಸ್ತಿ ಆಯ್ಕೆ ಸಮಿತಿ, ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯೆ , ಗುಲ್ಬರ್ಗಾ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯೆ, 2000-01 ನೇ ಸಾಲಿನ ಚಲನಚಿತ್ರ ಆಯ್ಕೆ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

2005 ರಿಂದ 2008 ರವರೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಪ್ರಶಸ್ತಿ ಪುರಸ್ಕಾರಗಳು : -

ಇವರು ಬರೆದ ಆಘಾತ ಕಾದಂಬರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ಮಲ್ಲಿಕಾ ಪ್ರಶಸ್ತಿ' (1983), ನೋವು ಕಾದಂಬರಿಗೆ 'ಮಾರ್ದನಿ' ಪತ್ರಿಕೆ ಏರ್ಪಡಿಸಿದ್ದ ಕನ್ನಡ ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ಗುಲ್ಬರ್ಗಾ ವಿಭಾಗ ಮಟ್ಟದ ಉತ್ತಮ ಉಪನ್ಯಾಸಕಿ ಪ್ರಶಸ್ತಿ 1996, 'ಧುಮ್ಮಸ್ಸು' ಕಾದಂಬರಿಗೆ ಸಿರವಾರದ ಉಮಾಪತಿ ಚುಕ್ಕಿ ಪ್ರತಿಷ್ಠಾನ ಪ್ರಶಸ್ತಿ 1995, ಗುಲ್ಬರ್ಗಾದ ಎಸ್.ಆರ್. ಪಾಟೀಲ್ ಪ್ರತಿಷ್ಠಾನದ ಸಾಹಿತ್ಯ ಪ್ರಶಸ್ತಿ, 'ದಂಗೆ' ಕಾದಂಬರಿಗೆ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿ 1998, ಕಾಯಕ ರತ್ನ ಪ್ರಶಸ್ತಿ, ಮಹಾಂತ ಜ್ಯೋತಿ ಪ್ರತಿಷ್ಠಾನ 2001, ಕನ್ನಡ ಸಾಹಿತ್ಯ ಪರಿಷತ್ತಿನ ಬಿ. ಸರೋಜಾದೇವಿ ಪ್ರಶಸ್ತಿ, 2001, ಬದುಕು ಕಾದಂಬರಿಗೆ 3 ಪ್ರಶಸ್ತಿಗಳು ಬಂದಿರುವುದು ವಿಶೇಷ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 2005, ಮಾಣಿಬಾಯಿ ಪಾಳೇಲ ಪ್ರಶಸ್ತಿ, 2001, ಗೊರೂರು ಸಾಹಿತ್ಯ ಪ್ರಶಸ್ತಿ 2001, ಸರ್ ಎಂ.ವಿಶ್ವೇಶ್ವರಯ್ಯ ಪ್ರಶಸ್ತಿ, 2002, ಕರ್ನಾಟಕ ಲೇಖಕಿಯರ ಸಂಘದ ಅನುಪಮಾ ಪ್ರಶಸ್ತಿ 2005, ಹಂಪಿ ವಿಶ್ವವಿದ್ಯಾಲಯ ನಾಡೋಜ ಪ್ರಶಸ್ತಿ 2004, ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ 2008, ಧರ್ಮಸ್ಥಳದ ಸಾಹಿತ್ಯ ಪ್ರಶಸ್ತಿ 2007, ಆಳ್ವಾಸ್ ಗುಡಿಸಿರಿಯ ಸಾಹಿತ್ಯ ಪ್ರಶಸ್ತಿ 2006, ಸೀತಾ ಸುತ ಸಿದ್ದೇಗೌಡ ಸ್ಮಾರಕ ಸಾಹಿತ್ಯ ಪ್ರಶಸ್ತಿ ಮಂಡ್ಯ 2007, ಆರ್ಯಭಟ ಪ್ರಶಸ್ತಿ (2005) ಗಳು ಅವರ ಸೃಜನಶೀಲ ಪ್ರತಿಭೆಯನ್ನು ಅರಸಿ ಬಂದಿವೆ.

ಇಷ್ಟೇ ಅಲ್ಲದೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ 1998, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ 1998, ಕರ್ನಾಟಕ ಸರಕಾರದ ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ (2002) ಗಳು ಕೂಡ ಇವರಿಗೆ ಸಂದಿವೆ.

ಹೀಗೆ ಗೀತಾ ನಾಗಭೂಷಣರ ಬದುಕು ಮತ್ತು ಸಾಧನೆ ಬೇರೆ ಲೇಖಕಿಯರಿಗಿಂತ ತುಂಬಾ ವಿಶಿಷ್ಠವಾದುದಾಗಿದೆ. ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ ಹಂತ ಹಂತವಾಗಿ ಮೇಲೆ ಬಂದು ಸಾಧನೆ ಮಾಡಿದ್ದನ್ನು ನೋಡಿದರೆ ಅವರು ನಡೆದು ಬಂದ ಹಾದಿ ಹೂವಿನ ಹಾಸಿಗೆಯದಾಗಿರಲಿಲ್ಲ. ಮುಳ್ಳಿನ ಹಾಸಿಗೆಯದಾಗಿತ್ತು ಎಂದು ತಿಳಿದು ಬರುತ್ತದೆ.

ಅಧ್ಯಾಯ - 3

‘ಬದುಕು’ ಕಾದಂಬರಿಯ ಸಾಮಾಜಿಕ ವಿಶ್ಲೇಷಣೆ

ಅಧ್ಯಾಯ – 3

'ಬದುಕು' ಕಾದಂಬರಿಯ ಸಾಮಾಜಿಕ ವಿಶ್ಲೇಷಣೆ

ಮಾನವ ಬದುಕಿನ ತಲ್ಲಣಗಳನ್ನು ಹಿಡಿಯುವ ಅತ್ಯುತ್ತಮ ಸಾಹಿತ್ಯವು ಯಾವಾಗಲೂ ನೀರಿನಂತೆ ಚಲನಶೀಲವಾದುದು. ಅದು ಮಾನವನ ಬದುಕಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನವನ್ನು ಕಲಾತ್ಮಕವಾಗಿ ಪ್ರತಿಬಿಂಬಿಸುತ್ತದೆ. ಸಮಾಜ ವಿಜ್ಞಾನಗಳು ನೀಡಲಾಗದ ಒಳನೋಟಗಳನ್ನು ನಮ್ಮ ಬದುಕಿನ ಬಗ್ಗೆ ನಮ್ಮ ಸಮಾಜದ ಬಗ್ಗೆ ಅದು ಕೊಡುತ್ತದೆ. ಆದ್ದರಿಂದಲೇ ಸಾಹಿತ್ಯವು ಕೇವಲ ಕಲೆಯ ಕೆಲಸವನ್ನು ಮಾತ್ರ ಮಾಡುತ್ತಾ ಬಂದಿಲ್ಲ. ಅದು ನಮ್ಮ ಸಮಾಜದಲ್ಲಿ ಸಮಾಜವನ್ನು ಕುರಿತು ಓದುಗರ ಸಂವೇದನೆಯನ್ನು ಸೂಕ್ಷ್ಮಗೊಳಿಸುವ ಕೆಲಸವನ್ನು ಸಹ ಮಾಡುತ್ತ ಬಂದಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾದಂಬರಿಯು ಅತ್ಯಂತ ಸಮೃದ್ಧವಾಗಿ ಬೆಳೆದಿದೆ. ನಮ್ಮ ವಾಸ್ತವವಾದಿ ಕಾದಂಬರಿಗಳು ನಮ್ಮ ಸಮಾಜದ ಪರೋಕ್ಷ ಚಿತ್ರಗಳಾಗಿವೆ. ಇವು ಜಾತಿ, ವರ್ಗ, ಲಿಂಗ, ವಿವಾಹ ಮತ್ತು ಕುಟುಂಬ, ಧರ್ಮ, ಹಬ್ಬಗಳು, ಜಾತ್ರೆಗಳು, ಇತ್ಯಾದಿ ಸಮಾಜದ ಸಂಗತಿಗಳನ್ನು ಕುರಿತು ತಮ್ಮದೇ ಆದ ಚಿತ್ರಗಳನ್ನು ಕೊಡುತ್ತವೆ. ಆ ಚಿತ್ರಗಳನ್ನು ಪರಿಶೀಲಿಸುವುದು ಕಾದಂಬರಿ ಅಧ್ಯಯನದಲ್ಲಿ ಮುಖ್ಯವಾಗಿರುತ್ತದೆ. ಪ್ರಸ್ತುತ 'ಬದುಕು' ಕಾದಂಬರಿಯಲ್ಲಿ ಈ ಸಂಗತಿಗಳು ಹೀಗೆ ಚಿತ್ರಣಗೊಂಡಿವೆ ಎಂಬುದನ್ನು ನೋಡುವುದು ಈ ಅಧ್ಯಾಯದ ಉದ್ದೇಶವಾಗಿದೆ.

3.1 ಜಾತಿ ವರ್ಗ ಲಿಂಗ

ಕನ್ನಡ ಬಹುತೇಕ ಕಾದಂಬರಿಗಳಲ್ಲಿ ಗ್ರಾಮದ ಚಿತ್ರಣವನ್ನು ಕಾಣಬಹುದು. ನಮ್ಮ ಗ್ರಾಮ ಸಮಾಜವು ಜಾತಿ ಉಪಜಾತಿಗಳಿಂದ ಕೂಡಿದೆ. ಜಾತಿ ಉಪಜಾತಿಗಳು ತಮ್ಮದೇ ಆದ ಕುಲ ಕಸಬು

ಹಾಗೂ ಆಚರಣೆಗಳನ್ನು ರೂಢಿಸಿಕೊಂಡಿವೆ. ಹೀಗಾಗಿ ಕಾದಂಬರಿಗಳು ಉದ್ದಕ್ಕೂ ನಮ್ಮ ಸಮಾಜದ ಬಹಳ ಮುಖ್ಯ ಸಂಗತಿಯಾದ ಜಾತಿಯ ವ್ಯವಸ್ಥೆಯನ್ನು ಚಿತ್ರಿಸುತ್ತ ಬಂದಿವೆ. ''ಚೋಮನದುಡಿ'', 'ಒಡಲಾಳ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳು ಈ ಸಂಘರ್ಷಗಳನ್ನು ಮುಕ್ತವಾಗಿ ತಾತ್ವಿಕವಾಗಿ ಚರ್ಚಿಸುತ್ತವೆ. ಇವು ಹಿಂಸೆಯನ್ನು ಮನುಷ್ಯನ ವಿರೋಧಿ ನಿಲುವುಗಳಾಗಿ ಪರಿಗಣಿಸುತ್ತವೆ.

'ಬದುಕು' ಕಾದಂಬರಿಯಲ್ಲಿ ಶಿವಳ್ಳಿಯ ಬದುಕಿನ ಚಿತ್ರಣವಿದೆ. ಇಲ್ಲಿ ಜಾತಿ ವ್ಯವಸ್ಥೆ ತನ್ನದೇಯಾದ ರೀತಿಯಲ್ಲಿ ಅಸ್ತಿತ್ವದಲ್ಲಿದ್ದು, ಅದನ್ನು ಕೃತಿಯು ಹಿಡಿದುಕೊಡುತ್ತದೆ. ಸಮಾಜದಲ್ಲಿ ಮೇಲು ಮತ್ತು ಕೆಳಜಾತಿಗಳ ನಡುವೆ ಅನೇಕ ಬಗೆಯ ಸಂಘರ್ಷಗಳು ನಡೆಯುತ್ತಿರುತ್ತವೆ. ಅವುಗಳಲ್ಲಿ ಒಂದು ಬಗೆಯ ಸಾಮರಸ್ಯ ಕೂಡ ಇದೆ. 'ಬದುಕು' ಕಾದಂಬರಿಯಲ್ಲಿ ಮುಖ್ಯವಾಗಿ ಕೆಳ ಜಾತಿಯ ಜೀವನ ಚಿತ್ರಣವನ್ನು ಒಳಗೊಂಡಿದೆ. ಇದರ ಜತೆಗೆ ಅವರ ಜೊತೆ ಕುರುಬರು, ಗೊಲ್ಲರು, ಪಿಂಜಾರರು, ತಳವಾರರು, ಈಳಿಗರು ಮತ್ತಿತರ ಜಾತಿಗಳ ಜೀವನ ಕ್ರಮವು ಇದೆ. ಹಬ್ಬ-ಹುಣ್ಣಿಮೆ, ಮೊಹರಂ, ಉತ್ಸವಗಳು ಮದುವೆ ಮಂಗಲ ಕಾರ್ಯಗಳು, ಹಾದರ, ಕಳವು, ಮೋಸ ವಂಚನೆ, ದೇವರ ಸವಾರಿ, ಅಂಬಾಭವಾನಿ ಆಚರಣೆ ಇತ್ಯಾದಿ ಇವೆಲ್ಲವು ಈ ಕಾದಂಬರಿಯಲ್ಲಿ ಕಂಡು ಬರುತ್ತವೆ.

'ಬದುಕು' ಕಾದಂಬರಿಯಲ್ಲಿ ಕೆಳ ಜಾತಿಯ ಮಲ್ಲಪ್ಪ ಜಮಾದಾರ ಕೆಲಸವನ್ನು ಮಾಡುತ್ತಿರುತ್ತಾನೆ. ಈ ಕೆಲಸ ಮಾಡುವುದರಿಂದ ಇನಾಮಿ ಜಮೀನು ಸರ್ಕಾರ ಕಡೆಯಿಂದ ಬಂದಿತ್ತು. ಈತನಿಗೆ ಮಲ್ಲವ್ವನಿಂದ ಮದುವೆಯಾಗಿ ಇಬ್ಬರು ಹೆಣ್ಣುಮಕ್ಕಳು ಮತ್ತು ಒಂದು ಗಂಡು ಮಗುವಿದ್ದು, ಒಳ್ಳೆಯ ಜೀವನವನ್ನು ಸಾಗಿಸುತ್ತಾನೆ. ಮಲ್ಲಪ್ಪ ಕೆಳ ಜಾತಿಯ ಈರಮ್ಮಳೊಂದಿಗೆ ಅನೈತಿಕ ಸಂಬಂಧವನ್ನು ಇಟ್ಟುಕೊಂಡಿರುತ್ತಾನೆ. ಇಲ್ಲಿ ಇವರು ಇಬ್ಬರು ಕೆಳ ಜಾತಿಯವರಾಗಿರುತ್ತಾರೆ. 'ಬದುಕು' ಕಾದಂಬರಿಯಲ್ಲಿ ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಯಾವ ರೀತಿ ಸಂಬಂಧ ಬೆಳೆದಿದೆ ಎಂಬುವುದನ್ನು ಚಿತ್ರಿಸುತ್ತದೆ. ಫತಾರು ಜಾತಿಯಲ್ಲಿ ಮುಸ್ಲಿಂನಾದರೂ ಕೂಡ ಮಲ್ಲಪ್ಪನ ಮನೆಯ ಮಗನಿಗಿಂತ ಹೆಚ್ಚಾಗಿ ವಿಶ್ವಾಸದಿಂದ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸುತ್ತಾನೆ. ಫತರೂ ಮತ್ತವನ ಹೆಂಡತಿ ನಜಮಾ ಮಲ್ಲಪ್ಪ ಜಮಾದಾರರ ಕುಟುಂಬದಲ್ಲಿ ಇಡೀ ಕಾದಂಬರಿಯಲ್ಲಿಯೇ ನಮ್ಮ ಗಮನ ಸೆಳೆಯುವ ಪಾತ್ರಗಳಾಗಿವೆ. ಮಲ್ಲಪ್ಪನ ಕುಟುಂಬದ ಸುಖದಲ್ಲಿ ಸುಖ ಕಾಣುವ ದುಃಖದಲ್ಲಿ ದುಃಖಪಡುವ ರಾಮನಿಗೆ ಹನುಮಂತನು ಇರುವಂತೆ ಫತರೂ ಇರುವುದನ್ನು ಈ ಕಾದಂಬರಿಯು ತಿಳಿಸಿಕೊಡುತ್ತದೆ.

ನಮ್ಮ ಸಮಾಜದಲ್ಲಿ ಮೇಲು ಮತ್ತು ಕೆಳಜಾತಿಗಳ ನಡುವೆ ಅನೇಕ ಬಗೆಯ ಅನೈತಿಕ ಸಂಬಂಧಗಳು ಇರುವುದನ್ನು ಕಾಣುತ್ತೇವೆ. 'ಬದುಕು' ಕಾದಂಬರಿಯಲ್ಲಿ ಮೇಲು ಜಾತಿಯ ಗುರುಲಿಂಗಪ್ಪ ಗೌಡನ ಮಗನಾದ ಲಿಂಗರಾಜ ಮತ್ತು ಕೆಳಜಾತಿಯ ಮಲ್ಲಪ್ಪ ಜಮಾದಾರನ ಮಗಳಾದ ಕಾಶಮ್ಮ ಒಬ್ಬರಿಗೊಬ್ಬರು

ಪ್ರೀತಿಸಿದರೂ ಶಿವಳ್ಳಿಯ ವಾತಾವರಣದಲ್ಲಿ ಪ್ರತಿಭಟಿಸಲಾರದಕ್ಕೆ ಇಬ್ಬರು ಬೇರೆ ಬೇರೆ ಕಡೆಗೆ ಲಗ್ನವಾಗುತ್ತಾರೆ. ಮೇಲು ಜಾತಿಯ ಗಂಡು ಕೆಳ ಜಾತಿಯ ಹೆಣ್ಣು ಎಂಬ ಕಾರಣಕ್ಕಾಗಿಯೇ ಕಾಶಮ್ಮ ಲಿಂಗರಾಜನ ಹೆಂಡತಿಯಾಗದೆ ಕೊನೆವರೆಗೂ ತೋಟದ ಮನೆಯಲ್ಲಿ ಇಟ್ಟುಕೊಂಡವಳಾಗಿ ಉಳಿಯಬೇಕಾಗುತ್ತದೆ. ಈ ಕಾದಂಬರಿಯು ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಯಾವ ರೀತಿ ಸಂಬಂಧ ಇದೆ ಎಂಬುವುದನ್ನು ಚಿತ್ರಿಸಿದೆ.

ಕಾದಂಬರಿಯಲ್ಲಿ ವಿಶೇಷ ಎಂದರೆ ಕೆಳ ಜಾತಿಯ ಹೆಣ್ಣು ಮಗಳೊಬ್ಬಳು ಕಾಮಕ್ಕೆ ಹೇಗೆ ಬಲಿಯಾಗುತ್ತಾಳೆ ಎಂಬುವುದನ್ನು ಚಿತ್ರಿಸುತ್ತದೆ. ಶಿವಳ್ಳಿಗೆ ಚುಂಚೂರು ಹರದಾರಿ ದೂರದ ಒಂದು ಹಳ್ಳಿ. ಈ ಚುಂಚೂರುನಲ್ಲಿ ಮಾಪುರತಾಯಿದೇವಿ ಜಾತ್ರೆ ನಡೆಯುತ್ತದೆ. ಈ ದೇವಿಯು ಕೆಳ ಜಾತಿಯ ಹೊಲೆ ಮಾದಿಗರ, ಕಾಟಕರ ಮಂದಿಯ ದೇವತೆಯಾಗಿರುತ್ತಾಳೆ. ಕೆಳಜಾತಿಯ ಜನರಿಗೆ ಕಷ್ಟ ಬಂದಾಗ ಹೆಣ್ಣು ಮಕ್ಕಳನ್ನು 'ಹರಕೆ'ಯ ರೂಪದಲ್ಲಿ 'ಪಟ್ಟಕ್ಕೆ' ಹಾಕಿ 'ಜೋಗಣಿ' ಮಾಡುತ್ತಾರೆ. 'ಜೋಗಣಿ' ಎಂದರೆ ಮಾಪುರತಾಯಿ ದೇವಿಯ ಸೇವೆಗೆ ಮೀಸಲಾದ ಹೆಣ್ಣು, ಇವಳು ಜೀವನ ಇರುವವರೆಗೆ ಬೇರೆ ಮದುವೆಯಾಗುವಂತಿಲ್ಲ. ಮೇಲು ಜಾತಿಯ ಗೌಡನೋ, ಕುಲಕರ್ಣಿಯೋ, ಸಾವ್ಕಾರನೋ, ಕೆಳ ಜಾತಿಯ ಹೆಣ್ಣು ಮಕ್ಕಳನ್ನು 'ಪಟ್ಟಕ್ಕೆ' ಹಾಕಿಕೊಂಡು 'ಪಟ್ಟ'ದ ಖರ್ಚು ಕೊಟ್ಟು ಕಾಮಕ್ಕೆ ಬಳಸಿಕೊಂಡು ಅಮಾಯಕ ಹೆಣ್ಣು ಮಕ್ಕಳ ಜೀವನವು ಬೀದಿಪಾಲಿಗಿರುವುದನ್ನು ಈ ಕಾದಂಬರಿಯು ಚಿತ್ರಿಸುತ್ತದೆ.

ಪ್ರಸ್ತುತ ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಕಾದಂಬರಿ ಹಲವಾರು ಪಾತ್ರಗಳ ಮೂಲಕ ನಮ್ಮ ಕಣ್ಣ ಮುಂದೆ ನಡೆಯುವ ಹಾಗೆ ಚಿತ್ರಿಸುತ್ತದೆ.

ವರ್ಗದ ಚಿತ್ರಣ :

ಕನ್ನಡ ಬಹುತೇಕ ಕಾದಂಬರಿಗಳಲ್ಲಿ ಇರುವ ಸಮಾಜದ ಪರಿಕಲ್ಪನೆಯಲ್ಲಿ ವರ್ಗದ ಆಯಾಮವೂ ಇದೆ. ಪ್ರಸ್ತುತ 'ಬದುಕು' ಕಾದಂಬರಿಯಲ್ಲಿ ಉಚ್ಚ-ನೀಚ, ಮೇಲು-ಕೀಳು, ಶೋಷಿತ - ಶೋಷಕ ಮುಂತಾದ ವರ್ಗಗಳ ಚಿತ್ರಣಗಳಿವೆ. ಅವುಗಳಲ್ಲಿ ಮುಖ್ಯವಾದವು ಮೇಲು ವರ್ಗ ಮತ್ತು ಕೆಳವರ್ಗದವರ ಬದುಕಿನ ಚಿತ್ರಣಗಳು.

'ಬದುಕು' ಕಾದಂಬರಿಯಲ್ಲಿ ಮುಖ್ಯವಾಗಿ ಕೆಳವರ್ಗದ ಮಲ್ಲಪ್ಪ ಜಮಾದಾರನ ಕುಟುಂಬವು ಸುಖ ಮತ್ತು ದುಃಖಗಳನ್ನು ಯಾವ ರೀತಿ ಅನುಭವಿಸುತ್ತದೆ ಎಂಬುದನ್ನು ಈ ಕಾದಂಬರಿಯು ಚಿತ್ರಿಸುತ್ತದೆ. ಮಲ್ಲಪ್ಪ ಜಮಾದಾರನ ಕುಟುಂಬವು ಸುಖದಿಂದ ಇರುವಾಗ ಮೇಲ್ವರ್ಗದ ಲಿಂಗರಾಜ ಮತ್ತು ಮಲ್ಲಪ್ಪ

ಜಮಾದಾರನ ಮಗಳು ಕಾಶಮ್ಮಳನ್ನು ಪ್ರೀತಿಸುತ್ತಾನೆ. ಈ ಸುದ್ದಿ ತಿಳಿದು ನನ್ನ ಮಗಳು ಕೆಟ್ಟ ದಾರಿ ಹಿಡಿಯುತ್ತಾಳೆ ಎಂದು ಮಲ್ಲಪ್ಪ ಕಲಬುರ್ಗಿಯಲ್ಲಿರುವ ತನ್ನ ದೊಡ್ಡ ಮಗಳಾದ ಶರಣಮ್ಮ ಅಳಿಯ ಹಾಲಪ್ಪನಲ್ಲಿ ಕಾಶಮ್ಮನನ್ನು ಬಿಟ್ಟು ಬರುತ್ತಾನೆ. ಮುಂದೆ ಸೊಲ್ಲಾಪುರದಲ್ಲಿರುವ ಮಾರ್ತಾಂಡನ ಜೊತೆ ಕಾಶಮ್ಮನನ್ನು ಮದುವೆ ಮಾಡಿಕೊಡುತ್ತಾರೆ. ಮಲ್ಲಪ್ಪನ ಮಗಳಾದ ಶರಣಮ್ಮ ತನ್ನ ತವರುಮನೆ ಸುಖವಾಗಿರಲಿ ಎಂದು ತನ್ನ ಮಗಳಾದ ಬೆಳ್ಳಿಯನ್ನು ತನ್ನ ತಮ್ಮ ಕಲ್ಯಾಣಿ ಜೊತೆ ಮದುವೆ ಮಾಡುತ್ತಾರೆ. ಶಿವಳ್ಳಿಯ ಮನೆಯಲ್ಲಿ ಏನೇ ಮಂಗಲ ಕಾರ್ಯಗಳಿರಲಿ, ಹಬ್ಬ ಹುಣ್ಣಿವೆ, ಜಾತ್ರೆ ಉತ್ಸವಗಳಿರಲಿ ಯಾವುದೇ ಸಾವು ನೋವು ಸುಖ ದುಃಖಗಳು ನಡೆಯಲಿ ತಕ್ಷಣವೇ ಶಿವಳ್ಳಿಗೆ ಎಲ್ಲಾರು ಸೇರುತ್ತಿರುವುದನ್ನು ಈ ಕಾದಂಬರಿಯು ಕಟ್ಟಿಕೊಡುತ್ತದೆ.

ಮೇಲ್ವರ್ಗದ ಲಿಂಗರಾಜ ಕೆಳ ವರ್ಗದ ಕಾಶಮ್ಮ ಒಬ್ಬರಿಗೊಬ್ಬರು ಪ್ರೀತಿಸಿದರೂ ಶಿವಳ್ಳಿಯ ವಾತಾವರಣದಲ್ಲಿ ಸಿಗಿಬಿದ್ದು ಬೇರೆ ಬೇರೆ ಕಡೆಗೆ ಲಗ್ನವಾದರೂ ಕೊನೆಯಲ್ಲಿ ದೇಹ ಒಬ್ಬರಿಗೆ ಮನಸ್ಸು ಒಬ್ಬರಿಗೆ ಕೊಡಬಾರದೆಂದು ಮತ್ತೆ ಸೇರುತ್ತಾರೆ. ಆದರೆ ಪ್ರೀತಿಯ ಆರಂಭದಲ್ಲಿ ಅವಳನ್ನು ಮದುವೆ ಮಾಡಿಕೊಳ್ಳುತ್ತೇನೆಂದು ಹೇಳಿದ ಲಿಂಗರಾಜ ಅವಳ ಗಂಡನ ಮನೆಯಿಂದ ಓಡಿಸಿಕೊಂಡು ಬಂದ ಮೇಲೆ ಅವಳ ಕೊರಳಲ್ಲಿ ತಾಳಿಕಟ್ಟದೆ ರಂಡಿಯಂತೆ ಊರ ಹೊರಗೆ ತೋಟದ ಮನೆಯಲ್ಲಿ ಇಟ್ಟುಕೊಳ್ಳುವುದು ಅವನ ವರ್ಗದ ಪ್ರಜ್ಞೆಯನ್ನು ಈ ಕಾದಂಬರಿಯು ಎತ್ತಿ ತೋರಿಸುತ್ತದೆ. 'ಬದುಕು' ಕಾದಂಬರಿಯಲ್ಲಿ ಮಲ್ಲಪ್ಪನ ಕುಟುಂಬವು ನಾನಾ ಕಷ್ಟ ಪಡುವುದನ್ನು ಗೀತಾ ನಾಗಭೂಷಣರವರು ಚಿತ್ರಿಸಿದ್ದಾರೆ. ಕಾಶಮ್ಮ ಗಂಡನ ಮನೆ ಬಿಟ್ಟು ಮೇಲ್ವರ್ಗದ ಲಿಂಗರಾಜನ ತೋಟದ ಮನೆ ಸೇರಿದ್ದು ತಿಳಿದು ಮಲ್ಲಪ್ಪ ತನ್ನ ಮನೆಯ ಮರ್ಯಾದೆಗೆ ಅಂಜಿ ಹೊಳೆ ಹಾರಿ ಸತ್ತು ಹೋದರೆ ಮಲ್ಲವ್ವ ಹೌಹಾರಿ ಚಿಂತಿಸುತ್ತಾ ದೆವ್ವ ಹಿಡಿದಂತಾಗಿ, ಭ್ರಾಂತಳಾಗಿ ಕೊರಗಿ ಕೊರಗಿ ಹುಳಹತ್ತಿದ ಗಿಡದಂತಾಗಿ ಗಿಡ ಪೊಳ್ಳಾಗಿ ಮುರಿದು ಬೀಳುವಂತೆ ಒಂದು ದಿನ ಸತ್ತು ಹೋಗುತ್ತಾಳೆ. ಮಲ್ಲಪ್ಪನ ಮಗನಾದ ಕಲ್ಯಾಣಿಗೆ ಅಕ್ಕ ಕಾಶಮ್ಮನ ವಿಷಯ ತಿಳಿದು ತಲೆ ಕೆಟ್ಟು ಹೋದ ಸಂದರ್ಭದಲ್ಲಿ ಸಂಜೆ ಕುಡಿಯಲಿಕ್ಕೆ ಕುಳಿತ ಹೊತ್ತಿನಲ್ಲಿ ಜಂಬಗಿ ಮುಕುಡಪ್ಪ ಮೇಲ್ವರ್ಗದ ಲಿಂಗರಾಜ ಕೆಳವರ್ಗದ ಕಾಶಮ್ಮನ ಸಂಬಂಧವನ್ನು ಎತ್ತಿದಾಗ ಕಲ್ಯಾಣಿ ಅವನನ್ನು ಸಿಟ್ಟಿನಿಂದ ದಬ್ಬಿಸಿದಕ್ಕೆ ಅವನ ತಲೆಗೆ ಕಲ್ಲು ಬಡಿದು ಸತ್ತುದಕ್ಕೆ ಕಲ್ಯಾಣಿ ಹದಿನಾಲ್ಕು ವರುಷ ಜೈಲು ಶಿಕ್ಷೆಯಾದಾಗ ಆ ಕುಟುಂಬವು ನಾನಾ ಕಷ್ಟಕ್ಕೆ ಈಡಾಗುವುದನ್ನು ಗೀತಾನಾಗಭೂಷಣ ಅವರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಕಲ್ಯಾಣಿ ಹೆಂಡತಿ ಬೆಳ್ಳಿ ನಾನಾ ಸಂಕಟಕ್ಕೀಡಾಗುವಳು. ಹೊಲ ತೋಟಕ್ಕೆ ಎತ್ತಿನಂತೆ ದುಡಿಯುತ್ತಿರುವಾಗ ಮೇಲ್ವರ್ಗದ ಇರಪಾಕ್ಷಪ್ಪಗೌಡ ಇವರ ಕಾಟದಿಂದ ಉಳಕೊಂಡು ಮಕ್ಕಳಿಗೆ ನೋಡಿಕೊಂಡು ಸಂಸಾರ ಸಂಭಾಳಿಸಿಕೊಂಡು

ಬಾಳುವೆ ಮಾಡುವುದನ್ನು ಈ ಕಾದಂಬರಿಯು ಚಿತ್ರಿಸುತ್ತದೆ.

'ಬದುಕು' ಕಾದಂಬರಿಯಲ್ಲಿ ಕೆಳವರ್ಗದ ಜನರು ತಮಗೆ ಕಷ್ಟ ಬಂದಾಗ ತಮ್ಮ ಹೆಣ್ಣು ಮಕ್ಕಳನ್ನು ಮೇಲ್ವರ್ಗದ ಗೌಡರಿಗೆ 'ಪಟ್ಟಕ್ಕೆ' ಹಾಕಿ ಕಾಮದ ತಿಂಡಿ ತೀರಿಸಿಕೊಂಡು 'ಜೋಗಣಿ' ರೂಪದಲ್ಲಿ ಚುಂಚೂರ ಮಾಪುರತಾಯಿ ಸೇವೆಗೆ ಬಿಡುತ್ತಾರೆ. ಕೆಳವರ್ಗದ ಜಮಾದಾರ ಮಲ್ಲಪ್ಪನ ದೊಡ್ಡಿ ಹೊಲ್ಯ ಭರಮ್ಯ ಇವನು ಮೈಯಲ್ಲಿ ಹುಷಾರ ಇಲ್ಲದಾಗ ತನ್ನ ಮಗಳನ್ನು 'ಜೋಗಣಿ' ಮಾಡುತ್ತೇನೆ ಎಂದು ಹರಕೆಯ ರೂಪದಲ್ಲಿ ಬೇಡಿಕೊಂಡು ಮಗಳು ನೀಲವ್ವಳಿಗೆ ಮನಸಿಲ್ಲವಾದರೂ ಬಲವಂತವಾಗಿ 'ಜೋಗಣಿ' ಮಾಡುತ್ತಾನೆ. ನೀಲವ್ವ ನೊಂದುಕೊಂಡು ಸಾಯುತ್ತಾಳೆ. ಇಂತಹ ಕೆಳವರ್ಗದ ಅಮಾಯಕ ಹೆಣ್ಣು ಮಕ್ಕಳ ಬಾಳು ನಾಶವಾಗುವುದನ್ನು ಈ ಕಾದಂಬರಿಯಲ್ಲಿ ಎಳೆಎಳೆಯಾಗಿ ಗೀತಾ ನಾಗಭೂಷಣರವರು ಚಿತ್ರಿಸಿದ್ದಾರೆ.

ಪ್ರಸ್ತುತ ಭಾರತೀಯ ಸಮಾಜದಲ್ಲಿ ಅನೇಕ ವರ್ಗಗಳು ಯಾವ ರೀತಿ ನಡೆದುಕೊಳ್ಳುತ್ತಿವೆ ಎಂಬ ನೈಜ ಚಿತ್ರಣವನ್ನು ಕಾದಂಬರಿ ನಮ್ಮ ಕಣ್ಣ ಮುಂದೆ ನಡೆಯುತ್ತಿರುವ ಹಾಗೆ ಕಟ್ಟಿಕೊಟ್ಟಿದೆ. ಒಂದು ಹೆಣ್ಣು ಒಂದು ವರ್ಗದಿಂದ ಇನ್ನೊಂದು ವರ್ಗಕ್ಕೆ ಹೇಗೆ ಬಲಿಯಾಗುತ್ತಾಳೆ ಎಂಬುದನ್ನು ಕಾದಂಬರಿಯು ಚಿತ್ರಿಸುತ್ತದೆ.

ಲಿಂಗ :

ಪ್ರಸ್ತುತ ಭಾರತೀಯ ಸಮಾಜದಲ್ಲಿ ಜಾತಿಪದ್ಧತಿಯ ಜತೆಗೆ ಲಿಂಗವು ಒಂದು. ಗೀತಾನಾಗಭೂಷಣರವರ 'ಬದುಕು' ಕಾದಂಬರಿಯಲ್ಲಿ ಮಲ್ಲಪ್ಪ ಜಮಾದಾರನು ಮಲ್ಲವ್ವನನ್ನು ಮದುವೆಯಾಗಿ ಸುಖದಿಂದ ಇದ್ದರೂ ಕೂಡ ಕೊರವರ ಈರಮ್ಮನ ಜೊತೆ ಅನೈತಿಕ ಸಂಬಂಧವನ್ನು ಇಟ್ಟುಕೊಂಡಿರುವುದನ್ನು ಕಾದಂಬರಿಯು ತೋರಿಸಿ ಕೊಡುತ್ತದೆ.

ಲಿಂಗರಾಜ ಮತ್ತು ಕಾಶಮ್ಮ ಪ್ರೀತಿಸಿ ಬೇರೆ ಬೇರೆ ಕಡೆ ಮದುವೆಯಾಗುತ್ತಾರೆ. ಕಾಶಮ್ಮ ಸೋಲ್ಲಾಪುರದ ಮಾರ್ತಾಂಡನ ಜೊತೆ ಮದುವೆಯಾಗಿ ಲಿಂಗರಾಜ ಕಾಶಮ್ಮನನ್ನು ಓಡಿಸಿ ತಂದು ತನ್ನ ತೋಟದ ಮನೆಯಲ್ಲಿ ತಾಳಿ ಕಟ್ಟದೆ ಇರಿಸಿಕೊಳ್ಳುತ್ತಾನೆ. ಮಾರ್ತಾಂಡ ಕಾಶಮ್ಮನನ್ನು ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಾನೆ. ಆದರೆ ಕಾಶಮ್ಮ ಮಾರ್ತಾಂಡನ ಬಾಳನ್ನು ನುಚ್ಚುನೂರಾಗುವಂತೆ ಮಾಡಿ ನಾನಾ ಕಷ್ಟಕ್ಕೆ ಎಡೆಮಾಡಿ ಕೊಡುತ್ತಾಳೆ. ಮಾರ್ತಾಂಡ ಹುಚ್ಚನಂತೆ ಗಡ್ಡ ಬಿಟ್ಟು ಹಾಲಪ್ಪನ ಸಹಾಯದಿಂದ ಕಾಶಿಯನ್ನು ನೋಡಿ ಸುತ್ತು ಹೋಗುತ್ತಾನೆ. ಇಂತಹ ಅಮಾಯಕ ಮಾರ್ತಾಂಡನ ಬಾಳು ಕೊನೆಗೊಳ್ಳುವುದನ್ನು ಕಾದಂಬರಿಯು ಚಿತ್ರಿಸುತ್ತದೆ. "ಗಂಡಗ ಮಾಡಿಕೊಡ್ತೇವಂದ್ರ ಹಳ್ಳಿ ಗಂಡ ನನಗ ಬ್ಯಾಡಂತಂದು ಈಗ ಈ ಶಾರಪಟ್ಟಣದ ಮಿಂಡಗಿಟ್ಕೊಂಡು ಹಾದರ ಮಾಡ್ಕೋತ ನಮ್ಮ ಮಾರೀಗ ಮಸಿ ಬಳೀಲಕ್ಕತ್ತಿದ್ದೇನೇ ಭೋಸಡಿ? ಹಡಸಿ ಹಾದರಗಿತ್ತೀ... ನಿಮ್ಮಪ್ಪಗ ಈಗ ಆ ಸಾವ್ಕಾರ ನನ್ ಹಾಟ್ಯಾ ಯಾಕ ಕರ್ಸ್ಯಾನಂಬೋದು ನಿನಗ

ಗೊತ್ತಾದಾಯೇನಗs ಕಾಶೀ... ಒಂದೇ ನನ್ ಗಂಡನ ಕೂದಲೆಳಗಿ ಧಕಿ ಆಗ್ಬೇಕು... ನೋಡು... ನಿನ್ನ ಜೀಂವಾನೇ ತಗೋತಿನಿ ನಾನೂ... ಆ ಸಾವ್ಕಾರನ ಮಗನ ಜತಿ ಏನು ಚೆಲ್ಲಾಟಾ ನಡಸಿದ್ದೇ ರಂಡೀ?'' ಇಲ್ಲಿ ಕಾಶಮ್ಮ ಮತ್ತು ಲಿಂಗರಾಜ ಪ್ರೀತಿಯ ಸುದ್ದಿ ತಿಳಿದು ಕಾಶಮ್ಮನ ತಾಯಿ ಮಲ್ಲವ್ವ ತನ್ನ ಗಂಡನನ್ನು ಗುರುಲಿಂಗಪ್ಪ ಕರೆಸಿದ ಸುದ್ದಿ ತಿಳಿದು ಕಾಶಿಯನ್ನು ಮನಸ್ಸಿಗೆ ನಾಟುವಂತೆ ಬಯ್ಯುವುದನ್ನು ಈ ಕಾದಂಬರಿಯು ವಿವರಿಸುತ್ತದೆ.

'ಬದುಕು' ಕಾದಂಬರಿಯಲ್ಲಿ ಒಂದು ಕುಟುಂಬದ ಜನರ ಮನಸ್ಸು ಹೇಗೆ ಭಿನ್ನವಾಗಿ ಇರುತ್ತದೆ ಎಂಬುವುದನ್ನು ಗೀತಾ ನಾಗಭೂಷಣರು ಮನಸ್ಸಿಗೆ ನಾಟುವಂತೆ ಚಿತ್ರಿಸಿದ್ದು ಇಲ್ಲಿ ಕಾಣಬಹುದು. ಕಲ್ಯಾಣಿಯ ಮಗ ಸಣ್ಣ ಮಲ್ಲುಗೆ 'ನೀನು ಕೊಲೆಗಡುಕನ ಮಗ' ಎಂದು ಕಾಲೇಜು ಹುಡಗರು ಹೇಳುವುದು ಕೇಳಿ ಕೇಳಿ ಸಾಕಾಗಿ ರೋಸಿಹೋಗಿ ಮುಂದೆ ತಂದೆ ಕಂಡರೆ ಸೇರುವುದಿಲ್ಲ. ಇಂಥವನ ಮಗ ಅನಿಸುವುದೇ ಬೇಡವೆಂದು ತನ್ನ ಪಾಲಿಗೆ ಬಂದ ಆಸ್ತಿಯನ್ನು ತಂಗಿ ಸುಖದೇವಿ ಹೆಸರಿಗೆ ಮಾಡಿ ತನ್ನ ಕೆಲಸ ಮಾಡುವ ಆಫೀಸಿನಲ್ಲಿರುವ ಮರಾಠಿ ಹುಡುಗಿಯ ಜೊತೆ ಪ್ರೇಮ ವಿವಾಹ ಆಗಿ ಮುಂದೆ ಊರಿಗೆ ಬರುವುದು ಬಿಟ್ಟಿದ್ದು ಹೆಚ್ಚೆನಿಸಿದರೂ ಈಗಿನ ಯುವಕರ ಮನಃಸ್ಥಿತಿ ಏನೆಂಬುವುದನ್ನು ಈ ಕಾದಂಬರಿಯು ಬಹಳ ಸೂಕ್ಷ್ಮವಾಗಿ ಚಿತ್ರಿಸುತ್ತದೆ. ಕಲ್ಯಾಣಿ ಜೇಲು ಸೇರಿದಾಗ ಬೆಳ್ಳಿ ಪಡಬಾರದ ಕಷ್ಟಪಟ್ಟು ಜೀವಿಸುತ್ತಾಳೆ. ಇವಳ ಜೊತೆ ಜಾತಿಯಲ್ಲಿ ಮುಸ್ಲಿಂನಾದರೂ ಕೂಡ ಫಾತಾರು ಮತ್ತು ಇವನ ಹೆಂಡತಿ ನಜಮಾ ಪ್ರಾಮಾಣಿಕವಾಗಿ ಬೆಳ್ಳಿಯ ಜೊತೆ ಕೆಲಸ ಮಾಡುತ್ತಾರೆ. ಬೆಳ್ಳಿ ಮೇಲ್ವರ್ಗದ ಶೋಷಣೆಗೆ ಒಳಗಾಗದೆ ತನ್ನ ಗಂಡನಿಗಾಗಿ ಜೀವಿಸುವುದನ್ನು ಈ ಕಾದಂಬರಿಯು ತೋರಿಸಿಕೊಟ್ಟಿದೆ.

ಈ ಕಾದಂಬರಿಯಲ್ಲಿ ಚಿತ್ರಣಗೊಂಡಿರುವ ಮೇಲುವರ್ಗ ಮತ್ತು ಕೆಳವರ್ಗದ ಕುಟುಂಬಗಳು ನೆಲೆಸಿ ಒಂದು ಹೆಣ್ಣು ಒಂದು ಗಂಡು ನಡುವೆ ಪ್ರೀತಿ, ವಿಶ್ವಾಸ, ನಂಬಿಕೆ, ಮೋಸ, ವಂಚನೆ, ಪ್ರಾಮಾಣಿಕತೆ ಯಾವ ರೀತಿ ಇದೆ ಎಂಬುವುದನ್ನು ಗೀತಾ ನಾಗಭೂಷಣ ಅವರು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

3.2. ವಿವಾಹ ಮತ್ತು ಕುಟುಂಬ :

ಭಾರತೀಯ ಸಮಾಜದ ಅನೇಕ ಬಗೆಯ ಜಾತಿಗಳು ತಮ್ಮ ಸಂಪ್ರದಾಯದಂತೆ ವಿವಾಹಗಳು ಜರುಗುತ್ತವೆ. ಈ ದಾಂಪತ್ಯ ಜೀವನದಲ್ಲಿ ಕಷ್ಟಸುಖಗಳು ಇರುವುದನ್ನು ಕಾಣುತ್ತೇವೆ. ಪ್ರಸ್ತುತ 'ಬದುಕು' ಕಾದಂಬರಿಯಲ್ಲಿ ಅನೇಕ ಬಗೆಯ ಜಾತಿಗಳ ದಾಂಪತ್ಯ ಜೀವನದ ಮಾದರಿಗಳನ್ನು ಚಿತ್ರಿಸುತ್ತದೆ. ಒಂದೇ ಜಾತಿಯ ಒಳಗೆ ನಡೆಯುವ ವಿವಾಹದ ಮಾದರಿಯಿರಬಹುದು ಅಥವಾ ಅಂತರ್ಜಾತಿ ವಿವಾಹಗಳಾಗಿರಬಹುದು ಹೀಗೆ ಅನೇಕ ರೀತಿಯ ವಿವಾಹದ ಮಾದರಿಗಳನ್ನು ಕಾದಂಬರಿ ಒಳಗೊಂಡಿದೆ. ಇಲ್ಲಿ ಕಂಡುಬರುವ ಕೆಳರ್ಗದ ದಾಂಪತ್ಯ ಜೀವನದಲ್ಲಿ ಅನೇಕ ಬಗೆಯ ಕಷ್ಟಗಳು, ಸುಖ, ಮೋಸ,

ಪ್ರಾಮಾಣಿಕತೆ ಇವೆಲ್ಲವನ್ನು ಕಾದಂಬರಿ ಎಳೆ ಎಳೆಯಾಗಿ ಕಣ್ಣಿಗೆ ಕಟ್ಟುವಂತೆ ಹಿಡಿದಿಟ್ಟಿದೆ.

ಈ ಕಾದಂಬರಿಯಲ್ಲಿ ಕಂಡುಬರುವ ಜಮಾದಾರ ಮಲ್ಲಪ್ಪ ಮತ್ತು ಮಲ್ಲವ್ವಳ ವಿವಾಹವು ಸಂಪ್ರದಾಯಬದ್ಧ ವಿವಾಹ. ಈ ಕುಟುಂಬದಲ್ಲಿನವರು ಮೊದಲಿಗೆ ಸುಖದಿಂದ ಬಾಳಿ ಕೊನೆಗೆ ಕಷ್ಟಕ್ಕೆ ಈಡಾಗುತ್ತಾರೆ. ಮಲ್ಲಪ್ಪನ ಮನೆಯಲ್ಲಿ ದಿನಾಲು ಮೊಲ, ಚಿಗರೆ, ಕೋಳಿ, ಕುರಿ ಅಂತ ಯಾವುದಾದರೂ ಒಂದು ಖಂಡದ ಅಡುಗೆ ಇರುತ್ತಿತ್ತು. ಮಲ್ಲಪ್ಪನು ಜಮಾದಾರ ಕೆಲಸ ಮಾಡುತ್ತಿರುವುದರಿಂದ ತನ್ನ ಮನೆಯಲ್ಲಿ ಯಾವುದೇ ರೀತಿಯ ಕೊರತೆ ಇದ್ದಿಲ್ಲ. ರಸ್ತೆಯ ಮೇಲೆ ಹೋಗಿ ಬರುವವರ ಸಲಾಂ ಸ್ವೀಕರಿಸುತ್ತಿದ್ದ ಕೆಳವರ್ಗದ ಜನರಲ್ಲಿ ಮಲ್ಲಪ್ಪನ ಕುಟುಂಬವು ಕಣ್ಣಿಗೆ ಕುಕ್ಕುವಂತೆ ಜೀವಿಸಿರುವುದನ್ನು ಕಾದಂಬರಿಯು ಚಿತ್ರಿಸಿದೆ. ಮಲ್ಲಪ್ಪನ ಮಗಳು ಕಾಶಮ್ಮನನ್ನು ಮಾರ್ತಾಂಡನ ಜೊತೆ ವಿವಾಹ ಮಾಡಿದ ನಂತರ ಕಾಶಮ್ಮ ಲಿಂಗರಾಜನ ತೋಟದ ಮನೆಯಲ್ಲಿರುವ ಸುದ್ದಿ ತಿಳಿದು ಈ ಕುಟುಂಬವು ಮನೆಯ ಮರ್ಯಾದೆ ಸಲುವಾಗಿ ಪಡಬಾರದ ಕಷ್ಟ ಪಡುತ್ತದೆ. ಫತರೂ ಜಾತಿಯಲ್ಲಿ ಮುಸ್ಲಿಂನಾದರೂ ಕೂಡ ಮಲ್ಲಪ್ಪನಲ್ಲಿ ಮನೆಯ ಮಗನಂತೆ ಕೆಲಸ ಮಾಡುತ್ತಿದ್ದನು. ಮಲ್ಲಪ್ಪ ಮನೆಯಲ್ಲಿ ಇಬ್ಬರು ಕೆಲಸದಾಳು ಮತ್ತು ಎರಡು ಎತ್ತುಗಳಿದ್ದು ಇವು ಕಾರಹುಣ್ಣಿಮೆಯಲ್ಲಿ ಹೆಸರುಗಳಿಸಿದ್ದವು. ಇತನು ಯಾವುದೇ ಹಬ್ಬ, ಜಾತ್ರೆಗಳು ಮಾಡಿದರೆ ಬೀಗರು ಮತ್ತು ತನ್ನ ಗೆಳೆಯರನ್ನು ಕರೆಸಿ ಆಚರಿಸುತ್ತಿದ್ದನು. ಮಲ್ಲವ್ವ ತನ್ನ ಗಂಡ ಹೇಳಿದ ಹಾಗೆ ಕೇಳುತ್ತಿದ್ದಳು. ಮೆತ್ತನ ಸ್ವಭಾವದವಳಾಗಿದ್ದಳು. ಮಲ್ಲಪ್ಪ ಕೆಳಗೇರಿಯಲ್ಲಿ ಎದೆಯುಬ್ಬಿಸಿ ತಿರುಗಾಡಿ ನೆಲೆಸಿ ಕೊನೆಗೆ ಕಾಶಮ್ಮ ಲಿಂಗರಾಜ ಒಂದಾದ ವಿಷಯ ತಿಳಿದು ಮನೆಯ ಮರ್ಯಾದೆ ಸಲುವಾಗಿ ಹೊಳೆ ಹಾರಿ ಸತ್ತು ಹೋಗುತ್ತಾನೆ. ಇಂತಹ ಎಲ್ಲಾ ಘಟನೆಗಳನ್ನು ಕಾದಂಬರಿಯು ಹೃದಯ ಕಲಕುವಂತೆ ಚಿತ್ರಿಸಿದೆ.

ಹಾಲಪ್ಪ ಮತ್ತು ಶರಣಮ್ಮ ವಿವಾಹದ ಜೀವನವು ವಿಶಿಷ್ಟವಾದದ್ದು. ಹಾಲಪ್ಪ ಗಿರಣಿಯ ಕೆಲಸವನ್ನು ಮಾಡಿ ತನ್ನ ಕುಟುಂಬವನ್ನು ನಡೆಸುತ್ತಿದ್ದನು. ಇವನಿಗೆ ಬೆಳ್ಳಿ ಮತ್ತು ಶಿವು ಎಂಬ ಮಕ್ಕಳಿದ್ದು ಕಲಬುರ್ಗಿಯಲ್ಲಿ ನೆಲೆಸಿರುತ್ತಾರೆ. ತನ್ನ ತವರುಮನೆ ಸುಖದಿಂದಿರಬೇಕೆಂದು ಶರಣಮ್ಮ, ತನ್ನ ಹೆಂಡತಿಯ ತವರು ಮನೆ ಕೆಡಬಾರದೆಂದು ಹಾಲಪ್ಪ ಗಂಡ-ಹೆಂಡತಿ ಇಬ್ಬರೂ ಕಲಬುರ್ಗಿಯಲ್ಲಿದ್ದರೂ ಮೇಲಿಂದ ಮೇಲೆ ಶರಣಮ್ಮನ ತವರು ಮನೆಯಾದ ಶಿವಳ್ಳಿಗೆ ಬಂದು ಹೋಗುವುದು ತಮ್ಮ ಮಗಳು ಬೆಳ್ಳಿಯನ್ನು ಕಲ್ಯಾಣಿಗೆ ಮದುವೆ ಮಾಡಿಕೊಟ್ಟು ಕಣ್ಣಲ್ಲಿ ಕಣ್ಣಿಟ್ಟು ಕಾಪಾಡುವುದನ್ನು ಈ ಕಾದಂಬರಿಯು ಚಿತ್ರಿಸುತ್ತದೆ. ಹಾಲಪ್ಪ ಮತ್ತು ಶರಣಮ್ಮರು ಶಿವಳ್ಳಿಯಲ್ಲಿ ಯಾವುದೇ ಹಬ್ಬ ಜಾತ್ರೆಗಳಿರಲಿ ಹೋಗುತ್ತಿದ್ದರು. ತನ್ನ ಮಗಳು ಕಷ್ಟದಲ್ಲಿದ್ದಾಗ ಮೊಮ್ಮಗನನ್ನು ತಾವೇ ಓದಿಸುತ್ತಾರೆ. ಹಾಲಪ್ಪ ಕಾಶಿಯನ್ನು ತಾನೂ ನೋಡಿದ ಮಾರ್ತಾಂಡನ ಜೊತೆ ವಿವಾಹ ಮಾಡಿಕೊಡುತ್ತಾನೆ. ಹಾಲಪ್ಪನ ದಾಂಪತ್ಯ ಜೀವನದಲ್ಲಿ ಎಷ್ಟು ಕಷ್ಟಗಳು ಬಂದರೂ ಕೂಡ

ಎದುರಿಸಿ ಜೀವನ ಮಾಡುತ್ತಿದ್ದನು. ಹಾಲಪ್ಪ ಮನಸ್ಸಿಗೆ ಬೇಸರವಾದಾಗ ಸೇಂದಿ ಕುಡಿಯುತ್ತಿದ್ದನು. ಮಗ ಶಿವು ಮದುವೆ ಮಾಡುತ್ತೇವೆ ಎಂದಾಗ ಅವನು ಬೇಡ ನಾನು ಸನ್ಯಾಸಿಯಾಗಿ ಬಾಳುತ್ತೇನೆ ಎಂದು ಹೇಳುವುದರ ಮೂಲಕ ಅವರ ಮನಸ್ಸನ್ನು ನೋಯಿಸಿರುತ್ತಾನೆ. ಹಾಲಪ್ಪ ಮತ್ತು ಶರಣಮ್ಮ ಈ ಕಾದಂಬರಿಯಲ್ಲಿ ಸಹಾಯಕ ಪಾತ್ರಗಳಾಗಿ ಕಾಣಿಸಿಕೊಳ್ಳುತ್ತವೆ.

ಕಾಶಮ್ಮ ಮತ್ತು ಮಾರ್ತಾಂಡನ ವಿವಾಹವು ಕಲಬುರ್ಗಿಯ ಶರಣಬಸ್ಸಪ್ಪನ ಗುಡಿಯಲ್ಲಿ ಆಗಿರುತ್ತದೆ. ಮಾರ್ತಾಂಡನ ಮನೆಯ ಕಡೆ ಯಾರೂ ಇಲ್ಲದ ಕಾರಣ ಹಾಲಪ್ಪನೇ ಎರಡು ಕಡೇ ನಿಂತು ಮದುವೆ ಮಾಡಿ ಮಾರ್ತಾಂಡನ ಊರಾದ ಸೋಲಾಪುರಕ್ಕೆ ಕಳಿಸಿಕೊಡುತ್ತಾನೆ. ಮಾರ್ತಾಂಡ ಮೆತ್ತನ ಸ್ವಭಾವದವನು ಕಾಶಮ್ಮ ಹೇಳಿದ ಹಾಗೆ ಕೇಳುತ್ತಿದ್ದನು. ಇವನು ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದನು. ಹೆಂಡತಿಯನ್ನು ಮನೆಯಲ್ಲಿ ಬಿಟ್ಟು ಗಿರಣಿಯ ಕೆಲಸ ಮಾಡಿ ತನ್ನ ಸಂಸಾರವನ್ನು ಸಾಗಿಸುತ್ತಾನೆ. ತನ್ನ ಬದುಕಿನಲ್ಲಿ ಬಡತನವಿದ್ದರು ಕೂಡ ಹೆಂಡತಿಯ ಪ್ರೀತಿಯ ವಿಷಯದಲ್ಲಿ ಶ್ರೀಮಂತಿಕೆಯನ್ನು ತೋರಿಸುತ್ತಾನೆ. ಕಾಶಿ ತನ್ನಕ್ಕನ ಮಗಳಾದ ಬೆಳ್ಳಿ ಮೈನೆರ್ದಾಗ ಗಂಡ ಹೆಂಡತಿ ಜರ ಅಂಚಿನ ಈಚಲು ಕರಂಜಿ ಸೀರೆ, ಒಂದು ಬೆಳ್ಳಿ ಕುಂಕುಮ ಭರಣಿ ತಗೊಂಡು ಕಲಬುರ್ಗಿಗೆ ಹೋಗಿ ಬಂದಿದ್ದರು. ಕಾಶಮ್ಮ ಲಿಂಗರಾಜನ ಪ್ರೀತಿಯನ್ನು ನೆನಪಿಸಿಕೊಂಡು ಒಳಗೊಳಗೆ ಅಳುತ್ತಿದ್ದಳು. ಒಮ್ಮೆ ಘತಾರು ಕಾಶಿಗೆ ಲಿಂಗರಾಜನ ಮದುವೆ ವಿಷಯವನ್ನು ತಿಳಿಸಿದ್ದನು. ಮಲ್ಲಪ್ಪನ ಮನೆಯಲ್ಲಿ ಯಾವುದೇ ಹಬ್ಬ, ಜಾತ್ರೆಗಳು ಆಚರಿಸಿದರೂ ಮಕ್ಕಳನ್ನ ಬಿಟ್ಟು ಆಚರಿಸುತ್ತಿದ್ದಿಲ್ಲ. ಮದುವೆಯಾಗಿ ಎರಡು ವರ್ಷವಾದರೂ ಕೂಡ ಕಾಶಮ್ಮ ಶಿವಳ್ಳಿಗೆ ಬಂದಿರಲಿಲ್ಲ. ಕಾಶಮ್ಮ ತವರು ಮನೆಗೆ ಕಾರಹುಣ್ಣಿವೆಗೆ ಬಂದು ತನ್ನವರೆಲ್ಲರನ್ನು ಮಾತನಾಡಿಸಿ ಕೊನೆಗೆ ಲಿಂಗರಾಜನನ್ನು ಭೇಟಿಯಾಗಿ ಬಂದಿರುತ್ತಾಳೆ. ಮಾರ್ತಾಂಡ ಇಲ್ಲದ ಹೊತ್ತಿನಲ್ಲಿ ಲಿಂಗರಾಜನು ಬಂದು ಕಾಶಿಯನ್ನು ಕರೆದುಕೊಂಡು ಬಂದು ತನ್ನ ಊರ ಹೋರಗಿನ ತೋಟದ ಮನೆಯಲ್ಲಿ ಇರಿಸಿಕೊಂಡಿದ್ದನು. ಮಾರ್ತಾಂಡನಿಗೆ ಈ ವಿಷಯ ತಿಳಿದು ಬಿಕ್ಕಿ ಬಿಕ್ಕಿ ಅತ್ತನು. ಇವನು ಪಡಬಾರದ ಕಷ್ಟ ಪಟ್ಟು ಕೊನೆಗೆ ಹುಚ್ಚನಂತೆ ಗಡ್ಡ ಬಿಟ್ಟು ಹಾಲಪ್ಪನ ಸಹಾಯದಿಂದ ಕಾಶಿಯನ್ನು ನೋಡಿ ಹಳ್ಳದ ದಂಡೆಗೆ ಹೋಗಿ ಪ್ರಾಣ ಬಿಡುತ್ತಾನೆ. ಈ ಕುಟುಂಬದಲ್ಲಿ ಮಾರ್ತಾಂಡನಂತಹ ಅಮಾಯಕನ ಬಾಳು ಹೇಗೆ ಕೊನೆಗೊಂಡಿತು ಎಂಬುದನ್ನು ಕಾದಂಬರಿಯು ಚಿತ್ರಿಸುತ್ತದೆ.

ಮಲ್ಲಪ್ಪ ಜಮಾದಾರನ ಮಗನಾದ ಕಲ್ಯಾಣಿ ಮತ್ತು ಬೆಳ್ಳಿ ಇವರ ದಾಂಪತ್ಯ ಜೀವನವು ಅನೇಕ ಕಷ್ಟಕ್ಕೆ ಈಡಾಗುವುದನ್ನು ಕಾದಂಬರಿಯು ಎಳೆ ಎಳೆಯಾಗಿ ಬಿಚ್ಚಿಟ್ಟಿದೆ. ತಂದೆ ತಾಯಿಗಳನ್ನು ಕಳೆದುಕೊಂಡು ಅಕ್ಕ ಕಾಶಿ ಮತ್ತು ಲಿಂಗರಾಜ ಒಂದಾದ ವಿಷಯ ತಿಳಿದು ತಲೆಕಟ್ಟು ಹೋದ ಸಂದರ್ಭದಲ್ಲಿ ಒಂದು ಸಂಜೆ ಕುಡಿಯಲಿಕ್ಕೆ ಕುಂತಾಗ ತನ್ನಕ್ಕ ಕಾಶಿ ವಿಷಯದಲ್ಲಿ ಜಂಬಗಿ ಮುಕುಡಪ್ಪ ಆಡಿದ ಮಾತು ಕೇಳಿ ಸಿಟ್ಟಿಗೆದ್ದು

ಅವನಿಗೆ ದಬ್ಬಿಸಿದ್ದುದಕ್ಕೆ ಅವನ ತಲೆಗೆ ಕಲ್ಲು ಬಡಿದು ಸತ್ತುದಕ್ಕೆ ಹದಿನಾಲ್ಕು ವರ್ಷ ಜೈಲು ಸೇರಿದಾಗ ಈ ಕುಟುಂಬವು ನಾನಾ ಕಷ್ಟಕ್ಕೆ ಈಡಾಗುತ್ತದೆ. ಕಲ್ಯಾಣಿಗೆ ಒಂದು ಗಂಡು ಮತ್ತು ಹೆಣ್ಣು ಇಬ್ಬರೂ ಮಕ್ಕಳಿರುತ್ತಾರೆ. ಗಂಡ ಜೈಲು ಸೇರಿದಾಗ ಬೆಳ್ಳಿ ಹೊಲ ತೋಟಕ್ಕೆ ಎತ್ತಿನಂತೆ ದುಡಿಯುತ್ತ ಮೇಲ್ವಗನದ ಇರಪಾಕ್ಷಪ್ಪಗೌಡರಂತಹ ಕಾಟದಿಂದ ಉಳಕೊಂಡು ಗಂಡನನ್ನು ನೆನೆಯುತ್ತ ಮಕ್ಕಳನ್ನು ಬೆಳೆಸುತ್ತ ಸಂಸಾರದ ಬಂಡಿಯನ್ನು ಸಾಗಿಸುತ್ತಾಳೆ. ಈ ಕುಟುಂಬವು ಕಷ್ಟದಲ್ಲಿದ್ದಾಗ ಬೆಳ್ಳಿಯ ಜೊತೆ ಫತರೂ ಮತ್ತು ಇವನ ಹೆಂಡತಿ ನಜಮಾ ಪ್ರಾಮಾಣಿಕವಾಗಿ ಕೆಲಸ ಮಾಡುತ್ತ ಬೆಳ್ಳಿಗೆ ಧೈರ್ಯ ತುಂಬುತ್ತಾರೆ. ಕಾಶಮ್ಮ ನನ್ನ ಕಡೆಯಿಂದ ತವರು ಮನೆ ನಾಶವಾಯಿತು ಎಂದು ತನ್ನ ತಮ್ಮ ಜೈಲು ಸೇರಿದಾಗ ಹಣದ ಸಹಾಯ ಮಾಡುತ್ತಾಳೆ. ಬೆಳ್ಳಿ ಮಗನನ್ನು ತನ್ನ ತವರು ಮನೆಯಲ್ಲಿ ಓದಲು ಬಿಟ್ಟಿರುತ್ತಾಳೆ. ಕಲ್ಯಾಣಿ ಜೈಲಿನಿಂದ ಹೊರಗೆ ಬಂದ ನಂತರ ಗಂಡ ಹೆಂಡತಿ ಇಬ್ಬರು ಶ್ರೀಶೈಲ ಮಲ್ಲಯ್ಯನ ದರ್ಶನ ಪಡೆದುಕೊಂಡು ವಾಪಸ್ಸು ಬರುವಾಗ ಅವರ ಬಸ್ಸು ಎಕ್ಸಿಡೆಂಟಾಗಿ ಇಬ್ಬರೂ ಮಲ್ಲಯ್ಯನ ಪಾದ ಸೇರಿಕೊಂಡಿದ್ದರು. ಇವರು ಹೇಗೆ ಕಷ್ಟದ ಜೀವನವನ್ನು ನಡೆಸಿದರು ಎಂಬುದನ್ನು ಕಾದಂಬರಿಯು ತೋರಿಸಿಕೊಟ್ಟಿದೆ.

ಫತರೂ ಮತ್ತು ನಜಮಾರ ವಿವಾಹ ಮುಸ್ಲಿಂ ಸಂಪ್ರದಾಯದಂತೆ ಆಗುತ್ತದೆ. ಇವರ ದಾಂಪತ್ಯ ಜೀವನವು ಕಾದಂಬರಿಯಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ. ಫತಾರು ಮಲ್ಲಪ್ಪನ ಮನೆಯಲ್ಲಿ ಮನೆಯ ಮಗನಂತೆ ಇರುತ್ತಾನೆ. ಮಲ್ಲಪ್ಪನ ಕುಟುಂಬದಲ್ಲಿ ಕಷ್ಟ ಸುಖಗಳನ್ನು ಹಂಚಿಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾನೆ. ಫತಾರು ಮತ್ತು ನಜಮಾ ಇಬ್ಬರೂ ಮಲ್ಲಪ್ಪನ ಮನೆಯ ಮುಂದಿನ ಕೊಲ್ಲಿಯಲ್ಲಿ ಜೀವನ ನಡೆಸುತ್ತಿದ್ದರು. ಮಲ್ಲಪ್ಪ ಸತ್ತು ಹೋದ ಮೇಲೆ ಈತನ ಮಗ ಕಲ್ಯಾಣಿಯ ಕುಟುಂಬವು ನಾನಾ ಕಷ್ಟಕ್ಕೆ ಈಡಾಗುತ್ತದೆ. ಕಲ್ಯಾಣಿ ಜೈಲು ಸೇರಿದಾಗ ಬೆಳ್ಳಿಯು ಹೋದ ತೋಟದಲ್ಲಿ ದುಡಿಯುತ್ತಿದ್ದಾಗ ಫತರೂ ಮತ್ತು ನಜಮಾ ಇಬ್ಬರು ಬೆಳ್ಳಿ ಜೊತೆ ಕೆಲಸ ಮಾಡುತ್ತಾರೆ. ಫತರೂ ಮತ್ತು ನಜಮಾ ಇಡೀ ಕಾದಂಬರಿಯಲ್ಲಿಯೇ ಗಮನ ಸೆಳೆಯುವ ಪಾತ್ರಗಳಾಗಿವೆ.

ಲಿಂಗರಾಜ ಮತ್ತು ನೀಲಮ್ಮರ ದಾಂಪತ್ಯ ಜೀವನದಲ್ಲಿ ಲಿಂಗರಾಜ ಸುಖವಾಗಿ ನೆಲೆಸಿದರೆ ನೀಲಮ್ಮ ಸುಖವಾಗಿ ಬಾಳಲಾಗುವುದಿಲ್ಲ. ಲಿಂಗರಾಜ ಮತ್ತು ಕಾಶಮ್ಮ ಪ್ರೀತಿಸಿ ದೂರವಾಗಿರುತ್ತಾರೆ. ಲಿಂಗರಾಜನ ತಂದೆ ಗುರುಲಿಂಗಪ್ಪ ಸತ್ತ ಬಳಿಕ ಮನೆಯ ಅಧಿಕಾರ ತನ್ನ ಕೈಗೆ ಬಂದಾಗ ಲಿಂಗರಾಜನು ಕಾಶಿಯನ್ನು ತನ್ನ ಊರ ಹೊರಗಿನ ತೋಟದ ಮನೆಯಲ್ಲಿ ತಾಳಿ ಕಟ್ಟದೆ ಇರಿಸಿಕೊಳ್ಳುತ್ತಾನೆ. ತಪ್ಪು ಮಾಡದೇ ಇದ್ದರೂ ಲಿಂಗರಾಜನ ತಪ್ಪಿಗೆ ತನಗೆ ತಾನೇ ಶಿಕ್ಷೆಯಾಗಿ ಜೀವನ ಪರ್ಯಂತ ಗಂಡನಿದ್ದೂ ವಿಧವೆಯಂತೆ ನೀಲಮ್ಮ ಬದುಕಬೇಕಾಗುತ್ತದೆ. ಬದುಕಿನಲ್ಲಿ ಸಂತೋಷವನ್ನು ಕಳೆದುಕೊಂಡು ಹೆಣ್ಣು ಜೀವ ದಾಂಪತ್ಯದ ಜೀವನದಲ್ಲಿ ದೂರ ಉಳಿಯಬೇಕಾಗುತ್ತದೆ. ನೀಲಮ್ಮ ಪ್ರತಿಭಟಿಸಲಾಗದೆ ಒಂಡಿಯಾಗಿಯೇ

ಕೊನೆಯವರೆಗೂ ಜೀವನ ಸಾಗಿಸುತ್ತಾಳೆ. ಕಾದಂಬರಿಯು ಈ ಕುಟುಂಬದಲ್ಲಿ ಒಬ್ಬರು ಸುಖ ಇನ್ನೊಬ್ಬರು ದುಃಖ ಪಡುವುದನ್ನು ಚಿತ್ರಿಸುತ್ತದೆ.

ಕಲ್ಯಾಣಿಯ ಮಗ ಸಣ್ಣಮಲ್ಲು ಮರಾಠಿ ಹುಡಗಿಯ ಜೊತೆ ಪ್ರೇಮ ವಿವಾಹವನ್ನು ಮಾಡಿಕೊಂಡಿರುತ್ತಾನೆ. ನೀನು ಕೊಲೆಗಡುಕನ ಮಗ ಎಂದು ಕಾಲೇಜು ಹುಡುಗರು ಹೇಳುವುದು ಕೇಳಿ ಸಾಕಾಗಿತ್ತು ಮುಂದೆ ತಂದೆ ಕಂಡರೆ ಸೇರುವುದಿಲ್ಲ. ಇಂಥವರ ಮಗನಾಗಿ ಇರುವುದು ಬೇಡವೆಂದು ತನ್ನ ಪಾಲಿಗಿದ್ದ ಆಸ್ತಿಯನ್ನು ತಂಗಿ ಸುಖದೇವಿ ಹೆಸರಿಗೆ ಮಾಡಿ ಮುಂದೆ ಊರಿಗೆ ಬರುವುದನ್ನು ಬಿಟ್ಟು ಬಿಡುತ್ತಾನೆ. ಕಾದಂಬರಿಯು ಈಗಿನ ಯುವಕರ ಮನಃಸ್ಥಿತಿ ಏನೆಂಬುದನ್ನು ಎತ್ತಿತೋರಿಸುತ್ತದೆ.

ಹೀಗೆ ಈ ಕಾದಂಬರಿಯಲ್ಲಿ ಅನೇಕ ಬಗೆಯ ದಾಂಪತ್ಯ ಜೀವನಗಳ ಚಿತ್ರಣವಿದೆ. ಒಂದೊಂದು ದಾಂಪತ್ಯ ಜೀವನದಲ್ಲಿ ಕಷ್ಟ, ಸುಖ, ಪ್ರೀತಿ, ವಿಶ್ವಾಸ ಇತ್ಯಾದಿ ಇರುವುದನ್ನು ಕಾದಂಬರಿಯು ತೋರಿಸಿಕೊಟ್ಟಿದೆ.

3.3 ಧರ್ಮ :

ಭಾರತದ ಕಲೆಗಳಲ್ಲಿ ಒಂದಲ್ಲಾ ಒಂದು ಬಗೆಯಲ್ಲಿ ಧರ್ಮವು ಸೇರಿಕೊಂಡಿದೆ. ನಾವು ಒಂದಲ್ಲಾ ಒಂದು ಧರ್ಮಕ್ಕೆ ಸೇರಿದವರಾಗಿದ್ದೇವೆ. ಹೀಗಿರುವುದು ನಮ್ಮ ಸ್ವತಃ ಆಯ್ಕೆಯಲ್ಲ. ಅದು ಆಕಸ್ಮಿಕವಾಗಿದೆ. ನಿರ್ದಿಷ್ಟ ಮತಧರ್ಮದ ಕುಟುಂಬವೊಂದರಲ್ಲಿ ಹುಟ್ಟಿದ ಕಾರಣದಿಂದಲೇ ನಮಗೆ ಆ ಧರ್ಮದ ಆಚಾರ-ವಿಚಾರ ನಂಬಿಕೆಗಳ ಪರಂಪರೆಯೊಳಗೆ ಜೀವಿಸಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಅದರ ವಿರುದ್ಧ ಹೋರಾಡಿ ಧರ್ಮದ ಹೊರಗೆ ಬಂದಾಗಲೂ ಅದು ಬೇರೆ ಬೇರೆ ಬಗೆಯಲ್ಲಿ ನಮಗೆ ಅಂಟಿಕೊಂಡೇ ಇರುತ್ತದೆ. ಮಹತ್ವದ ಸಂಗತಿಯೆಂದರೆ, ನಾವು ಯಾವುದಾದರೂ ಒಂದು ಧರ್ಮಕ್ಕೆ ಸೇರಿದವರಾಗಿ ಇರುವುದಲ್ಲ. ಆ ಧರ್ಮದೊಳಗಿದ್ದು ಅದರ ಬಗ್ಗೆ ವಿಮರ್ಶಾತ್ಮಕ ನಿಲುವನ್ನು ತಾಳುವುದು. ಅದರ ಕೇಡನ್ನು ಟೀಕಿಸುವುದು. ಅದರ ಒಳಿತನ್ನು ಮೆಚ್ಚುವುದು. ಅದರಿಂದ ಹುಟ್ಟುವ ಮನುಷ್ಯ ವಿರೋಧಿ ಚಿಂತನೆಗಳನ್ನು ನಿರಾಕರಿಸುವುದು.

ಈ ಹಿನ್ನೆಲೆಯಲ್ಲಿ 'ಬದುಕು' ಕಾದಂಬರಿಯಲ್ಲಿ ಬರುವ ಜನ ಸಮುದಾಯಗಳ ಒಂದಲ್ಲಾ ಒಂದು ಧರ್ಮಕ್ಕೆ ಸೇರಿದವರಾಗಿರುವರು. ಹಲವಾರು ಜಾತಿ ಸಮುದಾಯಗಳ ಹಿಂದೂ ಧರ್ಮವು ಇಲ್ಲಿದೆ. ಇಸ್ಲಾಂ ಧರ್ಮಕ್ಕೆ ಸೇರಿದ ಮುಸ್ಲಿಂ ಜನರು ಇಲ್ಲಿದ್ದಾರೆ. ಕಾದಂಬರಿಯು ಮುಖ್ಯವಾಗಿ ಶಿವಳ್ಳಿಯ ಕೆಳವರ್ಗ ಜನರ ಜೀವನವನ್ನು ಒಳಗೊಂಡಿದೆ. ಇಲ್ಲಿ ಕಷ್ಟ, ಸುಖ, ಮೋಸ, ವಂಚನೆ, ಪ್ರಾಮಾಣಿಕತೆ ಇವೆಲ್ಲವು ಒಳಗೊಂಡಿವೆ.

ಮಲ್ಲಪ್ಪ ಜಮಾದಾರನು ಹಿಂದೂ ಧರ್ಮದ ಕೆಳ ಜಾತಿಯವನಾಗಿದ್ದು ಇವನ ಕುಟುಂಬದ ಜೀವನವು ಸುಖ ಸಂತೋಷಗಳಿಂದ ನೆಲೆಸಿ ಕೊನೆಗೆ ನಾನಾ ಕಷ್ಟಗಳನ್ನು ಅನುಭವಿಸುತ್ತದೆ. ಮಲ್ಲಪ್ಪನಿಗೆ

ಹೊಲದಲ್ಲಿ ಒಳ್ಳೆಯ ಬೆಳೆ ಸಿಗುವ ಕಾರಣ ಕೆಲದಿನ ಸುಖವಾಗಿ ಬಾಳುತ್ತಾರೆ. ಈತನು ಕೆಳಗೇರಿಯಲ್ಲಿ ತುಂಬಾ ಹೆಸರು ಗಳಿಸಿ ದಾರಿಯಲ್ಲಿ ಹೋಗುವವರಿಂದ ಸಲಾಂ ಪಡಿಯುತ್ತಿದ್ದ. ಈತನು ಯಾವುದೇ ಹಬ್ಬಗಳನ್ನು ಆಚರಿಸಿದರೆ ಎಲ್ಲರನ್ನು ಕರೆದು ಸಂತೋಷದಿಂದ ಮಾಡುತ್ತಿದ್ದನು. ಈತನ ಹೆಂಡತಿ ಮಲ್ಲವ್ವ ಮೆತ್ತನ ಸ್ವಭಾವದವಳಾಗಿದ್ದಳು. ಈತನಿಗೆ ಮೂರು ಮಕ್ಕಳಿದ್ದು ಸುಖವಾಗಿ ಜೀವನ ನಡೆಸುತ್ತಿದ್ದನು. ಮಗಳು ಕಾಶಮ್ಮ ಮತ್ತು ಲಿಂಗರಾಜ ಪ್ರೀತಿಸಿದ ವಿಷಯ ತಿಳಿದು ಮಲ್ಲಪ್ಪ ಕಾಶಮ್ಮನನ್ನು ಮಾರ್ತಾಂಡನ ಜೊತೆ ವಿವಾಹ ಮಾಡಿಕೊಡುತ್ತಾನೆ. ಆದರೆ ಕಾಶಮ್ಮ ಗಂಡನನ್ನು ಬಿಟ್ಟು ಲಿಂಗರಾಜನ ಜೊತೆ ಸೇರಿದ ವಿಷಯ ತಿಳಿದು ಮನೆಯ ಮರ್ಯಾದೆ ಸಲುವಾಗಿ ಸತ್ತು ಹೋಗುತ್ತಾನೆ. ಆಗ ಈ ಕುಟುಂಬವು ನಾನಾ ಕಷ್ಟಕ್ಕೆ ಈಡಾಗುವುದನ್ನು ಕಾದಂಬರಿಯು ಚಿತ್ರಿಸಿದೆ. ಮಲ್ಲಪ್ಪನ ಮಗ ಕಲ್ಯಾಣಿ ಮತ್ತು ಮೊಮ್ಮಗಳು ಬೆಳ್ಳಿಯರ ದಾಂಪತ್ಯ ಜೀವನವು ಅನನ್ಯವಾದದ್ದು. ಕಲ್ಯಾಣಿ ಜೈಲು ಸೇರಿದಾಗ ಬೆಳ್ಳಿ ಪಡಬಾರದ ಕಷ್ಟ ಪಡುತ್ತಾಳೆ. ಗಂಡನನ್ನು ನೆನೆಯುತ್ತ ಹೊಲದಲ್ಲಿ ದುಡಿಯುತ್ತ ಮೇಲು ಜಾತಿಯವರ ಶೋಷಣೆಗೆ ಒಳಗಾಗದೆ ಸಂಸಾರವನ್ನು ಸಾಗಿಸುತ್ತಾಳೆ. ಕಾದಂಬರಿಯಲ್ಲಿ ಇವರ ಕುಟುಂಬವು ಯಾವ ರೀತಿಯ ನೋವು-ನಲಿವುಗಳನ್ನು ಅನುಭವಿಸಿದೆ ಎಂಬುದನ್ನು ಚಿತ್ರಿಸಿದೆ.

ಹಿಂದು ಧರ್ಮದಲ್ಲಿ ಅನೇಕ ಬಗೆಯ ಜಾತಿಗಳಿರುತ್ತವೆ. ಇಲ್ಲಿ ಮೇಲು ಜಾತಿಯ ಲಿಂಗರಾಜ ಮತ್ತು ಕೆಳಜಾತಿಯ ಕಾಶಮ್ಮ ಪ್ರೀತಿಸಿ ಬೇರೆ ಬೇರೆ ಕಡೆ ಮದುವೆಯಾಗಿ ಮತ್ತೆ ಲಿಂಗರಾಜನು ಕಾಶಮ್ಮನನ್ನು ಗಂಡನ ಮನೆಯಿಂದ ಕರೆತಂದು ತನ್ನ ತೋಟದ ಹೊಲದಲ್ಲಿ ತಾಳಿ ಕಟ್ಟದೆ ರಂಡಿಯಂತೆ ಇರಿಸುತ್ತಾನೆ. ಇಲ್ಲಿ ಒಂದು ಧರ್ಮದಲ್ಲಿ ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಸಂಬಂಧ ಹೇಗೆ ಇದೆ ಎಂಬುದನ್ನು ಕಾದಂಬರಿಯು ಬಿಚ್ಚಿಟ್ಟಿದೆ.

'ಬದುಕು' ಕಾದಂಬರಿಯಲ್ಲಿ ಮುಸ್ಲಿಂ ಸಮುದಾಯದ ಕೆಲವೇ ಜನರ ಬದುಕನ್ನು ಒಳಗೊಂಡಿದೆ. ಸುಲ್ತಾನಬೀಗೆ ಹಾವು ಕಚ್ಚಿ ಸಾಯುವ ಸಂದರ್ಭದಲ್ಲಿ ಮಗ ಫತರೂನನ್ನು ಮಲ್ಲಪ್ಪ ಜಮಾದಾರನ ಕೈಗೊಪ್ಪಿಸಿ ಸತ್ತು ಹೋಗಿರುತ್ತಾಳೆ. ಫತಾರು ಜಾತಿಯಲ್ಲಿ ಮುಸ್ಲಿಂನಾದರೂ ಕೂಡ ಕೆಳಜಾತಿಯ ಮಲ್ಲಪ್ಪನ ಮನೆಯಲ್ಲಿ ಮನೆಯ ಮಗನಂತೆ ಪ್ರಾಮಾಣಿಕವಾಗಿ ನೆಲೆಸುತ್ತಾನೆ. ಮಲ್ಲಪ್ಪನ ಮನೆಯಲ್ಲಿ ಕಷ್ಟ ಸುಖಗಳನ್ನು ಸರಿಸಮನಾಗಿ ಹಂಚಿಕೊಳ್ಳುತ್ತಾನೆ. ಮಲ್ಲಪ್ಪನ ಮಗ ಕಲ್ಯಾಣಿಯು ಫತರೂನ ಜೊತೆ ನಜಮಾಳೊಂದಿಗೆ ವಿವಾಹ ಮಾಡಿಸುತ್ತಾನೆ. ಮಲ್ಲಪ್ಪನ ಮನೆಯಲ್ಲಿ ಯಾವುದೇ ಕಾರ್ಯಗಳು ನಡೆಯಲಿ ಎಲ್ಲಾರು ಒಂದು ಕಡೆ ಸೇರಿ ಮಾಡುತ್ತಿದ್ದರು. ಕಲ್ಯಾಣಿಯು ಜೈಲು ಸೇರಿದಾಗ ಬೆಳ್ಳಿ ಹೊಲದಲ್ಲಿ ಒಬ್ಬಳೇ ದುಡಿಯುತ್ತಿದ್ದಾಗ ಫತರೂ ಮತ್ತು ನಜಮಾ ಇಬ್ಬರೂ ಬೆಳ್ಳಿಯ ಜೊತೆ ಕೆಲಸ ಮಾಡಿ ಅವಳಿಗೆ ಧೈರ್ಯ ತುಂಬುತ್ತಾರೆ. ಮಲ್ಲಪ್ಪನ ಕುಟುಂಬದುದ್ದಕ್ಕೂ ಫತರೂ ಮತ್ತು ನಜಮಾ ಕೆಲಸ ಮಾಡಿ ಗಮನ ಸೆಳೆಯುವ ಪಾತ್ರಗಳಾಗಿವೆ.

ಈ ಕಾದಂಬರಿಯಲ್ಲಿ ಹಿಂದೂ ಮತ್ತು ಮುಸ್ಲಿಂ ಧರ್ಮ ಸಮುದಾಯಗಳ ನಡುವೆ ಭಾವನಾತ್ಮಕ ಸಂಬಂಧ ಹೇಗೆ ಬೆಳೆದಿದೆ ಎಂಬುದನ್ನು ತೋರಿಸಿಕೊಟ್ಟಿದೆ.

ಈ ಕಾದಂಬರಿಯಲ್ಲಿ ತುಳಜಾ 'ಜೋಗಣಿ'ಯಾಗಿರುತ್ತಾಳೆ. ಆದರೆ ಅವಳು ಕೊನೆಯವರೆಗೆ ವಿಧವೆಯಾಗಿ ಬಾಳಬಾರದು ಎಂದು ಹುಸೇನಪ್ಪನ ಜೊತೆ ವಿವಾಹ ಮಾಡಿಕೊಂಡಿರುತ್ತಾಳೆ. ಆಗ ಕೆಳಜಾತಿಗೆ ಸೇರಿದ ತುಳಜಾ ತಂದೆ ಪರಪ್ಪನನ್ನು ಕುಲದಿಂದ ಹೊರ ಹಾಕಬೇಕೆಂದು ಆ ಊರಿನ ಪಂಚಾಯತಿಯು ತೀರ್ಮಾನಿಸಿದಾಗ ತುಳಜಾ ಆ ಊರು ಬಿಟ್ಟು ತನ್ನ ಗಂಡನ ಊರಿಗೆ ಕರೆದುಕೊಂಡು ಹೋಗುವ ಪ್ರತಿಭಟನೆಯನ್ನು ಅಲ್ಲಿ ಇರುವ ಸ್ಥಿತಿವಂತ, ಪ್ರಜ್ಞಾವಂತ ಮನಸ್ಸುಗಳು ಖಂಡಿತಾ ಸ್ವಾಗತಿಸುತ್ತವೆ. ಇಂತಹ ವೈಚಾರಿಕ ವಿಚಾರಗಳು ಕಾದಂಬರಿಯಲ್ಲಿ ಅನೇಕ ಕಡೆ ನುಸುಳುತ್ತವೆ.

ಈ ಕಾದಂಬರಿಯಲ್ಲಿ ಹಿಂದೂ ಮತ್ತು ಮುಸ್ಲಿಂ ಧರ್ಮಗಳ ಸಂಬಂಧ ಮತ್ತು ಒಂದು ಧರ್ಮದಲ್ಲಿ ಬರುವಂತಹ ಕೆಳಜಾತಿಯ ಜನರ ಜೀವನ ವಿಧಾನ ಹೇಗಿದೆ ಎಂಬುದನ್ನು 'ಬದುಕು' ಕಾದಂಬರಿಯು ಪರಿಣಾಮಕಾರಿಯಾಗಿ ಚಿತ್ರಿಸಿದೆ.

3.4 ಹಬ್ಬ ಮತ್ತು ಜಾತ್ರೆಗಳು :

ಭಾರತೀಯ ಸಮಾಜದಲ್ಲಿ ಅನೇಕ ಬಗೆಯ ಹಬ್ಬಗಳು ಇರುವುದನ್ನು ಕಾಣುತ್ತೇವೆ. ಹಬ್ಬ ಎಲ್ಲರಿಗೂ ಸಂತೋಷವನ್ನುಂಟು ಮಾಡುತ್ತದೆ. ಪ್ರಸ್ತುತ 'ಬದುಕು' ಕಾದಂಬರಿಯಲ್ಲಿ ಅನೇಕ ಬಗೆಯ ಹಬ್ಬಗಳು ಚಿತ್ರಣಗೊಂಡಿರುವುದನ್ನು ಕಾಣಬಹುದು.

ಶಿವಳ್ಳಿಯಲ್ಲಿ ಶಿವರಾತ್ರಿ ಹಬ್ಬದಿಂದ ಯುಗಾದಿ ಹಬ್ಬದವರೆಗೆ ಹೊಲಗಳಲ್ಲಿ ರಾಶಿ ಮಾಡೋ ಸಂಭ್ರಮ ಇರುತ್ತದೆ. ಮಲ್ಲಪ್ಪ ಜಮಾದಾರನ ಹೊಲದ ಜ್ವಾಳದ ರಾಶಿ ನಡೆಯಬೇಕಾದರೆ ಕೆಳಗೇರಿಯಲ್ಲಿ ವಿಶೇಷವಾಗಿ ಕಾಣುತ್ತಿತ್ತು. ಈತ ಶಿವರಾತ್ರಿ ಹಬ್ಬದ ದಿನನೇ ಜ್ವಾಳಾ ಕೊಯ್ಯೋದಕ್ಕೆ ಶುರು ಮಾಡಿಸುತ್ತಿದ್ದ. ಎಲ್ಲ ಹೊಲದಾಗಿನ ಜ್ವಾಳದ ದಂಟು ಕೊಯ್ದು ಹೊರೆ ಮಾಡಿ ತಂದು ತ್ವಾಟಕ್ಕೆ ಅಂಟಿಕೊಂಡಿರುವ ಲಕ್ಷ್ಮಿ ಗುಡಿಯ ಹೊಲದಾಗ ಹಾಕಿ ಖಣಾ ತಯಾರು ಮಾಡುತ್ತಾರೆ. ಮಲ್ಲಪ್ಪ ಜಮಾದಾರನ ಹೊಲದ ರಾಶಿ ಅಂದ್ರೆ ಊರಾಗಿನ ಕೆಳಗೇರಿ ಮಂದಿಗೆಲ್ಲಾ ದೊಡ್ಡ ಸುಗ್ಗಿ. ದೊಡ್ಡ ಹೊಲ್ಯಾರು, ಸಮಗಾರು, ಹಜಾಮರು, ಅಗಸರು, ಫಕೀರರು, ಮುಲ್ಲಾಗೊಳು, ಜೋಗಣೇರು ಅಂತ ಎಲ್ಲಾ ಮಂದಿ ಸೇರುತ್ತಿದ್ದರು. ಹಂತಿ ಮಾಡೋ ರಾತ್ರಿ ಮಲ್ಲಪ್ಪನ ಹೊಲದಲ್ಲಿ ಹಬ್ಬದ ಸಂಭ್ರಮ ಇದ್ದ ಹಾಗೆ ಇರುತ್ತಿತ್ತು. ಅವತ್ತೆಲ್ಲಾ ಹಗಲತ್ತು ಹೊಲದಾಗಿನ ಲಕ್ಷ್ಮಿ ಗುಡಿ ಹೊಸ್ತಿಲಕೊಂದು ಕುರಿ ಮತ್ತು 'ಖಣ'ಕ್ಕೊಂದು ಕುರಿ ಅಂತ ಜೋಡಕುರಿಗಳನ್ನು ಬಲಿಕೊಟ್ಟು ಊರಿನ ಕೆಳಗೇರಿ ಮಂದಿಗೆಲ್ಲ ಖಂಡದ ಪಲ್ಯಾ, ಬಿಳಿಜ್ವಾಳದ ರೊಟ್ಟಿ, ಎಲ್ಲಾ ತರಹದ ಅಡಿಗೆ ಮಾಡಿಸಿ ಊಟ ಹಾಕಿ ಹೆಸರುಗಳಿಸುತ್ತಾನೆ. ರಾತ್ರಿ ಕಣದಲ್ಲಿ ಹಂತಿ ಮಾಡುವ ಸಂದರ್ಭದಲ್ಲಿ ಹಂತಿ

ಹಾಡುಗಳನ್ನು ಹಾಡುತ್ತಿದ್ದರು. ಕಾದಂಬರಿಯಲ್ಲಿ ಮಲ್ಲಪ್ಪ ಜಮಾದಾರನ ಹೊಲದ ರಾಶಿ ಬಗ್ಗೆ ಒಂದು ಸಣ್ಣ ಹಬ್ಬ ನಡೆಯುವ ಹಾಗೆ ಗೀತಾ ನಾಗಭೂಷರವರು ಚಿತ್ರಿಸಿದ್ದಾರೆ.

'ಬದುಕು' ಕಾದಂಬರಿಯಲ್ಲಿ ಉತ್ತರ ಕರ್ನಾಟಕದ ಎಲ್ಲ ಹಳ್ಳಿಗಳಂತೆ ಶಿವಳ್ಳಿಯಲ್ಲಿ 'ಕಾರ ಹುಣ್ಣಿಮೆ' ಹಬ್ಬಕ್ಕೆ ಎಲ್ಲಿಲ್ಲದ ಉತ್ಸಾಹ. ಇಲ್ಲಿ ನೆಲೆಸಿದ ಎಲ್ಲಾ ರೈತರು ಎತ್ತುಗಳಿಗೆ ಬಣ್ಣ ಮತ್ತು ವಾರ್ನೀಸು ಹಚ್ಚಿ ಸಿಂಗರಿಸಿದರು. ಪ್ರತಿ ವರ್ಷವೂ ಚನ್ನಬಸ್ಸಪ್ಪ ಗೌಡರ ಮನೆಯಿಂದ ಎತ್ತುಗಳ ಮೆರವಣಿಗೆ ನಡೆಯುತ್ತಿತ್ತು. ಎತ್ತುಗಳನ್ನು ಗೌಡರ ಆಳುಗಳು ಮೆರವಣಿಗೆಗೆ ಹಿಡಿದುಕೊಂಡು ಬಂದರು. ಈ ಎತ್ತುಗಳು ಸೊಕ್ಕಿನಿಂದ ಎಲ್ಲಕ್ಕಿಂತ ಮುಂದೆ ನಡೆದಾಗ ಮದುವೆಯ ಮೆರವಣಿಗೆಯನ್ನೇ ಕಂಡಂತಾಗುತ್ತಿತ್ತು. ಈ ಎತ್ತುಗಳ ಹಿಂದಿನ ಸಾಲಿನಲ್ಲಿ ಕುಲಕರ್ಣಿ, ಮಾಲಿ ಪಾಟೀಲ, ಸಾವ್ಕಾರ ಮತ್ತು ಕಟ್ಟಕಡೆಗೆ ಸಾಮಾನ್ಯ ರೈತರ ಎತ್ತುಗಳು ನಡೆದಿದ್ದುವು. ಮೆರವಣಿಗೆಯ ಸಂದರ್ಭದಲ್ಲಿ ಎತ್ತುಗಳ ಮೇಲೆ ಚುರುಮುರಿಯ ಕಾಳುಗಳು ರಾಶಿಯಾಗಿ ಬಿದ್ದಿರುತ್ತಿದ್ದವು. ಸನಾಯಿ ಮೇಳದಿಂದ ಎತ್ತುಗಳ ಮೆರವಣಿಗೆ ನಡೆಯುವುದರಿಂದ ಊರಿಗೆ ಊರೇ ಚಾವಡಿಯ ಮುಂದಿನ ರಸ್ತೆಯ ಮೇಲೆ ಕ್ವಾಟೆ ಗ್ವಾಡಿಯ ಮೇಲೆ ಅಲ್ಲಲ್ಲಿ ನಿಂತು ನೋಡುತ್ತಿದ್ದರು. ಶಿವಳ್ಳಿಯ ಕೆಳಗೇರಿಯ ಜಮಾದಾರ ಮಲ್ಲಪ್ಪ ಈ ಹಬ್ಬಕ್ಕಾಗಿ ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ಮತ್ತು ಅಳಿಯಂದಿರನ್ನು ಕರೆಸಿದ್ದನು. ಸಣ್ಣ ಮಗಳು ಮದುವೆಯಾಗಿ ಎರಡು ವರ್ಷವಾಗಿತ್ತು ಊರಿಗೆ ಬಂದಿರಲಿಲ್ಲ. ದೊಡ್ಡ ಮಗಳು ಶಾಣಮ್ಮ ಮತ್ತು ಹಾಲಪ್ಪ ಪ್ರತಿ ವರ್ಷ ಹಬ್ಬಕ್ಕೆ ಬರುತ್ತಿದ್ದರು. ಕಾಶಮ್ಮನ ಗಂಡ ಮಾರ್ತಾಂಡನು ಸಹ ಹೊಸಬನಾಗಿದ್ದನು. ಎತ್ತುಗಳ ಮೆರವಣಿಗೆ ನೋಡಲು ಕಾಶಮ್ಮ, ಬೆಳ್ಳಿ, ಲಕ್ಕಿಯರು ಹೋಗಿದ್ದರು. ಇವರು ಎಲ್ಲರ ಎತ್ತುಗಳನ್ನು ನೋಡುತ್ತಿದ್ದಾಗ ಲಿಂಗರಾಜನ ಎತ್ತುಗಳ ಬಗ್ಗೆ ಲಕ್ಕಿ ಕಾಶಿಗೆ ಹೇಳುತ್ತಾಳೆ. ಆಗ ಕಾಶಿಗೆ ಲಿಂಗರಾಜನನ್ನು ಪ್ರೀತಿಸಿದ ನೆನಪು ಬರುತ್ತದೆ. ಬೇರೆ ಬದಿಯಲ್ಲಿ ಲಿಂಗರಾಜನ ಹೆಂಡತಿ ನೀಲಮ್ಮ ಸಹ ಮೆರವಣಿಗೆ ನೋಡಲು ಬಂದಿರುತ್ತಾಳೆ. ಎತ್ತುಗಳ ಕರಿ ಹರಿಯುವ ಸರದಿ ಬಂದಾಗ ಕೇಕೆ ಹಾಕುವುದು, ಕುಣಿಯುವುದು, ಎತ್ತುಗಳಿಗೆ ಬಾರುಕೋಲುನಿಂದ ಹೊಡೆಯುವುದು ಮಾಡುತ್ತಿದ್ದರು. ಗೌಡರ ಎತ್ತುಗಳು ಕರಿ ಹರಿದವು ಮಂದಿಯಲ್ಲ ಗೌಡರ ಮನೆಕಡೆಗೆ ಹೋದರು. ಬಂದ ಮಂದಿಗೆಲ್ಲ ಗೌಡರ ಅಂಗಳದಲ್ಲೇ ಹೋಳಿಗೆಯ ಊಟ ನಡೆಯಿತು. ನಾಲ್ಕು ವರ್ಷದ ಹಿಂದೆ ಮಲ್ಲಪ್ಪ ಜಮಾದಾರನ ಎತ್ತುಗಳು ಕರಿ ಹರಿದು ಹೆಸರುಗಳಿಸಿದ್ದವು. ಕಾದಂಬರಿಯು 'ಕಾರಹುಣ್ಣಿಮೆ' ಹಬ್ಬವನ್ನು ಸಂಭ್ರಮದಿಂದ ಆಚರಿಸಿರುವುದನ್ನು ಚಿತ್ರಿಸುತ್ತದೆ.

ಕಾದಂಬರಿಯಲ್ಲಿ ವಿಶೇಷವಾಗಿ ಕಾಣುವ ಹಬ್ಬ ಎಂದರೆ 'ಮೊಹರಂ' ಹಬ್ಬ. ಈ ಹಬ್ಬವನ್ನು ಹಿಂದೂ ಮುಸ್ಲಿಂರೂ ಕೂಡಿ ಆಚರಿಸುತ್ತಾರೆ. ಅಲಾಯಿಪೀರಗಳಾದ ದೊಡ್ಡ ಪಂಜಿ ಖತಲ್‌ಸಾಹೇಬ್ ಪೀರ ಮತ್ತು ಹುಸೇನಿಸಾಬ್, ನಿಂಬಾಜಿಪೀರರನ್ನು ಕೂಡಿಸಿದ್ದರು. ಶಿವಳ್ಳಿಯಲ್ಲಿ ಖತಲ್ ಸಾಬನ ಸವಾರಿ ಏಳುನೇ

ದಿನದ ಬೆಳಗಿನ ನಸುಕಿನಲ್ಲಿ ಏಳುತ್ತಿತ್ತು. ಖತಲ್‌ಸಾಬ್ ದೇವರ ಸವಾರಿ ಮಲ್ಲಪ್ಪ ಜಮಾದಾರನ ಸಂಬಂಧಿಕನಾಗಿದ್ದ ನಾನಪ್ಪನ ಮೈಯಲ್ಲಿ ಬರುತ್ತಿತ್ತು. ಈ ಪೀರ ದೇವರು ಮಲ್ಲಪ್ಪನ ಮನೆದೇವರಲ್ಲೊಬ್ಬ ದೇವರಾಗಿದ್ದರು. ಮಲ್ಲಪ್ಪ ಪ್ರತಿ ವರ್ಷ ಈ ದೇವರಿಗೆ ಕುರಿ ಬಲಿಯ ನೈವೇದ್ಯ ಮಾಮೂಲಿಯಾದ ಹರಕೆಯಾಗಿತ್ತು. ಈ ಹಬ್ಬದಲ್ಲಿ ಫತರೂ ಹುಲಿವೇಷ ತೊಟ್ಟು ಟೊಂಕಕ್ಕೆ ಗೆಜ್ಜೆ ಸರ ಬಿಗಿದುಕೊಂಡು ಕೈಯಲ್ಲಿಯ ಬಾರುಕೋಲಿನಿಂದ ಮಂದಿಯನ್ನು ಸರಿಸುತ್ತಾ ಕುಣಿಯುತ್ತ ದಾರಿ ಬಿಡಿಸಿಕೊಂಡು ಓಡಾಡುವುದು ಈ ಹಬ್ಬದಲ್ಲಿ ವಿಶೇಷವಾಗಿ ಕಾಣುತ್ತಾನೆ. ಈ ಹಬ್ಬವನ್ನು ಮಲ್ಲಪ್ಪ ಜಮಾದಾರನ ಕುಟುಂಬದವರು ಬಹಳ ಸಂಭ್ರಮದಿಂದ ಆಚರಿಸುತ್ತಾರೆ. ಪ್ರತಿ ವರ್ಷ ಮಲ್ಲಪ್ಪನ ಅಳಿಯ ಹಾಲಪ್ಪ ಶೇರ್ಯಾ, ದಟ್ಟಿ ತಂದ ನಂತರವೇ ನೈವೇದ್ಯವನ್ನು ಮಸೂತಿಗೆ ತೆಗೆದುಕೊಂಡು ಹೋಗುತ್ತಿದ್ದರು. ಮಲ್ಲಪ್ಪ ಈ ಹಬ್ಬಕ್ಕೆ ತನ್ನವರೆಲ್ಲರನ್ನು ಕರೆಸಿದ್ದನು. ಶಿವಳ್ಳಿಯಲ್ಲಿ ರಾತ್ರಿ ಮಸಿದಿಯ ಮುಂದೆ ಅಲಾಯಿ ಕುಣಿಸುತ್ತ ಯುವಕರು ಹಾಡುತ್ತ ಕುಣಿಯುತ್ತಿದ್ದರು. ಈ ಅಲಾಯಿ ಕುಣಿತ ನೋಡಲಿಕ್ಕೆ ಊರಿನ ಜನರೆಲ್ಲರು ಬಂದು ಸೇರಿದ್ದರು. ಮಸಿದಿಯ ವಿಶಾಲ ಅಂಗಳದ ಬಲಬದಿಗೆ ನಾಕು ಹೊರಸು ಹಾಕಿ ಮೇಲೆ ಹೊಸ ಜಮಖಾನೆ ಹಾಸಿ ಊರ ಗೌಡ, ಕುಲಕರ್ಣಿ, ಸಾವ್ಕಾರ, ಮಟದಯ್ಯ ಅಂತ ದೈವದವರನ್ನು ಕೂಡಿಸುತ್ತಿದ್ದರು. ಶಿವಳ್ಳಿಯಲ್ಲಿನ ಹಿಂದೂ ಮುಸ್ಲಿಂರ ತರುಣರ ಕುಣಿತವೆಂದರೆ ಪ್ರಸಿದ್ಧಿ ಪಡೆದಿದ್ದು. ಈ ಕುಣಿತ ನೋಡಲಿಕ್ಕೆ ಸುತ್ತ ಹಳ್ಳಿಯ ಜನ ಬಂದು ಸೇರುವುದು ವಿಶೇಷವಾಗಿತ್ತು. ಕಾದಂಬರಿಯಲ್ಲಿ 'ಮೊಹರಂ' ಹಬ್ಬವನ್ನು ಹಿಂದೂ ಮುಸ್ಲಿಂರೂ ಕೂಡಿ ಆಚರಿಸುವುದು ವಿಶೇಷವಾಗಿ ಕಂಡುಬರುತ್ತದೆ.

ಕಾದಂಬರಿಯಲ್ಲಿ ಹೋಳಿ ಹುಣ್ಣಿಮೆಯ ಹಬ್ಬದ ಬಗ್ಗೆ ಕೂಡ ಚಿತ್ರಿಸಲಾಗಿದೆ. ಶಿವಳ್ಳಿಯಲ್ಲಿ ಹೋಳಿಹುಣ್ಣಿಮೆ ಹಬ್ಬ ಎಂದರೆ ಸುತ್ತ ಹಳ್ಳಿಗಳಿಗೆ ಪ್ರಸಿದ್ಧಿಯಾಗಿತ್ತು. ಈ ಹಬ್ಬದಲ್ಲಿ ಕೆಳಜಾತಿಯ ಹರೆಯದ ಹುಡುಗರು ತಮ್ಮ ಮನೆಯಲ್ಲಿದ್ದ ಹಲಗೆಗಳನ್ನು ತೆಗೆದು ಬಾರಿಸುತ್ತಿದ್ದರು. ಇವರಿಗೆ ಹೋಳಿ ಹುಣ್ಣಿಮೆ ಹಬ್ಬ ಎಂದರೆ ಎಲ್ಲಿಲ್ಲದ ಸಂಭ್ರಮ. ಹಲಗೆಯ ಶಬ್ದವನ್ನು ಒಂದೊಂದು ಹಬ್ಬಕ್ಕೆ ಒಂದೊಂದು ರೀತಿಯಾಗಿ ಬಾರಿಸುತ್ತಿದ್ದರು. ಈ ಹಲಗೆಯ ಶಬ್ದಕ್ಕೆ ಎಲ್ಲಾರೂ ಸೇರಿ ಗುಂಪುಕಟ್ಟಿಕೊಂಡು ಕುಣಿಯುತ್ತಿದ್ದರು.

ಹೋಳಿ ಹುಣ್ಣಿಮೆ ಹಬ್ಬದಲ್ಲಿ ಪ್ರತಿ ವರ್ಷವು ಕಾಮಣ್ಣನನ್ನು ಸುಡಲಾಗುತ್ತಿತ್ತು. ಬಸಪ್ಪ ಎನ್ನುವ ವ್ಯಕ್ತಿಯು ಮಂಚದ ಮೇಲೆ ಮಲಗಿದಾಗ ಇತನನ್ನು ಸತ್ತ ಹೆಣವಯ್ಯುವ ಹಾಗೆ ಹಲಗೆ ಬಾರಿಸುತ್ತ ಕುಣಿಯುತ್ತ ಹರೆಯದ ಹುಡುಗರು ಕಾಮಣ್ಣನ ಸುಡುವ ಜಾಗದಲ್ಲಿ ತಂದು ಇಡುತ್ತಾರೆ. ಆಗ ಬೆಂಕಿಯ ಕಿಚ್ಚು ತಗಲಿದಾಗ ಬಸಪ್ಪ ಓಡಿ ಹೋಗಿ ಮನಸ್ಸಿಗೆ ಬಂದ ಹಾಗೆ ಬಯ್ಯುತ್ತಾನೆ. ಇದು ಹರೆಯದ ಹುಡುಗರಿಗೆ ಕುಷಿ ಕೊಡುತ್ತಿತ್ತು. ಕಾಮಣ್ಣನನ್ನು ಸುಡುವ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಅಡಿಗೆ ಮಾಡಲು ತಂದ ಕಟ್ಟಿಗೆಗಳನ್ನು ಹುಡುಗರು ಕಳ್ಳತನ ಮಾಡಿ ಬೆಂಕಿಯಲ್ಲಿ ಹಾಕುತ್ತಿದ್ದರು. ಕಾಮಣ್ಣನನ್ನು ಸುಡುವ

ಕುಣಿಸುತ್ತ ಕೇಕೆ ಹಾಕುತ್ತ ಕುಣಿಯುತ್ತಿದ್ದರು. ಇದೇ ದಿನದಂದು ಇನ್ನೊಂದು ಕಡೆ ದ್ರೌಪದಿ ವಸ್ತ್ರಾಪರಣ ಎಂಬ ದೊಡ್ಡಾಟವನ್ನು ಆಡುತ್ತಿದ್ದರು. ದೊಡ್ಡಾಟದಲ್ಲಿ ಪಾತ್ರಗಳು ತಮ್ಮ ಸನ್ನಿವೇಶಕ್ಕೆ ತಕ್ಕಂತೆ ಬಂದು ಹೋಗುತ್ತಿದ್ದವು. ಈ ಆಟ ನೋಡಲು ಊರಿನ ಗೌಡ, ಕುಲಕರ್ಣಿಯರು, ಎಲ್ಲಾ ಜನಾಂಗದ ಜನರು ಹೋಗುತ್ತಿದ್ದರು. ಈ ಆಟ ಆಡಿದ ಮರುದಿನ ಬಣ್ಣದಾಟ ಆಡುತ್ತಿದ್ದರು. ಇಲ್ಲಿ ಒಬ್ಬರಿಗೊಬ್ಬರು ಬಣ್ಣವನ್ನು ಹಚ್ಚಿಕೊಳ್ಳುತ್ತ ಬಹಳ ಸಂತೋಷದಿಂದ ಹಬ್ಬವನ್ನು ಆಚರಿಸುತ್ತಿದ್ದರು. ಹೀಗೆ ಕಾದಂಬರಿಯಲ್ಲಿ ಹಬ್ಬಗಳು ಯಾವ ರೀತಿಯಾಗಿ ಇರುತ್ತವೆ ಮತ್ತು ಯಾವ ರೀತಿಯಾಗಿ ಇಲ್ಲಿನ ಜನರು ಆಚರಿಸುತ್ತಾರೆ ಎಂಬುದನ್ನು ಗೀತಾನಾಗಭೂಷಣರವರು ಚಿತ್ರಿಸಿದ್ದಾರೆ.

ಹಬ್ಬಗಳು ಎಂದರೆ ಎಲ್ಲಾರಿಗೆ ಸಂತೋಷವನ್ನುಂಟು ಮಾಡುತ್ತವೆ. ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದ ಜನರು ಈ ಹಬ್ಬಗಳನ್ನು ಯಾವ ರೀತಿಯಾಗಿ ಆಚರಿಸುತ್ತಾರೆ ಎಂಬುದನ್ನು ಗಮನಿಸಿ ಗೀತಾ ನಾಗಭೂಷಣರವರು ಈ ಕಾದಂಬರಿಯಲ್ಲಿ ಸಂದರ್ಭಕ್ಕೆ ತಕ್ಕಂತೆ ಬಳಸಿಕೊಂಡಿರುವದರಿಂದ ಸಹೃದಯರಿಗೆ ಆಕರ್ಷಿಸುವಂತೆ ಮಾಡಿದ್ದಾರೆ.

ಜಾತ್ರೆಗಳು :

ಭಾರತೀಯ ಸಮಾಜದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿ ಜಾತ್ರೆಗಳು ನಡೆಯುವುದನ್ನು ಕಾಣುತ್ತೇವೆ. ಜಾತ್ರೆ ಎಂದರೆ ಎಲ್ಲರು ಸಂತೋಷದಿಂದ ಆಚರಿಸುವುದಾಗಿದೆ. ಪ್ರಸ್ತುತ 'ಬದುಕು' ಕಾದಂಬರಿಯು ಹಳ್ಳಿಗಳಲ್ಲಿ ನಡೆಯುವ ಜಾತ್ರೆಗಳ ವೈವಿಧ್ಯಮಯ ಚಿತ್ರಣವನ್ನು ಹಿಡಿದಿಟ್ಟಿದೆ. ಶಿವಳ್ಳಿಗೆ ಚುಂಚೂರು ಹರದಾರಿ ದೂರದ ಒಂದು ಹಳ್ಳಿ. ಈ ಚುಂಚೂರುನಲ್ಲಿ ಮಾಪುರತಾಯಿದೇವಿ ಜಾತ್ರೆ ನಡೆಯುತ್ತದೆ. ಈ ದೇವಿ ಜಾತ್ರೆ ಎಂದರೆ ಸುತ್ತ ಹಳ್ಳಿಗಳಿಗೆ ಹೆಸರುವಾಸಿಯಾಗಿತ್ತು. ಮಾಪುರತಾಯಿದೇವಿ ಕೆಳಜಾತಿಯ ಹೊಲೆ ಮಾದಿಗರ, ಕಾಟಕರ ಮಂದಿಯ ದೇವತೆಯಾಗಿರುತ್ತಾಳೆ. ಈ ದೇವಿಯ ಪೂಜಾರಿಕೂಡ ಹೊಲೆಯನಾಗಿರುತ್ತಾನೆ. ಕೆಳ ಜಾತಿಯ ಮಂದಿಗೆ ಕಷ್ಟ ಬಂದಾಗ ಹರಕೆಯ ರೂಪದಲ್ಲಿ ಪಟ್ಟಕ್ಕೆ ಹಾಕಿ 'ಜೋಗಣಿ' ಮಾಡುತ್ತಾರೆ 'ಜೋಗಣಿ' ಎಂದರೆ ಮಾಪುರತಾಯಿ ದೇವಿಯ ಸೇವಾಕ್ಕೆ ಮೀಸಲಾದ ಹೆಣ್ಣು ಇವಳು ಜೀವನ ಇರುವವರೆಗೂ ಬೇರೆ ಮದುವೆಯಾಗುವಂತಿಲ್ಲ. 'ಜೋಗಣಿ'ಯೆಂದು ಹದಿಹರೆಯದ ಹೆಣ್ಣು ಮಕ್ಕಳನ್ನು ಮದುವೆ ಮಾಡದೇ ಸೂಳೆಗಾರಿಕೆಗೆ ಇಳಿಸೋದು ಅಮಾನವೀಯ ಪೂಜಾ ರೀತಿಗಳು, ರಿವಾಜುಗಳು ಕೆಳ ಜಾತಿಯಲ್ಲಿವೆ. ಇವು ಮೇಲು ಜಾತಿಗಳಲ್ಲಿ ಕಂಡು ಬರುವುದಿಲ್ಲ ಆದರೆ ಮೇಲು ಜಾತಿಯ ಗೌಡರ ಮಂದಿಯಿಂದಲೇ ಮೊದಲು 'ಕುಂಬ'ದ ನೈವೆದ್ಯ ಬರುತ್ತದೆ. ಗೌಡನ ಹರಕೆಯ ಕುರಿಯೇ ದೇವಿಗೆ ಮೊದಲ ಬಲಿಯಾಗಿರುತ್ತದೆ. ಜೋಗಣಿಯಾದವಳನ್ನು ಮೇಲು ಜಾತಿಯ ಗೌಡನೋ, ಕುಲಕರ್ಣಿಯೋ, ಸಾವ್ಕಾರನೋ ಪಟ್ಟಕ್ಕೆ ಹಾಕಿಕೊಂಡು ಪಟ್ಟದ ಖರ್ಚು ಕೊಟ್ಟು ಕಾಮಕ್ಕೆ ಬಳಸಿಕೊಂಡು

ಅಮಾಯಕ ಹೆಣ್ಣು ಮಕ್ಕಳ ಜೀವನವು ಬೀದಿಪಾಲಾಗಿಸುವುದನ್ನು ಈ ಕಾದಂಬರಿಯು ಚಿತ್ರಿಸುತ್ತದೆ. ಈ ದೇವಿಯ ಜಾತ್ರೆಯು ಒಂದು ತಿಂಗಳು ನಡೆಯುತ್ತದೆ. ಈ ದೇವಿ ಜಾತ್ರೆಗೆ ಶಿವಳ್ಳಿಯಿಂದ ಮಲ್ಲಪ್ಪ ಜಮಾದಾರನ ಕುಟುಂಬದವರು ಮತ್ತು ತನಗೆ ಬೇಕಾದ ಎಲ್ಲಾ ಜನರು ಬಂದಿದ್ದರು. ಮಲ್ಲಪ್ಪ ಈ ದೇವಿಗೆ ಒಂದು ಕುರಿಯ ನೈವೇದ್ಯವನ್ನು ಪ್ರತಿ ವರ್ಷ ಕೊಡುತ್ತಿದ್ದನು. ಮಾಪುರ ತಾಯಿಯ ಜಾತ್ರೆಯಲ್ಲಿ ಈಳಿಗೇರ ಚಂದಯ್ಯ ಸಿಂದಿ ಅಂಗಡಿಯನ್ನು ಹಾಕಿದ್ದನು. ಇನ್ನೂ ಅನೇಕ ತರಹದ ಅಂಗಡಿಗಳು ಬಂದಿದ್ದವು. ಈ ಕಾದಂಬರಿಯಲ್ಲಿ ವಿಶೇಷವಾಗಿ ಕಾಣುವುದೆಂದರೆ ಕೆಳ ಜಾತಿಯವರ ಜೀವನ ಪದ್ಧತಿಗಳು ಯಾವ ರೀತಿ ಇವೆ ಎಂಬುದನ್ನು ಗೀತಾ ನಾಗಭೂಷಣರವರು ಚಿತ್ರಿಸಿದ್ದಾರೆ.

'ಬದುಕು' ಕಾದಂಬರಿಯಲ್ಲಿ ಗುಲ್ಬರ್ಗಾದ ಶರಣಬಸವೇಶ್ವರ ಜಾತ್ರೆಯ ಆಚರಣೆಯ ಪದ್ಧತಿಯನ್ನು ಕಾಣಬಹುದು.

ಶಾಣಬಸ್ಸಪ್ಪನ ಜಾತ್ರೆ ನೋಡಲು ಸುತ್ತಲಿನ ಹಳ್ಳಿ ಜನ ಬರುತ್ತಿದ್ದರು. ಈ ಜಾತ್ರೆಗೆ ಥೇರು ಎಳೆಯುತ್ತಾರೆ. ಥೇರಿನ ಹಿಂದಿನ ದಿನದಂದು ಶಣಬಸಪ್ಪನ ಗುಡಿಯ 'ಉಚ್ಚಾಯಿ' ಎಳೆಯುತ್ತಾರೆ. ಕಲಬುರ್ಗಿಯ ಜನರು ಮದುವೆ ಮಾಡಿಕೊಟ್ಟ ಹೆಣ್ಣು ಮಕ್ಕಳನ್ನು ಮೊಮ್ಮಕ್ಕಳನ್ನು ಬೀಗರು, ನೆಂಟರು, ಬಂಧುಗಳು ಬೇಕಾದವರೆಲ್ಲರನ್ನು ಕರೆಸಿ ಬಹಳ ಸಂಭ್ರಮದಿಂದ ಆಚರಿಸುತ್ತಾರೆ. ಈ ಜಾತ್ರೆಗೆ ಎಲ್ಲ ತರಹದ ಅಂಗಡಿಗಳು ಬಂದಿರುತ್ತವೆ. ಕಲಬುರ್ಗಿಯ ಶಾಣಬಸ್ಸಪ್ಪನ ಜಾತ್ರೆ ಎಂದರೆ ಹೈದರಾಬಾದ್ ಕರ್ನಾಟಕದಲ್ಲಿಯೇ ಬಾಳ ಪ್ರಸಿದ್ಧಿ ಪಡೆದಿದೆ. ಶಾಣಬಸ್ಸಪ್ಪನನ್ನು ಕಲ್ಯಾಣ ಬಸವಣ್ಣನ ಅವತಾರ ಅಂತ ನಂಬಿ ಪೂಜಿಸುತ್ತಿದ್ದರು. ಲೆಕ್ಕವಿಲ್ಲದಷ್ಟು ಜನ ಸೇರುತ್ತಿದ್ದರು. ಸಂಚಾರಿ ಹೊಟೆಲ್ಲು ತಿಂಗಳ ಮೊದಲೇ ಬಂದು ಸೇರಿತ್ತು. ಇಲ್ಲಿ ಉತ್ತರ ಭಾರತದ ಎಲ್ಲ ತಿಂಡಿ ತಿನಿಸುಗಳನ್ನು ಮಾಡುತ್ತಿದ್ದರು. ಹೋಗಿ ಬರುವವರನ್ನು ಕೈ ಮಾಡಿ ಕರೆಯುವಂತಿದ್ದವು. ಒಂದು ಕಡೆ ಎತ್ತುಗಳ ಜಾತ್ರೆ ಕೂಡ ನಡೆಯುತ್ತದೆ. ಎತ್ತುಗಳನ್ನು ಮಾರಲು, ಖರೀದಿಸಲು ಅಂತ ದೂರದ ಹಳ್ಳಿಯ ಜನ ಸೇರಿರುತ್ತಾರೆ. ಕಲಬುರ್ಗಿಯ ಹಾಲಪ್ಪ ಶಾಣಬಸ್ಸಪ್ಪನ ಜಾತ್ರೆಗೆ ಶಿವಳ್ಳಿಯ ತನ್ನ ಮಾವನ ಮನೆಯವರಿಗೆ ಮತ್ತು ಇದೇ ಶಾಣಬಸ್ಸಪ್ಪನ ಗುಡಿಯಲ್ಲಿ ಮದುವೆಯಾದ ಕಾಶಮ್ಮ ಮತ್ತು ಮಾರ್ತಾಂಡನಿಗೆ ತನ್ನ ಗೆಳೆಯರಿಗೆ ಬರಲು ಹೇಳಿದ್ದನು. ಹಾಲಪ್ಪನ ಹೆಂಡತಿ ಶಾಣಮ್ಮ ಈ ಜಾತ್ರೆಗೆ ಹೋಳಿಗೆಯ ಊಟ ರೆಡಿ ಮಾಡಿದ್ದಳು. ಶಿವಳ್ಳಿಯಿಂದ ಫತಾರು ಮತ್ತು ಕಲ್ಯಾಣಿ ಇಬ್ಬರು ಬಂದಿದ್ದರು. ಕಲ್ಯಾಣಿ ಜೊತೆ ಬೆಳ್ಳಿಯ ನಿಶ್ಚಿತಾರ್ಥವಾಗಿದ್ದರಿಂದ ಕಲ್ಯಾಣಿ ಬಂದಿದ್ದು ಬೆಳ್ಳಿಗೆ ತುಂಬ ಖುಷಿಕೊಟ್ಟಿತ್ತು. ಜಾತ್ರೆಯ ದಿನದಂದ ಥೇರು ನೋಡಲು ಹಾಲಪ್ಪ ಮತ್ತು ಶಾಣಮ್ಮನನ್ನು ಮನೆಯಲ್ಲಿ ಬಿಟ್ಟು ಎಲ್ಲಾರು ಹೋಗಿದ್ದರು. ಈ ಥೇರು ನೋಡಲು ಸುತ್ತಲಿನ ಹಳ್ಳಿಯವರೆಲ್ಲರು ಬಂದಿದ್ದರು. ಎಲ್ಲಿ ನೋಡಿದರೂ ಜನ ಸಂಖ್ಯೆಯ ಇಂಡು ತುಂಬಿತ್ತು ಥೇರು ಎಳೆಯುವಾಗ ಬಾಳೆ ಹಣ್ಣು ಒಗಯುತ್ತಿದ್ದರು.

ಈ ಕಾದಂಬರಿಯಲ್ಲಿ ಶಾಣಬಸಪ್ಪನ ಜಾತ್ರೆಯನ್ನು ಜನರು ಬಹಳ ಸಂತೋಷದಿಂದ ಆಚರಿಸಿರುವುದನ್ನು ಗೀತಾನಾಗಭೂಷಣ ಅವರು ತೋರಿಸಿಕೊಟ್ಟಿದ್ದಾರೆ.

3.5 ಆಹಾರ ಪದ್ಧತಿ :

ಮಾನವನು ಸಮಾಜದಲ್ಲಿ ಬದುಕಬೇಕಾದರೆ ಅವನಿಗೆ ಆಹಾರ ಬಹಳ ಮುಖ್ಯ. ತನಗೆ ಇಷ್ಟವಾದ ಆಹಾರವನ್ನು ಸೇವಿಸುತ್ತಿರುತ್ತಾನೆ. ಪ್ರಸ್ತುತ 'ಬದುಕು' ಕಾದಂಬರಿಯಲ್ಲಿ ಜನರು ವಿವಿಧ ಬಗೆಯ ಆಹಾರವನ್ನು ಸೇವಿಸುತ್ತಾರೆ.

ಶಿವಳ್ಳಿಯಲ್ಲಿ ಹೆಚ್ಚಾಗಿ ಕೆಳ ಜಾತಿಯ ಜನರು ಬಹಳಷ್ಟು ನೆಲೆಸಿದ್ದರು. ಇವರು ಹಬ್ಬ, ಜಾತ್ರೆ, ಮತ್ತು ಹೊಲದಲ್ಲಿ ಖಣ ಮಾಡುವ ಸಂದರ್ಭದಲ್ಲಿ ಕುರಿಯ ಮಾಂಸದ ಊಟ ಮತ್ತು ಹೋಳಿಗೆಯ ಊಟ ಮಾಡುತ್ತಿದ್ದರು. ಇದರ ಜೊತೆ ಸೆಂದಿ ಕೂಡ ಕುಡಿಯುತ್ತಾರೆ. ಕೆಳ ಜಾತಿಯ ಮಂದಿಯಲ್ಲಿ ಯಾವುದೇ ಕಾರ್ಯ ನಡೆಯಲಿ ಮಾಂಸದ ಊಟ ಮಾಡುತ್ತಿದ್ದರು. ಮಾಂಸದ ಊಟವು ಮೇಲು ಜಾತಿಯವರಲ್ಲಿ ಕಂಡು ಬರುವುದಿಲ್ಲ. ಕೆಳ ಜಾತಿಯ ಮಲ್ಲಪ್ಪನ ಮನೆಯಲ್ಲಿ ಮೊಲ, ಚಿಗರೆ, ಕೋಳಿ, ಕುರಿ ಅಂತ ಯಾವುದಾದರೂ ಒಂದು ಖಂಡದ ಅಡುಗೆ ಇರುತ್ತಿತ್ತು. ರುಕ್ಮಣ್ಣ ಖಂಡದ ಅಡಿಗೆ ಮಾಡುವಲ್ಲಿ ಎತ್ತಿದ ಕೈ. ಇವನಂಗ ಮಾಂಸದ ಸಾರು, ತಾಳು ಪಲ್ಲೆ ಮಾಡುವವರು ಈ ಸುತ್ತಮುತ್ತಿನ ಹಳ್ಳಿಗಳಲ್ಲಿ ಯಾರೂ ಇರಲಿಲ್ಲ. ಮಾಂಸದ ಸಾರು, ಕರಿದ ತುಂಡುಗಳ ತಾಳು ಪಲ್ಲೆ, ಖೀಮಾದ ಉಂಡಿ, ಕೋಳಿ ಬಿರ್‍ಯಾನಿ ಮುಂತಾದ ಎಲ್ಲ ತರಹದ ಅಡಿಗೆಗಳನ್ನು ಮಾಡುತ್ತಿದ್ದನು. ಬ್ಯಾಡರ ನಾಗವ್ವಾಯಿ, ಸಾಬಣ್ಣ, ಕುರುಬರ ಹಿರ್‍ಯಾ, ಖೇಮಣ್ಣ, ಅಗಸರ ರಾಮಣ್ಣ ಮುಂತಾದವರು ಮಲ್ಲಪ್ಪ ಜಮಾದಾರನ ಮನೆಯಲ್ಲಿ ಆಗಾಗ ತಿನ್ನುತಿದ್ದರು. ಮಲ್ಲಪ್ಪ ತನ್ನ ಮನೆ ದೇವರುಗಳಿಗೆ ಒಂದೊಂದು ಕುರಿಯನ್ನು ಬಲಿಕೊಡಲು ಬಿಡುತ್ತಿದ್ದನು. ದೇವರಿಗೆ ನೈವೇದ್ಯ ನಂತರ ಈ ಕುರಿಯ ಮಾಂಸದ ಆಹಾರ ಇದರ ಜೊತೆಗೆ ಬಿಸಿ ಬಿಸಿ ರೊಟ್ಟಿ, ಗೋಧಿ ಚಪಾತಿಯೊಂದಿಗೆ ಮಲ್ಲಪ್ಪನ ಮನೆಯವರು ಹಾಗೂ ತನಗೆ ಬೇಕಾದವರೆಲ್ಲರು ಸೇವಿಸುತ್ತಿದ್ದರು. ಈಳಿಗೇರ ಸಾಬಯ್ಯ ಸೇಂದಿಯನ್ನು ಮಾರುತ್ತಿದ್ದನು. ಈ ಸೇಂದಿಯನ್ನು ಕೆಳ ಜಾತಿಯ ಮಂದಿ ತಾವು ದುಡಿದು ದಣಿವಾದಾಗ ಮತ್ತು ಹಬ್ಬದ ದಿನಗಳಲ್ಲಿ ಒಳ್ಳೆಯ ಕಾರ್ಯಗಳು ನಡೆದಾಗ ಆಗಾಗ ಕುಡಿಯುತ್ತಿದ್ದರು.

ಕೆಳಜಾತಿಯ ಜನರು ಚುಂಚೂರು ಮಾಪುರ ತಾಯಿ ಜಾತ್ರೆಯಲ್ಲಿಯು ಕೂಡ ಮಾಂಸದ ಊಟ ಮತ್ತು ಎಣ್ಣೆ ಹೋಳಿಗೆ ಮಾಡಿಸಿ ತಮಗೆ ಬೇಕಾದವರೆಲ್ಲರನ್ನು ಕರಸಿ ಊಟ ಮಾಡುತ್ತಾರೆ ಮತ್ತು ಹೋಳಿ ಹುಣ್ಣಿಮೆ, ಸಂಕ್ರಾಂತಿ, ಕಾರಹುಣ್ಣಿಮೆ ಈ ಹಬ್ಬಗಳಲ್ಲಿ 'ಕರಿ' ಎಂದು ಆಚರಿಸುತ್ತಿದ್ದರು. ಮೇಲು ಜಾತಿಯವರು ಮಾತ್ರ ಎಣ್ಣೆ ಹೋಳಿಗೆ, ಹಪ್ಪಳ ಮಾಡಿಕೊಂಡು ತಿನ್ನುತ್ತಿದ್ದರು. ಆದರೆ ಕೆಳಜಾತಿಯರೆಲ್ಲರು

ಮಾಂಸದ ಊಟ ಸೇವಿಸುತ್ತಾರೆ. ತೀರ ಬಡ ಕುಟುಂಬದವರು ಸಾಲ ಮಾಡಿ ಒಂದು ಕೋಳಿ ಕೊಯ್ದು ತಿನ್ನುತ್ತಿದ್ದರು. ಹೀಗೆ ಕಾದಂಬರಿಯಲ್ಲಿ ಆಗಾಗ ಮಾಂಸದ ಊಟ ಸೇವಿಸುವುದನ್ನು ತರುವುದರಿಂದ ಒಂದು ಮಹತ್ವದ ಕಾದಂಬರಿಯನ್ನಾಗಿ ಗೀತಾನಾಗಭೂಷಣರವರು ಚಿತ್ರಿಸಿದ್ದಾರೆ.

3.6 ಜೀವನ ವಿಧಾನ :

'ಬದುಕು' ಕಾದಂಬರಿಯಲ್ಲಿ ಹೆಚ್ಚಾಗಿ ಕೆಳಜಾತಿ ಜನರ ಜೀವನವಿದೆ. ಜಮಾದಾರ ಮಲ್ಲಪ್ಪನ ಹೊಲದ ಜ್ವಾಳದ ರಾಶಿ ಎಂದರೆ ಕೆಳಗೇರಿ ಜನರಿಗೆಲ್ಲ ದೊಡ್ಡ ಸುಗ್ಗಿ. ಇವರು ಈತನ ಹೊಲದಲ್ಲಿ ದುಡಿದು ತಿನ್ನುತ್ತಿದ್ದರು. ರಾಸಿ ಮಾಡುವ ಸಮಯದಲ್ಲಿ ಕುಣಿಯುತ್ತ ಹಾಡುತ್ತ ಮೋಜು, ತಮಾಶಿ, ನಗೆಚಾಟಿಕೆಗಳ ನಡುವೆ ಬೆಳಗಿನ ತನಕ ಹಂತಿ ಮಾಡುತ್ತಿದ್ದರು. ರಾಶಿ ಮುಗಿಸುವವರಿಗೆ ಜಮಾದಾರ ಮಲ್ಲಪ್ಪ ಈ ದುಡಿಯುವ ಜನರಿಗೆ ಹೊಲದಲ್ಲಿಯೇ ಅಡಿಗೆ ಮಾಡಿಸಿ ಹಾಕುತ್ತಿದ್ದನು. ಜಮಾದಾರ ಮಲ್ಲಪ್ಪನ ರಾಶಿ ಎಂದರೆ ಕೆಳಗೇರಿ ಜನರಿಗೆ ಸಣ್ಣದೊಂದು ಹಬ್ಬ ನಡೆದ ಹಾಗೆ ನಡೆಯುತ್ತಿತ್ತು.

ಚುಂಚೂರು ಮಾಪುರತಾಯಿದೇವಿ ಕೆಳಜಾತಿ ಜನರ ದೇವತೆಯಾಗಿದ್ದಳು. ಇವರಿಗೆ ಕಷ್ಟ ಬಂದಾಗ ಹೆಣ್ಣು ಮಕ್ಕಳನ್ನು ಹರಕೆಯ ರೂಪದಲ್ಲಿ ಮೇಲು ಜಾತಿಯವರಿಗೆ ಪಟ್ಟಕ್ಕೆ ಹಾಕಿ ದೇವಿ ಸೇವಿಗೆ ಮೀಸಲು ಎಂದು 'ಜೋಗಣಿ' ರೂಪದಲ್ಲಿ ಬಿಡುತ್ತಿದ್ದರು. 'ಜೋಗಣಿ'ಯಾದವರು ಕೊನೆಯವರೆಗೆ ಮದುವೆಯಾಗುವಂತಿಲ್ಲ. ಹೀಗೆ ಅಮಾಯಕ ಹೆಣ್ಣು ಮಕ್ಕಳ ಬಾಳು ನಾಶವಾಗುತ್ತಿತ್ತು. ಇಲ್ಲಿನ ಜನರು ಸಮಾಜದ ಮೂಢನಂಬಿಕೆಗೆ ಬಲಿಯಾಗುತ್ತಿದ್ದರು.

ಕಲ್ಯಾಣಿಯು ಜೈಲು ಸೇರಿದಾಗ ಬೆಳ್ಳಿ ತೋಟದ ಹೊಲದಲ್ಲಿ ಗಾಣದೆತ್ತಿನಂತೆ ದುಡಿದು ಮೇಲು ಜಾತಿಯವರ ಶೋಷಣೆಗೆ ಒಳಗಾಗದೆ ಗಂಡನನ್ನು ನೆನೆಯುತ್ತ ಗರತಿಯ ಹಾಗೆ ಜೀವಿಸುತ್ತಾಳೆ. ಇವಳ ಜೊತೆ ಫತರೂ ಮತ್ತು ನಜಮಾ ಕೂಡ ದುಡಿಯುತ್ತಾರೆ. ಕಲ್ಯಾಣಿಯು ಜೈಲುನಿಂದ ಹೊರಗಡೆ ಬಂದ ನಂತರ ತನ್ನ ಹೊಲದಲ್ಲಿ ದುಡಿಯುತ್ತ ಜೀವನ ನಡೆಸುತ್ತಾನೆ.

ಹಾಲಪ್ಪ ಗಿರಿಣಿಯಲ್ಲಿ ಕೆಲಸ ಮಾಡುತ್ತ ತನ್ನ ಸಂಸಾರವನ್ನು ನಡೆಸುತ್ತಾನೆ. ಇಲ್ಲಿ ಪ್ರತಿಯೊಬ್ಬರು ಕೂಡ ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡು ಜೀವನ ನಡೆಸುವುದಲ್ಲದೇ ಹಬ್ಬ ಆಚರಣೆಗಳು ರೀತಿ ರಿವಾಜುಗಳು ಸಹ ಮುಖ್ಯವಾಗಿವೆ.

ಮಾರ್ತಾಂಡನು ಕಾಶಮ್ಮನನ್ನು ಮದುವೆಯಾಗಿ ಗಿರಿಣಿಯಲ್ಲಿ ಕೆಲಸ ಮಾಡುತ್ತ ಜೀವನ ನಡೆಸುತ್ತಾನೆ. ಇವನ ಜೀವನವು ಬಡತನದಿಂದ ಕೂಡಿದ್ದರೂ ಹೆಂಡತಿಯನ್ನು ಸುಖದಿಂದ ನೋಡಿಕೊಳ್ಳುತ್ತಿದ್ದ. ಆದರೆ ಕಾಶಮ್ಮ ತಾನು ಮೊದಲು ಪ್ರೀತಿಸಿದ ಲಿಂಗರಾಜನಲ್ಲಿ ಸೇರಿದಾಗ ಮಾರ್ತಾಂಡನು ಕಾಶಮ್ಮನಿಗಾಗಿ ಹುಚ್ಚನಂತೆ ಗಡ್ಡ ಬಿಟ್ಟು ಸಾಯುತ್ತಾನೆ.

ಮುಕ್ಯಾ ಹುಟ್ಟು ಕುಡುಕ. ಹೆಂಡತಿ ಕಲ್ಲವ್ವ ಆರು ಮಕ್ಕಳನ್ನು ಪಡೆದು ಹೊಲದಲ್ಲಿ ದುಡಿಯುತ್ತ ಜೀವನ ನಡೆಸುತ್ತಾಳೆ. ಮುಕ್ಯಾ ತಾನು ದುಡಿದ ಹಣವನ್ನೆಲ್ಲ ಕುಡಿಯಲು ಖರ್ಚು ಮಾಡುತ್ತಿದ್ದನು. ಒಂದು ದಿನ ಮುಕ್ಯಾನು ಕಲ್ಲವ್ವ ತೀರ ಬಸುರಿನಲ್ಲಿದ್ದಾಗ ಕಾಮಕ್ಕೆ ಬಳಸಿಕೊಂಡು ಕಲ್ಲವ್ವಳ ಬಾಳನ್ನು ಕೊನೆಗೊಳಿಸಿರುತ್ತಾನೆ.

ಹೀಗೆ ಕಾದಂಬರಿಯಲ್ಲಿ ಪ್ರತಿಯೊಬ್ಬರ ಜೀವನ ವಿಧಾನವು ಒಂದೊಂದು ರೀತಿಯಲ್ಲಿ ಕಂಡು ಬರುತ್ತದೆ.

ಅಡಿಟಿಪ್ಪಣಿ :

ಗೀತಾನಾಗಭೂಷಣ, ಬದುಕು, 2005, ಪು. 109.

ಅಧ್ಯಾಯ - 4

'ಬದುಕು' ಕಾದಂಬರಿಯ ಸಾಹಿತ್ಯಿಕ ವಿಶ್ಲೇಷಣೆ

ಅಧ್ಯಾಯ -4

'ಬದುಕು' ಕಾದಂಬರಿಯ ಸಾಹಿತ್ಯಿಕ ವಿಶ್ಲೇಷಣೆ

4.1 ವಸ್ತು :

ಗೀತಾ ನಾಗಭೂಷಣರವರ 'ಬದುಕು' ಕಾದಂಬರಿಯು ಶಿವಳ್ಳಿಯ ಜಮಾದಾರ ಮಲ್ಲಪ್ಪನ ಕುಟುಂಬದಿಂದ ಎಳೆ ಎಳೆಯಾಗಿ ಬಿಚ್ಚಿಕೊಳ್ಳುತ್ತದೆ. ಕಾದಂಬರಿಯಲ್ಲಿ ಕೇಂದ್ರ ಪಾತ್ರವೆಂಬುದಿಲ್ಲ. ಕಲಬುರ್ಗಿ ಜಿಲ್ಲೆಯ ಶಿವಳ್ಳಿಯೆಂಬ ಊರಿನ ಬದುಕನ್ನು ಕುರಿತದ್ದು. ಆ ಹಳ್ಳಿಯ ಜನರ ಸಮಗ್ರ ಚಿತ್ರಣವನ್ನು ಈ ಕಾದಂಬರಿಯು ಕಟ್ಟಿಕೊಟ್ಟಿದೆ. 'ಬದುಕು' ಕಾದಂಬರಿಯು ಒಂದು ಬೃಹತ್ ಕಾದಂಬರಿ ಆಗಿರುವುದರಿಂದ ಇದರಲ್ಲಿ ಕೆಳಜಾತಿಯ ಮೇಲೆ ನಡೆಯುವ ಶೋಷಣೆ ಇವರ ಸಂಪ್ರದಾಯಗಳು, ಆಚರಣೆಗಳು ಜೋಗಣಿ ಪದ್ಧತಿ, ಫತಾರುನ ಪ್ರಾಮಾಣಿಕತೆ ಮುಂತಾದ ಸನ್ನಿವೇಶಗಳನ್ನು ಕಣ್ಣಿಗೆ ಕಟ್ಟುವಂತೆ ಕಾದಂಬರಿ ಚಿತ್ರಿಸುತ್ತದೆ.

ಕೆಳಗೇರಿಯ ಜನರು ಜೀವನ ನಡೆಸುವುದು ಮುಖ್ಯವಾದಷ್ಟೇ ಹಳ್ಳಿಯ ರೀತಿ ರಿವಾಜುಗಳು, ಶಾಸ್ತ್ರ ಸಂಪ್ರದಾಯಗಳು ಮುಖ್ಯವಾಗುತ್ತವೆ. ಅವರ ದೈನಂದಿನ ಜೀವನದ ಒಂದೊಂದು ಚಿಕ್ಕ-ಚಿಕ್ಕ ವಿವರಗಳನ್ನು ತೆರೆದಿಡುವ 'ಬದುಕು' ಕಾದಂಬರಿಯಲ್ಲಿ ಗೀತಾರವರು ಕೆಳಜಾತಿ ಜನರ ಊಟೋಪಚಾರಗಳನ್ನು ಅತ್ಯಂತ ಸಂಭ್ರಮದಿಂದ ವರ್ಣಿಸುತ್ತಾರೆ. ಶಿವಳ್ಳಿಯ ಸೇಂದಿ ಬನಗಳು ಮತ್ತು ಕಲಬುರ್ಗಿಯ ಸೇಂದಿ ದುಕಾನುಗಳ ವರ್ಣನೆ ಇವು ಈ ಜನರ ಬದುಕಿನಲ್ಲಿ ಕುಡಿತದ ಪ್ರಾಮುಖ್ಯವನ್ನು ನಮ್ಮ ಕಣ್ಣ ಮುಂದಿಡುವಂತೆ ಚಿತ್ರಿಸುತ್ತದೆ.

ಕಾದಂಬರಿಯಲ್ಲಿ ಜಮಾದಾರ ಮಲ್ಲಪ್ಪನ ಕುಟುಂಬದ ಸನ್ನಿವೇಶಗಳು ಕಾದಂಬರಿಯ ಉದ್ದಕ್ಕೂ ಕಾಣಿಸಿಕೊಳ್ಳುತ್ತವೆ. ಇವನ ಕುಟುಂಬವು ಮೊದಲಿಗೆ ಸುಖದಿಂದ ಬಾಳಿ ಕಷ್ಟದಿಂದ ಕೊನೆಗೊಳ್ಳುತ್ತದೆ. ಮಲ್ಲಪ್ಪ ಜಮಾದಾರ ಕೊರವರ ಈರಮ್ಮನೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿರುವುದು ಮತ್ತು

ಕಾಶಮ್ಮ ಲಿಂಗರಾಜ ಬೇರೆ ಬೇರೆ ಕಡೆ ಮದುವೆಯಾಗಿ ಮತ್ತೆ ಸೇರುವುದು ಈ ಸುದ್ದಿ ತಿಳಿದು ಮಲ್ಲಪ್ಪ ಜಮಾದಾರನು ತನ್ನ ಮನೆಯ ಮರ್ಯಾದೆಗೆ ಅಂಜಿ ಸಾಯುವುದು ಇವೆಲ್ಲ ಸನ್ನಿವೇಶಗಳನ್ನು ಕಾದಂಬರಿಯು ಕಟ್ಟಿಕೊಟ್ಟಿದೆ. ಫತಾರು ಮತ್ತು ನಜಮಾ, ಮಲ್ಲಪ್ಪ ಜಮಾದಾರನ ಕುಟುಂಬದುದ್ದಕ್ಕೂ ಪ್ರಾಮಾಣಿಕವಾಗಿ ಕೆಲಸ ಮಾಡುವುದು ಕಲ್ಯಾಣಿ ಜೈಲು ಸೇರಿದಾಗ ಬೆಳ್ಳಿ ತೋಟದ ಹೊಲದಲ್ಲಿ ಗಾಣದೆತ್ತಿನಂತೆ ದುಡಿಯುವುದು ಕಾಶಮ್ಮ ಗಂಡನನ್ನು ಬಿಟ್ಟು ಲಿಂಗರಾಜನಲ್ಲಿ ಸೇರಿದಾಗ ಮಾರ್ತಾಂಡನು ಗಡ್ಡ ಬಿಟ್ಟು ಸನ್ಯಾಸಿಯಾಗಿ ಸಾಯುವುದು ಇವೆಲ್ಲವನ್ನು ಕಾದಂಬರಿಯು ಚಿತ್ರಿಸುತ್ತದೆ.

ಕಾದಂಬರಿಯಲ್ಲಿ ಹಾಲಪ್ಪ ಮತ್ತು ಶಾಣಮ್ಮರು ತಮ್ಮ ಅಳಿಯ ಮತ್ತು ಮಗಳ ಕುಟುಂಬದಲ್ಲಿ ಸಹಾಯಕ ಪಾತ್ರಗಳಾಗಿ ಕಾಣಿಸಿಕೊಳ್ಳುತ್ತಾರೆ ಮತ್ತು ಕಲ್ಲವ್ವ ತುಂಬ ಬಸುರಿಯಾಗಿದ್ದಾಗ ಕುಡುಕ ಗಂಡ ಮುಕ್ಯಾ ಬಲವಂತವಾಗಿ ಕಾಮಕ್ಕೆ ಬಳಸಿಕೊಂಡು ಅವಳ ಬಾಳನ್ನು ಕೊನೆಗೊಳಿಸುವಿಕೆ. ಹಾಗೆಯೇ ಇಲ್ಲಿ ಕಾರಹುಣ್ಣಿಮೆಯ ಹಬ್ಬ, ಅಲಾಯಿ ಕುಣಿತ, ಪೀರರ ಸವಾರಿ, ಕಲಬುರ್ಗಿ ಶಾಣಬಸ್ಸಪ್ಪನ ಜಾತ್ರೆ, ಚುಂಚೂರಿನ ಮಾಪುರದೇವಿ ಜಾತ್ರೆ ಇವೆಲ್ಲವನ್ನು ವೈಭವದಿಂದ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಕಾದಂಬರಿಯಲ್ಲಿ ಕೆಳಜಾತಿಯವರ 'ಜೋಗಣಿ' ಪದ್ಧತಿಯು ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ. ಭರಮ್ಯಾನ ಮಗಳು ನೀಲವ್ವಳಿಗೆ ಜೋಗಣಿಯಾಗುವುದು ಮನಸ್ಸಿಲ್ಲವಾದಾಗ ಬಲವಂತದಿಂದ 'ಜೋಗಣಿ' ಮಾಡುತ್ತಾರೆ. ಇವಳು ನೊಂದುಕೊಂಡು ಪ್ರಾಣ ಕಳೆದುಕೊಳ್ಳುತ್ತಾಳೆ. ಇಂತಹ ಅನೇಕ ಹೆಣ್ಣು ಮಕ್ಕಳು ಈ 'ಜೋಗಣಿ' ಪದ್ಧತಿಗೆ ಬಲಿಯಾಗುತ್ತಾರೆ. ಇದೇ ಜೋಗಣಿ ಪದ್ಧತಿಗೆ ತುಳಜಾಳು ಕೂಡ ಬಲಿಯಾಗಿ ಹುಸೇನಪ್ಪನ ಕೂಡ ಮದುವೆಯಾಗಿ ಊರಿನ ಪಂಚಾಯತಿ ಯಜಮಾನರು ಶಿಕ್ಷೆಗೆ ಒಳಪಡಿಸಿದಾಗ ಪ್ರತಿಭಟಿಸಿ ಬೇರೆ ಊರಿಗೆ ಗಂಡನನ್ನು ಕರೆದುಕೊಂಡು ಹೋಗುವುದು ತುಳಜಾಳ ಗಟ್ಟಿತನವನ್ನು ಕಾದಂಬರಿಯು ತೋರಿಸಿಕೊಟ್ಟಿದೆ. ಕಾದಂಬರಿಯಲ್ಲಿ ಈ 'ಜೋಗಣಿ' ಪದ್ಧತಿಯ ಮೂಢನಂಬಿಕೆಗೆ ಬಲಿಯಾಗುವುದನ್ನು ಗೀತಾ ನಾಗಭೂಷಣರವರು ಚಿತ್ರಿಸಿದ್ದಾರೆ.

ಕಾದಂಬರಿಯಲ್ಲಿ 'ಕಾಮ' ಕೆಳಗೇರಿ ಜನರ ಬದುಕಿನ ಅವಿಭಾಜ್ಯ ಅಂಗಗಳಲ್ಲಿ ಒಂದು. ಮಲ್ಲಪ್ಪ ಜಮಾದಾರನು ಬಹುರಸಿಕನಾಗಿದ್ದನು. ಮದುವೆಯಾಗಿದ್ದರು ಕೂಡ ಜೋಗಣಿಯರ ಮಗ್ಗುಲಲ್ಲಿ ಕೈಯಾಡಿಸಿ ದೇಹಸುಖ ಅನುಭವಿಸುತ್ತಿದ್ದನು. ಜೋಗಣಿ ಪದ್ಧತಿಗೆ ಕೆಳಜಾತಿಯ ಹೆಣ್ಣು ಮಕ್ಕಳು ಮೇಲು ಜಾತಿಗಂಡಸರ ಕಾಮಕ್ಕೆ ಬಲಿಯಾಗುತ್ತಾರೆ. ಈ ಕಾದಂಬರಿಯಲ್ಲಿ ಕಾಮದ ಬಗ್ಗೆ ವಿಶೇಷವಾಗಿ ವರ್ಣಿಸಿದ್ದಾರೆ. ಶಿವಳ್ಳಿಯ ಮೊಹರಂ ಹಬ್ಬವೆಂದರೆ ಸುತ್ತ ಹಳ್ಳಿಗಳಿಗೆ ಹೆಸರುವಾಸಿಯಾಗಿತ್ತು. ಈ ಹಬ್ಬವನ್ನು ಹಿಂದೂ ಮುಸ್ಲಿಂರು ಕೂಡಿ ಆಚರಿಸುವುದು, ಈ ಹಬ್ಬಕ್ಕೆ ಹರಕೆ ಕೊಡುವುದು, ಯುವಕರು ಅಲಾಯಿ ಕುಣಿಯುವುದು,

ಕವ್ವಾಲಿ ಹಾಡು ಹಾಡುವುದು, ಹಲವಾರು ಬಗೆಯ ಅಡಿಗೆ ಮಾಡುವುದು, ಈ ಹಬ್ಬದಲ್ಲಿ ಫತಾರನು ಹುಲಿವೇಷ ಧರಿಸಿ ಕುಣಿಯುವುದು. ಈ ಹಬ್ಬ ಹೈದರಾಬಾದ್ ಕರ್ನಾಟಕದಲ್ಲಿಯೇ ವಿಶೇಷವಾಗಿ ಕಾಣಿಸಿರುವುದನ್ನು ಈ ಕಾದಂಬರಿಯು ತೋರಿಸಿಕೊಟ್ಟಿದೆ.

ಗೀತಾ ನಾಗಭೂಷಣರವರ ಬಹಳಷ್ಟು ಕಾದಂಬರಿಗಳು ಕೆಳಜಾತಿ ಜನರ ನೋವು-ನಲಿವು ಸುಖ-ದುಃಖಗಳು ಅವರ ಸಾಹಿತ್ಯದ ವಸ್ತುಗಳಾಗಿರುವುದು ತಿಳಿದು ಬರುತ್ತದೆ. ಆದ್ದರಿಂದ ಈ 'ಬದುಕು' ಕಾದಂಬರಿಯು ಕೂಡ ಕೆಳಜಾತಿ ಜನರ ಜೀವನವು ಬಡತನದಿಂದ ಕೂಡಿರುವುದನ್ನು ಕಾಣಬಹುದು. ಕಲ್ಯಾಣಿ ಜೈಲು ಸೇರಿದಾಗ ಬೆಳ್ಳಿ ಪಡಬಾರದ ಕಷ್ಟ ಪಟ್ಟು ಜೀವಿಸುವುದು, ಮಲ್ಲವ್ವ ದೆವ್ವ ಹಿಡಿದಂತೆ ಜೀವಿಸುವುದು ಇಲ್ಲಿನ ಸಾವು-ನೋವುಗಳು ಕೆಳಜಾತಿ ಜನರ ಪ್ರತಿಯೊಂದು ಕುಟುಂಬವು ಬಡತನದಿಂದ ನೆಲೆಸಿರುವುದನ್ನು ಈ ಕಾದಂಬರಿಯು ಚಿತ್ರಿಸಿದೆ.

ಶಿವಳ್ಳಿಯಲ್ಲಿ ಶಿವರಾತ್ರಿಯಿಂದ ಯುಗಾದಿ ಹಬ್ಬದ ತನಕ ರಾಶಿ ಮಾಡೋ ಸಂಭ್ರಮ ನೋಡಬಹುದು. ಮಲ್ಲಪ್ಪ ಜಮಾದಾರನ ರಾಶಿ ಅಂದರೆ ಕೆಳಗೇರಿ ಜನರಿಗೆಲ್ಲ ಸುಗ್ಗಿ. ಎಲ್ಲಾ ತರಹದ ಅಡಿಗೆ ಮಾಡಿಸುವುದು, ಸಾಧು ಸಂತರಿಗೆ, ಮುಲ್ಲಾ ಫಕೀರರಿಗೆ ದಾನ ಮಾಡುವುದು, ಬಲಿ ಕೊಡುವುದು, ಹಂತಿ ಮಾಡುವ ಸಂದರ್ಭದಲ್ಲಿ ಹಾಡುಗಳನ್ನು ಹಾಡುವುದು, ಕುಣಿಯುವುದು, ಮಾಲಪ್ಪ ಜಮಾದಾರನ ಹೊಲದ ರಾಶಿ ಅಂದರೆ ಕೆಳಗೇರಿ ಜನರಿಗೆ ಸಣ್ಣದೊಂದು ಜಾತ್ರೆಯಾಗಿ ಕಂಡು ಬರುವುದನ್ನು ಕಾದಂಬರಿಯು ತೋರಿಸಿಕೊಟ್ಟಿದೆ.

ಕಾದಂಬರಿಯಲ್ಲಿ ಹೋಳಿ ಹಬ್ಬವನ್ನು ಆಚರಿಸುವಾಗ ಎಲ್ಲಾರು ಸೇರಿ ಬಣ್ಣದಾಟ ಆಡುವುದು, ಕುಣಿಯುವುದು, ಕಾಮಣ್ಣನನ್ನು ಸುಡುವುದು. ಜೊತೆಗೆ 'ದ್ರೋಪತಿ ವಸ್ತ್ರಾಪರಣ' ಎಂಬ ದೊಡ್ಡಾಟ ಆಡುವುದನ್ನು ಸಹ ಚಿತ್ರಿಸುತ್ತದೆ. 'ಬದುಕು' ಕಾದಂಬರಿಯು ಒಂದು ಮಹತ್ವದ ಕಾದಂಬರಿಯಾಗಿದೆ. ಜೀವನ ಪ್ರೀತಿಯನ್ನು ಅಖಂಡವಾಗಿ ತುಂಬಿಕೊಂಡಿದ್ದ ಮಲ್ಲಪ್ಪ ಜಮಾದಾರನ ಕಡೆಯಿಂದ ಆರಂಭವಾಗುವ ಈ ಕಾದಂಬರಿ ಎಲ್ಲರ ಬದುಕಿನ ಜೀವಂತಿಕೆಯ ನಾಡಿ ಹಿಡಿಯುತ್ತಾ ಅದು ದುರ್ಬಲವಾಗದ ಹಾಗೆ ನೋಡಿಕೊಳ್ಳುತ್ತದೆ. ಆದರೆ ಬದುಕಿನ ಪರಿಸ್ಥಿತಿಯ ಒತ್ತಡಗಳೊಂದಿಗೆ ಮುಖಾಮುಖಿಯಾಗುವ ಜೀವನ ಪರತೆ, ಆ ಸಂದಿಗ್ಧದಲ್ಲಿ ಹುಟ್ಟಿಕೊಳ್ಳುವ ನೈತಿಕತೆ, ಆ ನೈತಿಕತೆಯನ್ನು ಮೀರುವ ಮಾನವೀಯತೆ ಇವು ಕಾದಂಬರಿಯ ಒಟು ಆಶಯವಾಗಿದೆ. ಆದ್ದರಿಂದಲೇ ಈ ಕಾದಂಬರಿಯಲ್ಲಿ ಅನಾವರಣಗೊಳ್ಳುವ ಕಪ್ಪು ಮಂದಿಯ ದೌರ್ಬಲ್ಯಗಳು, ಗಟ್ಟಿತನಗಳು ಪ್ರೀತಿ, ಪ್ರೇಮ, ಹಾದರ, ಕಳವು, ಸುಳ್ಳು ಮುಂತಾದವು ಮಾನವೀಯ ನೆಲೆಗಳನ್ನು ಅರಸಿಕೊಂಡು ಹೋಗುತ್ತವೆ. ಕೆಳ ಜಾತಿ ಜನರ ಅನುಭವಗಳ ಮಗ್ಗುಲುಗಳನ್ನು

ತೆರೆದಿಡುವುದಷ್ಟೇ ಅಲ್ಲ. ಅವಕ್ಕೊಂದು ನಿರ್ದಿಷ್ಟ ಸಾಮಾಜಿಕ ಸ್ಥಾನಮಾನವನ್ನು, ಆಸ್ತಿತೆಯನ್ನು ಕಲ್ಪಿಸಿಕೊಟ್ಟು ಸಾಂಸ್ಕೃತಿಕವಾಗಿ ಮಹತ್ವದ್ದನ್ನು ನಿರ್ಮಿಸುವ ಕೆಲಸ ಈ ಕಾದಂಬರಿಯು ಕಟ್ಟಿಕೊಟ್ಟಿದೆ.

4.2 ಭಾಷೆ ಮತ್ತು ಶೈಲಿ :

ಒಂದು ಜನಾಂಗದ ಸಂಸ್ಕೃತಿಯನ್ನು ಅರಿಯಬೇಕಾದರೆ ಭಾಷೆ ಅತ್ಯಂತ ಮಹತ್ವಪೂರ್ಣವಾದದ್ದು. ಅದೇ ರೀತಿ ಒಂದು ಸಾಹಿತ್ಯ ಕೃತಿಯ ಮಹತ್ವವನ್ನು ತಿಳಿಯಬೇಕಾದರೆ ಭಾಷೆ ಪ್ರಮುಖ ಪಾತ್ರವಹಿಸುತ್ತದೆ. ಒಂದು ಸಾಹಿತ್ಯ ಕೃತಿಗೆ ತನ್ನ ಪ್ರಾದೇಶಿಕ ಭಾಷೆಯ ಬಳಕೆಯಿಂದಲೂ ಮಹತ್ವ ಪಡೆದುಕೊಂಡಿರುತ್ತದೆ. ಕನ್ನಡದಲ್ಲಿ ಮಹತ್ವದ ಕಾದಂಬರಿಗಳಾದ ರಾವ್‌ಬಹದ್ದೂರ ಅವರ 'ಗ್ರಾಮಾಯಣ' ಮಿರ್ಜಿ ಅಣ್ಣಾರಾಯರ 'ನಿಸರ್ಗ' ಕುವೆಂಪು ಅವರ 'ಕಾನೂರ ಹೆಗ್ಗಡಿತಿ', ಹಾಗೂ 'ಮಲೆಗಳಲ್ಲಿ ಮದುಮಗಳು' ಇವೆಲ್ಲವೂ ತಮ್ಮ ಪ್ರದೇಶದ ಜನರ ಆಡುಮಾತನ್ನು ಅರ್ಥಪೂರ್ಣವಾಗಿ ಬಳಸುವ ಕಾರಣದಿಂದಲೂ ಪ್ರಸಿದ್ಧವಾಗಿವೆ.

ಪ್ರಸ್ತುತ ಗೀತಾನಾಗಭೂಷಣರವರ 'ಬದುಕು' ಕಾದಂಬರಿಯು ಹೈದರಾಬಾದ್ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಆಡುಮಾತನ್ನು ಸಮರ್ಥವಾಗಿ ಬಳಸಿಕೊಂಡಿದೆ. ಕಾದಂಬರಿಯು ಓದುಗರನ್ನು ತನ್ನ ಭಾಷೆಯ ಸೊಗಡಿನಿಂದ ಆಕರ್ಷಿಸುತ್ತದೆ. ಈ ಕಾದಂಬರಿಯು ಕೆಳಜಾತಿ ಜನರ ಸಮಗ್ರ ಚಿತ್ರಣವನ್ನು ಒಳಗೊಂಡಿದೆ. ಇವರ ಸಂಪ್ರದಾಯಗಳು, ಆಚರಣೆಗಳು, ಸಾವು ನೋವುಗಳು, ಪ್ರೀತಿ, ವಿಶ್ವಾಸ ಇವೆಲ್ಲವನ್ನು ಕಾದಂಬರಿಯು ಕಟ್ಟಿಕೊಟ್ಟಿದೆ. ಗೀತಾ ನಾಗಭೂಷಣರವರು ಎಲ್ಲಾ ಲೇಖಕರಿಗಿಂತ ಭಿನ್ನವಾಗಿ ಬರೆಯುತ್ತಾರೆ. ಇವರು ಬಳಸುವ ಉರ್ದು ಪದಗಳು, ಬೈಗಳು, ಗಾದೆ, ಒಗಟುಗಳು ಇವೆಲ್ಲವು ಇರುವುದರಿಂದ ಕಾದಂಬರಿಯ ಸತ್ವವನ್ನು ಹೆಚ್ಚಿಸುತ್ತಾರೆ.

ಗೀತಾನಾಗಭೂಷಣರವರ 'ಬದುಕು' ಕಾದಂಬರಿಯು ಹಲವಾರು ಸನ್ನಿವೇಶಗಳಿಂದ ಕೂಡಿದೆ. ಜನಪದ ಕತೆಯ ಸೊಗಡಿನಿಂದ ಕೂಡಿದೆ. ಸಹಜವಾಗಿ ಅವರು ತಮ್ಮ ಪ್ರದೇಶದ ಆಡುನುಡಿಯನ್ನು ತರುವುದರಿಂದ, ಎಲ್ಲ ಪ್ರದೇಶದ ಓದುಗರಿಗೆ ಅರ್ಥವಾಗುವ ಹಾಗೆ ಬರೆದಿದ್ದಾರೆ. ಅಷ್ಟೇ ಅಲ್ಲದೆ ಅವರ ವಿಶಿಷ್ಟ ಭಾಷಾಲಯದಿಂದ ಓದುಗರನ್ನು ಮುಗ್ಧ ಮಂತ್ರವನ್ನಾಗಿ ಮಾಡಿದ್ದಾರೆ.

ಕಾದಂಬರಿ ಎನ್ನುವುದು ಬದುಕಿನ ಯಥಾರ್ಥವಾದ ಚಿತ್ರವನ್ನು ಕಟ್ಟಿಕೊಡುತ್ತದೆ. ಸಾಹಿತ್ಯ ಪ್ರಕಾರವಾದ ಪದ್ಯಕಿಂತ ನೇರವಾಗಿ ಸುಲಭವಾಗಿ ಜನಪ್ರಿಯವಾಗುವುದು ಕಾದಂಬರಿಯ ಭಾಷೆ, ಪ್ರಸ್ತುತ ಗೀತಾನಾಗಭೂಷಣರವರ 'ಬದುಕು' ಕಾದಂಬರಿಯಲ್ಲಿ ಬಳಸುವ ಭಾಷೆ ಅಪ್ಪಟ ಜವಾರಿ ಇಲ್ಲಿ ನಿರಂತರ ಆರು ನೂರು ವರ್ಷಗಳವರೆಗೆ ಉರ್ದು ಭಾಷಿಕ ವಲಯದಲ್ಲಿ ಅರಳಿದ್ದ ದೇಶಿ ಬದುಕಿನ ವಿವರಗಳು ಮೈದಾಳಿ ನಿಂತಿವೆ. ತುಂಬಾ ಕಷ್ಟಪಟ್ಟು ಅಕ್ಷರವನ್ನು ಪಡೆದುಕೊಂಡಿರುವ ಗೀತಾನಾಗಭೂಷಣ ಅವರು ಬರವಣಿಗೆಗೆ ತೊಡಗಿಸಿಕೊಂಡಿದ್ದೇ ಸೋಜಿಗದ ಸಂಗತಿ. ಅದರಲ್ಲೂ ಕೆಳ ಜಾತಿಯವರ ಬದುಕನ್ನು

ತೋರಿಸುವುದು ಮಹತ್ವದ್ದಾಗಿದೆ.

ಗೀತಾ ನಾಗಭೂಷಣರವರು ಪ್ರಾದೇಶಿಕ ಭಾಷೆಯನ್ನು ಕಾದಂಬರಿ ಉದ್ದಕ್ಕೂ ಧಾರಾಳವಾಗಿ ಬಳಸುತ್ತಾರೆ. ಈ ಪ್ರಾದೇಶಿಕ ಭಾಗದ ಕನ್ನಡವನ್ನು ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಸಮರ್ಥ ರೀತಿಯಲ್ಲಿ ತೊಡಗಿಸಿಕೊಂಡು ಬಳಸಿದ್ದಾರೆ. ಈ ಅಧ್ಯಾಯನದಲ್ಲಿ ಅವರ ಭಾಷೆಯ ಬಳಕೆಯನ್ನು ಕಾಣಬಹುದು.

ಅ) ಜಮದಾರ ಮಲ್ಲಪ್ಪನ ಭಾಷೆ :

"ಆ ಚಿಂತಿ ಬಿಡು ನೀನು.... ನಾವು ಹಳ್ಳ್ಯಾಗ ಅವನ ಮ್ಯಾಲ ಕಣ್ಣಿಟರ್ತೀವಿ. ಅಂವಾ ಎಲ್ಲಿಗಿ ಹೋಗ್ತಾನ, ಏನು ಮಾಡ್ತಾನ, ಅಂಬಾದೆಲ್ಲಾ ದಿನಕ್ಕ ದಿನ್ನಾ ನನಗ ಅವರ ಮನಿಲಿಂದ ರಿಪೋಟ ಬರ್ತದ. ನನ್ನ ಖಾಸಾ ಮಂದಿ ಆ ಸಾವ್ಕಾರನ ಮನ್ಯಾಗ ಆಳಮಕ್ಕಳಾಗಿ ದುಡೀಲಕತ್ತಾರೆ. ಅದೂ ಅಲ್ದೆ ಒಂದು ಖಾಸಾ ಮನಶ್ಯಾಗ ಇದೇ ಕೆಲಸಕ್ಕಂತ ಇಡ್ತೀನಿ. ಹಾಂಗೊಂದು ವ್ಯಾಳೆ ಆ ಲಂಗರಾಜ ಊರಾಗಿಲ್ಲಾಂತ ತಿಳೀತಂದ್ರ ನಾವು ಕಲಬುರ್ಗಿಗಿ ಬರ್ತೇವಿ. ನಮ್ಮ ಪೋರಿ ಆಸವಾಸನ್ಯಾಗೆಲ್ಲೆರೆ ಅಂವಾ ಸುಳಿದನಂದ್ರ ಅವನಿಗಿ ಬಂದೂಕಲಿಂದ ಸುಟ್ಟು ಬಿಡ್ತೀನೆಂತ ನಾ ಅವರಪ್ಪಗ ಹೇಳೀನಿ. ಹಂಗೇ ನಮ್ಮ ಪೋರಿ ಏನರೆ ಅವರ ಕೇರ್ಯಾಗ ಕಂಡಳಂದ್ರ ಅಕೀಗಿನೂ ಅವ್ರು ಹೊಡ್ದು ಸಾಯಿಸಲಿ. ನಾ ಏನೂ ಕೇಳಂಗಿಲ್ಲಂತ ಹೇಳೀನಿ.... ಹಂಗೆಲ್ಲಾ ಏನೂ ಆಗಾಣಿಲ್ಲ. ಅವರೂ ಆ ಲಿಂಗರಾಜನ ಮ್ಯಾಲ ಕಣ್ಣಾಗ ಕಣ್ಣಿಟ್ಟು ಕಾಯ್ಲುಕತ್ತಾರ. ಸಾವ್ಕಾರನ ಮಂದೆಲ್ಲಾ ತಡಾ ಮಾಡಲಾರ್ದೆ ತರಾತುರಿಲಿಂದ ಅಂವಗೊಂದು ಮದಿ ಮಾಡಲಿಕ್ಕ ಓಡ್ಯಾಡಲಕತ್ತಾರ. ಇವೆಡ್ಡರದೂ ಬ್ಯಾರೆ ಬ್ಯಾರೆ ಕಡಿ ಮದಿ ಮಾಡಿ ಬಿಟ್ರ ಯೆಲ್ಲಾ ಥಣ್ಣಗಾಗ್ತದ ನೋಡು ಮಗಾ..."

ಕಾಶಮ್ಮ ಮತ್ತು ಲಿಂಗರಾಜ ಪ್ರೀತಿಸಿದ ವಿಷಯ ತಿಳಿದು ಜಮಾದಾರ ಮಲ್ಲಪ್ಪನು ತನ್ನ ಅಳಿಯನಾದ ಹಾಲಪ್ಪನಿಗೆ ಹೇಳುತ್ತಾನೆ –

ಆ) ಗೌಡನ ಭಾಷೆ :

"ಯಾಕಳ್ತಿಯಲೆ ಪರ್ಯಾ ಹೆಂಗಸರಂಗ? ಮನಿ ಹಿರ್ಯಾ ಆಗಿ ನೀನೇ ಹಿಂಗ್ ಮಾರೀಗಿ ಧೋತರ ಹಚಗೊಂಡು ಅಳಕೋತ ಕುಂತರ ನಿನ್ನ ಹೆಂಡ್ರು ಮಕ್ಕಳು ಗಾಬರ್ಯಾಗ್ತಾವ. ಮದಲ ಅಳು ನಿಂದರ್ಸು, ಈಗೇನು? ನಿನಗೊಂದು ಹೊಸಾ ಗುಡಸಲ ಹಾಕಲಕ್ಕ ನಾ ಖರ್ಚು ಕುಡ್ತೀನೆಂತ. ಬಟ್ಟೆ ಬರಿ ಕಾಳು ಕಡ್ಡಿ ಕುಡ್ತಿನೆಂತ. ನೀ ಏನೂ ಎದಿ ಒಡ್ಕೋಬ್ಯಾಡ. ನಿನ್ ಮಗಳು ಜೋಗಿಣಿ ಆದಕ್ಕಿ ಮದಿ ಮಾಡ್ಕೊಂಡು ಸಂಸಾರ ಮಾಡ್ಕೋತ ಅಲ್ಲೇ ಇದ್ದರ ಬೇಸಿತ್ತು. ಆಕಿ ಮದಿವಾಗಿದ್ದು ಕೆಟ್ಟ ಮಾತೇನು ಅಲ್ಲ ಬಿಡು. ನಿಮ್ಮ ಭೆಟ್ಟಿಗಂತ ಊರಿಗಿ ಬಂದದ್ದೇನೂ ತಪ್ಪಲ್ಲ. ಆಕಿಗಿ ನೋಡಿ ನಿಮ್ಮಂದ್ಯಾಂಗೇ ಅಕಿನ ಮ್ಯಾಲ ಕಣ್ಣಿಟ್ಟು ಈಗ ಆಕಿ ಸಿಗಲಾರ್ದಂಗಾದಳಲ್ಲ ಅಂತ ಹೊಟ್ಟೆ ಉರ್ದು ಸಿಟ್ಟು ಬಂದು ನಿನ್ ಮನೀಗಿ ಭೆಂಕಿಯಿಟ್ಟರ್ಬೇಕು. ಅಲ್ಲಂದ್ರ

ಈ ಊರಾಗಿನ ಯಾವರೇ ಉಡಾಳ ಪಾರುಗೋಳ ಕೆಲ್ಸಾ ಇರ್ಬೇಕಿದು. ನೀ ಸುಮ್ಮನಿರು.... ನಾ ಎಲ್ಲಾ ಪತ್ತಾ ಹಚ್ಚತಿನಂತ ಇದರಾಗ ಯಾರ ಕೈ ಅದಾ ಅಂಬಾದು... ಏನೂ ಎದಿ ಒಡ್ಕೋಬ್ಯಾಡ ನೀನೂ.... ನಾ ಇದ್ದೀನಲ್ಲ. ನಿನಗೆ ಏನೇನು ಬೇಕು ಎಲ್ಲಾ ಇಲ್ಲಿಂದ ತಗೊಂಡೋಗು. ನಿಮ್ಮ ಕೇರ್‍ಯಾಗ ಪಂಚಾಯ್ತಿ ನೆರಸ್ತಾರಂತಲ್ಲ ಇವತ್ತ. ಅದೆಲ್ಲಾ ಮುಗೀಲಿ. ನಾಳಿಗಿ ನಮ್ಮ ಎಡ್ಡಾಳಿಗಿ ಕರ್‍ಕೊಂಡ್ಕೋಗಿ ನಿನ್ನ ಗುಡಸಲ ಜಾಗಾ ಸಾಫ ಮಾಡ್ಸಿ ಹೊಸಾ ಚಪ್ಪರ ಹಾಕ್ಕೋಳ್ಳಕ್ಕೆಂತೀ..." ಅಂದನು.

ಪೋಲಿಸ ಪಾಟೀಲ ಶಿವಶಂಕರಪ್ಪಗೌಡ ಆಳು ಮಗ ಪರಪ್ಪನಿಗೆ ಹೇಳುವ ಭಾಷೆಯಾಗಿದೆ.

ಗೌಡನ ಭಾಷೆಯು ಹಿಂದಿನಿಂದಲೂ ಅಧಿಕಾರಸ್ತ ನೆಲೆಯಲ್ಲಿ ಅನಾವಾರಣಗೊಂಡಿದೆ. ಮೇಲಿನ ಉಲ್ಲೇಖವು ಒಬ್ಬ ಊರಿನ ಗೌಡ ತನ್ನ ಕೆಳವರ್ಗದವರ ನೋವುಗಳಿಗೆ ಹೇಗೆ ಮೃದುವಾಗಿ ಸ್ಪಂದಿಸುತ್ತಾನೆ ಎಂಬುದನ್ನು ತಿಳಿಸುತ್ತದೆ.

ಇ) ಅಧಿಕಾರಿಯ ಭಾಷೆ :

"ಬಸ್‌ಸ್ಟ್ಯಾಂಡಿಂದ ಪಾಕೆಟ ಹೊಡ್ಕೊಂಡು ಬಂದಾನ ಸುವ್ವರ್ ನನ್ಮಗಾ.... ಇವತ್ತ ಅವನಿಗಿ ಹಿಡ್ಕೊಂಡೊಯ್ದು ಒದ್ದು ಮೈಯಾಗಿನ ಎಲು ಮುರೀತೀವಿ... ಹಲ್ಕಟ್ ನಾಗ್ಯ... ನಮಗೇ ಚಳ್ಳಿಕಾಯಿ ತಿನಸ್ತಾನಾ ಅಂವಾ? ಪೋಲಿಸರ ಕಣ್ಣು ತಪ್ಪಿಸಿ ಯೆಲ್ಲಿಗೋಗ್ತಾನ... ಏ ನಡ್ಯೋ..." ಎಂದು ಹೇಳಿ ಗುಜ್ಜವ್ವನ ಬೆನ್ನಿಗೆ ಪೆಕ್ಕನೆ ಬೂಡುಗಾಲಿನಿಂದ ಒದ್ದು "ಖರೇ ಹೇಳು... ಎಲ್ಲಿ ಅಡಕ್ಕೊಂಡಾನ ನಿನ್ ಗಂಡಾ? ಇಲ್ಲಂದ್ರ ಛಿನಾಲೀ ನಿನಗೆಳ್ಕೊಂಡು ಒಯ್ತೀವಿ ಠೇಸನ್ನಿಗಿ.... ಅಲ್ಲೊಯ್ದು ನಿನಗ ಒದೀಲಕತ್ತರ ನಿನ್ ಗಂಡ ನಾಗ್ಯಾ ಎಲ್ಲಿದ್ದರನೂ ತಾನೇ ಓಡಿ ಬರ್‍ತಾನ ನಂಬಲ್ಲೀ.... ಹಿಡ್ಕೊಂಡು ನಡ್ರೆಲೇ ಇಕೀಗೀ..." ಅಂದನು.

ಪೋಲಿಸರು ಗುಜ್ಜವ್ವಳನ್ನು ತನ್ನ ಗಂಡ ನಾಗ್ಯಾನ ಬಗ್ಗೆ ಕೇಳುತ್ತಾರೆ. ಪೋಲಿಸ ಅಧಿಕಾರಿಯು ಕಳ್ಳನನ್ನು ಹಿಡಿಯುವ ಸಂದರ್ಭದಲ್ಲಿ ತನ್ನ ಗಡಸಾದ ಧ್ವನಿಯನ್ನು ಹೇಗೆ ಉಪಯೋಗಿಸುತ್ತಾನೆ ಎಂಬುದನ್ನು ಈ ಮೇಲಿನ ಉಲ್ಲೇಖದಿಂದ ತಿಳಿದು ಬರುತ್ತದೆ.

ಈ) ಮಹಿಳೆಯ ಭಾಷೆ :

"ನೋಡು ಪೂಜಾರೆಪ್ಪ ಮುತ್ತ್ಯಾ...... ನಿಂದು ಮತ್ತ ನೀ ಮಾಡಾ ಜೋಗಣೇರ ಧರ್ಮಾಕರ್ಮಾ ಯಾವಾದೂ ನನಗ ತಿಳೆಂಗಿಲ್ಲೆಪ್ಪ..... ಬ್ಯಾಡ ಬ್ಯಾಡಂತ ಕೈ ಜೋಡ್ಸಿ ಕಾಲಿಗಿ ಬಿದ್ದಿದ್ದ ನಾನು. ನಿನ್ನ ಮುಂದ ನೆಲಕ್ಕೆ ಬಿದ್ದು ಬ್ಯಾಡೋ ಮುತ್ತ್ಯಾ ಅಂತ ಹೊಳ್ಯಾಡದರನೂ ನನಗ ಜಬರದಸ್ತಿಲಿಂದ ಎಳ್ಕೊಂಡೊಯ್ದು ಜೋಗಣಿ ಮಾಡಿ ಹಲ್ಕಟ್ ದಂಧೆಗೆ ಹಾಕ್ದಂವಾ ನೀನೇ. ಗುಡ್ಯಾಗಿನ ಆ ದೇವತಿ ಏನು ಹೇಳ್ತಾದೋ ಬಿಡ್ತಾದೋ, ಅದರ ನೀ ಮಾತರ ಅಕಿ ಹೇಳಕಿ ಮಾಡ್ತಿ ನೋಡು. ನಿನ್ನ ಮೈಯಾಗ ಆ ದೇವಿ ಬರ್‍ತಾಳೋ

ಇಲ್ಲೋ, ಅಕಿ ಏನು ಹೇಳ್ತಾಳೋ ನೀ ಏನು ಹೇಳ್ತೋ ಒಂದು ನಮಗ ಗೊತ್ತಾಗಂಗಿಲ್ಲ. ಗುಡಿ ಕಾರಬಾರೆಲ್ಲಾ ನಿನ್ನೊಬ್ಬನ ಕೈಯಾಗೇ ಅದಾ ಅಲ್ಲ. ಕೋಳಿ ಕುರೀಗಿ ತಂದು ದೇವರ ಮುಂದ ಬಲಿ ಕೊಟ್ಟಂಗ ನಮ್ಮಂತಾ ಹಸಿ ಬಿಸಿ ಹರ್‍ಯಾದ ಪೋರಿಗೋಳ ಶೀಲಕ್ಕನೂ ಬಲಿಕುಡ್ತಿ''. ಎಂದು ತುಳಜಾವ್ವ ಬಹಳ ನೊಂದುಕೊಂಡು ಪೂಜಾರಿಗೆ ಈ ಮಾತು ಹೇಳುತ್ತಾಳೆ.

ಕೆಳವರ್ಗದ ಹೆಣ್ಣು 'ಜೋಗಣಿ' ಪದ್ಧತಿಗೆ ಬಲಿಯಾದಾಗ ತನ್ನ ನೋವು ಹೇಗೆ ಇರುತ್ತದೆ. ತನ್ನಂತಹ ಅನೇಕ ಹೆಣ್ಣು ಮಕ್ಕಳ ಬಾಳು ಹೇಗೆ ನಾಶವಾಗುತ್ತದೆ. ಇಂತಹ ಮೂಡನಂಬಿಕೆ ಇಂದಿಗೂ ಕೂಡ ನಮ್ಮ ಸಮಾಜದಲ್ಲಿ ಜೀವಂತವಾಗಿರುವುದನ್ನು ಕಾಣಬಹುದಾಗಿದೆ. ಹಳ್ಳಿಯ ಅನೇಕ ಮುಗ್ಧ ಹೆಣ್ಣು ಮಕ್ಕಳು ಪುರೋಹಿತಶಾಹಿ ಮೇಲು ವರ್ಗದವರ ದೌಜನ್ಯಕ್ಕೆ ಒಳಗಾಗುತ್ತಿರುವುದನ್ನು ಮೇಲಿನ ವಾಖ್ಯೆ ತಿಳಿಸುತ್ತದೆ. ಗೀತಾನಾಗಭೂಷಣರವರು ತುಳಜಾ ಪಾತ್ರದ ಮೂಲಕ ಈ ಜೋಗಣಿ ಪದ್ಧತಿಯ ಹಿಂದಿನ ನಮ್ಮ ವ್ಯವಸ್ಥೆಯ ಕ್ರೂರ ಚಿತ್ರಣವನ್ನು ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಉ) ವಿದ್ಯಾರ್ಥಿಯ ಭಾಷೆ

"ನೀ ಸುಮ್ಕಿರವ್ವ... ನನಗೆಲ್ಲ ಗೊತ್ತದಾ... ಖೂನ್ ಖತಲ್ ಮಾಡಿ ಜೇಲನ್ಯಾಗ ನಮ್ಮಪ್ಪ ಸಜಾ ಕಳೀಲಕತ್ತಾನಂದ್ರ ನನ್ನ ಇಜ್ಜತ್ ಏನಾಗ್ತಾದ? ನನ್ನ ಕಾಲೇಜದಾಗ ನನ್ನ ದೋಸ್ತರ ಮುಂದ ನನ್ನ ಮಾನಮರ್ವಾದಿ ಅಂಬಾದು ಮೂರು ಕಾಸಿಗಿ ಹರಾಜಾಗ್ತದ! ತಿಳಿತೇನು? ಹಿಂತಾ ಅಪ್ಪ ಇರಾದಕ್ಕಿಂತ ಸಾಯಾದು ಛೊಲೋ..." ಎಂದು ಸಣ್ಣಮಲ್ಲು ತನ್ನ ತಾಯಿಯಾದ ಬೆಳ್ಳಿಗೆ ಹೇಳುತ್ತಾನೆ.

ಈಗಿನ ವಿದ್ಯಾವಂತರ ಮನಃಸ್ಥಿತಿ ಹೇಗಿದೆ ಎಂಬುದನ್ನು ಗೀತಾನಾಗಭೂಷಣರವರು ಈ ಮೇಲಿನ ಉಲ್ಲೇಖನದಿಂದ ತೋರಿಸಿಕೊಟ್ಟಿದ್ದಾರೆ.

ಕಾದಂಬರಿಯಲ್ಲಿರುವ ಪ್ರಾದೇಶಿಕ ಭಾಷೆಯ ಬಳಕೆಯು ಕನ್ನಡವನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಸಮರ್ಥ ರೀತಿಯಲ್ಲಿ ಗೀತಾರವರು ತೊಡಗಿಸಿಕೊಂಡಿದ್ದಾರೆ. ಕಾದಂಬರಿಯಲ್ಲಿ ಬರುವ ವಿವಿಧ ಭಾಷಿಕ ಪ್ರಯೋಗಗಳನ್ನು ಗಮನಿಸಬಹುದು.

1) ಉರ್ದು ಮತ್ತು ಮರಾಠಿ ಶಬ್ದಗಳು ಬಳಕೆಯಾಗಿರುವುದು.

ಜರೂರು

ಗಡ್‌ಬಡ್

ಖರಾಬ

ಬಿಲ್‌ಕುಲ್

ಇಜ್ಜತ್ತು

ಗಲ್ಲಿ

ಬಾಜು

ಜೋರು ಜುಲುಮಿ

ಗರೀಬ

ನಸೀಬ

ನಾಜೂಕು

ಕಂಜೂಸ್

ಫಾಯಿದಾ

ದುಕಾನು

ದುಸರಾ

ಬಿಲಕುಲ್

ಪಾನಸೆದ

ಜಂಜುಬಿ

ಚಾವಲ್

ಆಟಸೆ

ಸೆಂಬೋರು

ಆವಾಜ್

ಪನ್ನಾಸೆ

ಗೀತಾ ನಾಗಭೂಷಣರವರು ಕಾದಂಬರಿಯಲ್ಲಿ ಆಗಾಗ ಈ ಮೇಲಿನ ಪದಗಳನ್ನು ಬಳಸುವುದರಿಂದ ಕಾದಂಬರಿಗೆ ಸತ್ವ, ಶಕ್ತಿ, ಸೊಬಗನ್ನು ಹೆಚ್ಚಿಸಿದ್ದಾರೆ.

2) ಸಂಭಾಷಣೆ :

ಕಾದಂಬರಿ ಸಾಹಿತ್ಯ ಪ್ರಕಾರದಲ್ಲಿ ಸಂಭಾಷಣೆಗಳಿಗೆ ಒಂದು ವಿಶಿಷ್ಟ ರೀತಿಯ ಆಕರ್ಷಣೆಯಿರುತ್ತದೆ. ನಾಟಕದಲ್ಲಂತೂ ಪೂರ್ಣ ಸಂಭಾಷಣೆಯಿರುತ್ತದೆ. ಕಾದಂಬರಿಯಲ್ಲಿನ ಸಂಭಾಷಣೆಗಳು, ಕಾದಂಬರಿಕಾರನ ಅಭಿವ್ಯಕ್ತಿಯ ಅನುಕೂಲಕ್ಕಾಗಿ ಬರುವಂಥವುಗಳಾಗಿವೆ. ಕೆಲವು ಕಾದಂಬರಿಗಳಲ್ಲಿ ಸಂಭಾಷಣೆಗಳೇ ಇಲ್ಲದಿರಬಹುದು. ಲೇಖಕನೇ ನೇರವಾಗಿ ಕಥೆಯನ್ನು, ಸನ್ನಿವೇಶವನ್ನು ವಿವರಿಸುತ್ತಾ ಹೋಗಬಹುದು.

ಆದರೆ ಇದು ಓದುಗರಿಗೆ ಅಷ್ಟೊಂದು ಪರಿಣಾಮಕಾರಿಯಾಗಲಿಕ್ಕಿಲ್ಲ. ಸಂಭಾಷಣೆಗಳಲ್ಲಿ ಓದುಗ ತನ್ನನ್ನು ತೊಡಗಿಸಿಕೊಳ್ಳಲು ಕಾರಣ, ಅವನ ದಿನನಿತ್ಯದ ಆಡು ಮಾತು ಅಲ್ಲಿ ಬಂದಿರುವುದರಿಂದ. ಕೊನೆಗೆ ಕಾದಂಬರಿಕಾರ ಆ ಮಾತುಗಳ ಅರ್ಥ ವಿವರಣೆಯನ್ನು, ಆ ಸಂದರ್ಭದ ಹಿನ್ನೆಲೆಯನ್ನು ವಿವರಿಸಿದಾಗ ಓದುಗನಿಗೆ ಕಾದಂಬರಿ ಹೆಚ್ಚು ಸರಳವಾಗಿ ಮತ್ತು ಕುತೂಹಲಕಾರಿಯಾಗಿ ಕಾಣುತ್ತದೆ. ನಾಟಕದಲ್ಲಿ ಇಂತಹ ಅವಕಾಶ ಇರುವುದಿಲ್ಲ. ಅಲ್ಲಿ ಕೇವಲ ಸಂಭಾಷಣೆಗಳಿರುತ್ತವೆ. ಅಂತೆಯೇ ನಾಟಕವನ್ನು ಓದುವುದಕ್ಕಿಂತ ನೋಡುವುದರಿಂದ ಆನಂದವುಂಟಾಗುತ್ತದೆ. ಒಂದು ಕಾದಂಬರಿಯಲ್ಲಿ ನಾಟಕದ ಬಹುಭಾಗವಿರುತ್ತದೆ. ಆದರೆ ಒಂದು ನಾಟಕದಲ್ಲಿ ಕಾದಂಬರಿಯ ಭಾಗ ಇರಲಾರದು. ಒಂದು ಕಾದಂಬರಿಯನ್ನು ನಾಟಕಕ್ಕೆ ರೂಪಾಂತರಿಸಬಹುದು. ಆದರೆ ಒಂದು ನಾಟಕವನ್ನು ಕಾದಂಬರಿಗೆ ರೂಪಾಂತರಿಸುವುದಿಲ್ಲ – ಹೀಗೆ ಕಾದಂಬರಿಯಲ್ಲಿ ಸಂಭಾಷಣೆಗಳಿಗೆ ತನ್ನದೇ ಆದ ವೈಶಿಷ್ಟ್ಯತೆ ಇರುತ್ತದೆ.

ಈ ಹಿನ್ನೆಲೆಯಲ್ಲಿ ಗೀತಾ ನಾಗಭೂಷಣರವರ 'ಬದುಕು' ಕಾದಂಬರಿಯಲ್ಲಿ ಸಂಭಾಷಣೆಯನ್ನು ಗುರುತಿಸಬಹುದಾಗಿದೆ. ಈ ಕಾದಂಬರಿಯಲ್ಲಿ ಹಳ್ಳಿಯ ಜನರ ಸಮಗ್ರ ಚಿತ್ರಣ ಇಲ್ಲಿ ಮೂಡಿ ಬಂದಿದೆ. ಇಲ್ಲಿಯ ಪರಿಸರಕ್ಕೆ ತಕ್ಕಂತೆ ಪಾತ್ರಗಳ ಮೂಲಕ ಸಂಭಾಷಣೆಗಳನ್ನು ತುಂಬಾ ಅಚ್ಚುಕಟ್ಟಾಗಿ ಹೇಳಿಸಿದ್ದಾರೆ.

"ಏನು ಮಗಾ.... ಶಾವಿಗಿ ಹಪ್ಪಳಾ ಸಂಡಗಿ ತಗೀಲಕತ್ತಿದಿ? ಅಕ್ಕಗ ಉಳ್ಳಕ್ಕೇನು?"

"ಹೊಯಿಂದಪ್ಪ.... ಅಕ್ಕಗ ಮತ್ತಕಿ ಮಕ್ಕಳಿಗಿ ಶಾವಿಗಿ ಬಾನಾ ಅಂದ್ರ ಭಾಳ ಪಿರೀತಿ ನೋಡು. ಅವ್ರು ಬಂದು ಕೈಕಾಲು ಮಾರಿ ತೊಳ್ಕೊಂಡು ಉಳ್ಳಕ್ಕ ಕೂಡಟಗೆ ಶ್ಯಾವಿಗೆ ಬಸ್ದು, ಅಕ್ಕಿ ಬಾನಾ ಜಾನಿಡ್ತೇನಿ. ಹಪ್ಪಳ ಸೆಂಡಿಗಿನೂ ಕರ್ದು ಕುಡ್ತೇನಿ...."

"ಗಟ್ಟಿ ಹಾಲು ಕಾಸಿಟ್ಟಿದ್ದಿಲ್ಲ ಮತ್ತ? ಬೆಲ್ಲದ ಮುದ್ದಿಲಿಂದ ಬೆಲ್ಲಾ ಕತ್ತರ್ಸಿ ಕುಡು ಅಂತ ಹೇಳಾದಿತ್ತು ಘತರೂಗ..."

"ಯೆಲ್ಲಾ ತೆಗಸಿಟ್ಟೇನಿ ಅವಾಗೇ.... ಗಡಗಿ ತುಂಬಾ ಗಟ್ಟಿ ಹಾಲು ಕಾಯ್ದು ಅಂಗೈದಪ್ಪ ಕೆನಿ ಬಂದಾದ. ಅವ್ವ ಇವತ್ತೇ ಬೆಣ್ಣಿ ಕಾಸಿ ತಾಜಾ ತುಪ್ಪ ಮಾಡಿಟ್ಟಾಳ. ಪಾರಗೋಳು ತುಪ್ಪ ಮಸರ ಅಂದ್ರ ಸಾಕು. ಹಿಗ್ಗಿ ಕುಣೀತಾವ. ಕಲಬುರ್ಗಿದಾಗ ಅವರಿಗೆಲ್ಲಿ ಹಿಂತಾ ತುಪ್ಪಾ, ಗಟ್ಟಿ ಮಸರ ಸಿಗತದಪ್ಪ....".

"ಬೇಸ್ಯಾಯ್ತು ಬಿಡವ್ವಾ... ಎಲ್ಲಾ ನಿಮ್ಮಕ್ಕಂದೂ, ಆಕಿ ಮಕ್ಕಳ ಪಸಂದೇ ನೋಡ್ತಿರೆಲ್ಲ. ನಿಮ್ಮಕ್ಕನ ಗಂಡ, ನಿನ್ನ ಮಾಮಾ ಹಾಲಪ್ಪನ ಪಂಸದನೂ ನೋಡ್ರಿ. ಮಗಳು ಏಟಿದ್ದರನೂ ನಮ್ಮಕ್ಕಿ.... ಅಳ್ಯಾನ ಪಸಂದಾ ನಾಪಸಂದಾ ಮನಸನ್ಯಾಗಿಟ್ಗೊಂಡು ಅವನ ಮೇಜವಾನಿ ಮದಲ ಮಾಡ್ಬೇಕು ಮಗಾ..."

ಹೀಗೆ ಜಮಾದಾರ ಮಲ್ಲಪ್ಪ ಮತ್ತು ಕಾಶಮ್ಮನ ಜೊತೆ ನಡೆದ ಸಂಭಾಷಣೆ ಕಾದಂಬರಿಯಲ್ಲಿ ರಸವತ್ತಾಗಿ ಮೂಡಿಬಂದಿದೆ. ಇಲ್ಲಿ ಹಳ್ಳಿಗರ ನೆಲದ ಮಾತು ನೈಜವಾಗಿ ಮೂಡಿದೆ. ಅನೇಕ ಗ್ರಾಂಥಿಕ

ಪದಗಳನ್ನು ಹಳ್ಳಿಗರು ತಮ್ಮ ನಾಲಗೆಗೆ ತಕ್ಕಂತೆ ಜೋಡಿಸಿಕೊಂಡು ಅವುಗಳಿಗೆ ಒಂದು ಹೊಸ ಸ್ಪರ್ಶ ಕೊಡುತ್ತಾರೆ. ಆಗ ಅವು ಕೇಳುವುದಕ್ಕೂ ಕುತೂಹಲಕಾರಿಯಾಗುತ್ತವೆ.

ಹೀಗೆ ಗೀತಾ ನಾಗಭೂಷಣರವರು ಕಾದಂಬರಿಯಲ್ಲಿ ಇಂತಹ ಬಹಳಷ್ಟು ಸಂಭಾಷಣೆ ತಂದಿದ್ದಾರೆ. ಈ ಸಂಭಾಷಣೆಯನ್ನು ಗ್ರಾಮೀಣ ಜನರ ಆಡು ಭಾಷೆಯನ್ನು ತರುವುದರಿಂದ ಮಹತ್ವದ ಕಾದಂಬರಿಯನ್ನಾಗಿ ಮಾಡಿದ್ದಾರೆ.

3) **ಜೋಡು ನುಡಿಗಳು :**

ಸುತ್ತ ಮುತ್ತ

ತಗ್ಗಿ ಬಗ್ಗಿ

ಹಕ್ಕೀ ಪಕ್ಕಿ

ಉಲ್ಟಾ ಪಲ್ಟಾ

ಕಳ್ಳು ಬಳ್ಳಿ

ರೀತಿ ರಿವಾಜು

ಈ ಮೇಲಿನ ಜೋಡು ನುಡಿಗಳು ಕಾದಂಬರಿಯಲ್ಲಿ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸುವಾಗ ಒಂದು ಪದದ ಜೊತೆಗೆ ಅದೇ ಅರ್ಥ ಛಾಯೆಯುಳ್ಳ ಅಥವಾ ಅದಕ್ಕೆ ಪೂರಕ ಅರ್ಥದ ಮತ್ತೊಂದು ಪದವನ್ನು ಜೊತೆಗೂಡಿಸಿ ಬಳಸುವುದರಿಂದ ಕಾದಂಬರಿ ಓದುಗರಿಗೆ ಆಪ್ತವಾಗಿ ಓದಿಸಿಕೊಂಡು ಹೋಗುತ್ತದೆ.

4) ವಿಶಿಷ್ಟ ಬೈಗುಳು ಬಳಕೆಯಾಗಿರುವುದು :

ಕಬ್ಬಲಗ್ಯಾ

ಛಿನಾಲೀ

ಸೂಳ್ಯಾಮಗನೇ

ಭೋಸಡಿ

ನಿನ್ ಹೆಣಾ ಎತ್ಲೀ

ಇವುಗಳ ಸಂತಾರ್ಲಿ

ರಂಡೀ

ಥೂ ನಿನ್ನ

ಸುವ್ವರ್ ನನ್ಮಗ

ನಿನ್ನ ಬಾಯಾಗ ಹೆಂಡಿ ಹಾಕಲೀ ಭಾಡಕವೂ...

ನಿನ್ನ ಬಾಯಾಗ ಮಣ್ಣ ಹಾಕಲೀ

ಅವರ ಬಾಯಾಗ ಹುಣ್ಣು ಹುಟ್ಲಿ

ಬದ್ಮಾಶ್

ಕಾದಂಬರಿಯಲ್ಲಿ ಬೈಗುಳು ಯಾವ ಸಂದರ್ಭದಲ್ಲಿ ಬರುತ್ತವೆ ಎಂಬುದನ್ನು ಕಾಣಬಹುದು.

ಜಮಾದಾರ ಮಲ್ಲಪ್ಪನು ಬೀಡಿ ಸೇದಲೆಂದು ಕಡ್ಡಿ ಗೀಚಿದಾಗ ಅದು ಆರುವ ಸಮಯದಲ್ಲಿ "ಇದರವ್ವನಾ ಗಳೀನಾ ತಂದೂ.... ಬಿಕನಾಸಿಗುಟ್ಟಿದ್ದೂ" ಎಂದು ಬೈಯುತ್ತಾನೆ.

ಹದ್ದು ಕೋಳಿ ಮರಿಯನ್ನು ಎತ್ತಿಕೊಂಡು ಹೋಗುವಾಗ "ಏ..ಏ.. ಹಚ್... ಹಚ್ಯಾ.... ನಿನ್ ಬಾಯಾಗ ಮಣ್ಣ ಹಾಕಲೀ.... ನಿನ್ನ ಹೆಣಾ ಎತ್ಲೀ.." ಎಂದು ಮಲ್ಲವ್ವ ಬೈಯುತ್ತಾಳೆ.

ಗೀತಾ ನಾಗಭೂಷಣರವರು 'ಬದುಕು' ಕಾದಂಬರಿಯಲ್ಲಿ ಗ್ರಾಮೀಣ ಜನರ ಭಾಷೆಯನ್ನು ಸಮರ್ಥವಾಗಿ ಉಪಯೋಗಿಸಿದ್ದಾರೆ. ಈ ಗ್ರಾಮೀಣ ಜನರ ಆಡು ಭಾಷೆಯಲ್ಲಿ ಬೈಗುಳಗಳು ಹಾಸುಹೊಕ್ಕಾಗಿವೆ. ಅವುಗಳನ್ನು ಕಾದಂಬರಿಯಲ್ಲಿ ಸನ್ನಿವೇಶಕ್ಕೆ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಬಳಸಿಕೊಂಡು ಕಾದಂಬರಿಯನ್ನು ಆಕರ್ಷಿಸುವಂತೆ ಮಾಡಿದ್ದಾರೆ.

ಶೈಲಿ :

ಶೈಲಿ ಎನ್ನುವುದು ಲೇಖಕನ ಬರಹದ ಭಾಷೆಯಲ್ಲಿ ಭಾವಾಭಿವ್ಯಕ್ತಿಗೆ ಬಳಸುವುದರ ಜೊತೆಗೆ ಉತ್ತಮ ಪದಗಳನ್ನು ಹಾಗೂ ಆ ಪದಗಳನ್ನು ಒಂದು ಕ್ರಮದಲ್ಲಿ ಜೋಡಿಸುವುದಾಗಿದೆ. ಶಬ್ದಗಳ ಸಮಾಗಮವವೇ ಶೈಲಿ. ಮಾತುಗಳ ಜೋಡಣೆಕೆಯೇ ಶೈಲಿ. ಸಾಹಿತಿಗಳು ತಮ್ಮ ಅಭಿಪ್ರಾಯಗಳನ್ನು ಭಾಷೆಯ ಮೂಲಕ ಭಾಷಾಭಿವ್ಯಕ್ತಿಪಡಿಸಲು ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ಪಡೆದುಕೊಂಡಿರುತ್ತಾರೆ.

ಗೀತಾನಾಗಭೂಷಣರವರ 'ಬದುಕು' ಕಾದಂಬರಿ ಶೈಲಿಕೂಡ ಸೊಗಸಾಗಿ ಕಂಡುಬಂದಿದೆ. ಕಾದಂಬರಿ ಶಿವಳ್ಳಿ ಗ್ರಾಮದ ಜಮಾದಾರ ಮಲ್ಲಪ್ಪನ ಕುಟುಂಬದ ಕತೆಯಾಗಿ ಬಿಚ್ಚಿಕೊಂಡರೂ ಇವನ ಕುಟುಂಬದಾಚೆಗೆ ಹತ್ತು ಹಲವಾರು ಪಾತ್ರಗಳು, ಕಥೆಗಳು ಇಲ್ಲಿ ಚಿತ್ರಿತವಾಗಿವೆ. ಪ್ರತಿಯೊಂದು ಪಾತ್ರವು ಕೂಡ ಕಾದಂಬರಿಗೆ ಮುಖ್ಯವಾಗಿವೆ. ಕೆಳಗೇರಿ ಜನರು ಆಚರಿಸುವಂತ ಹಬ್ಬಗಳು, ಆಚರಣೆಗಳು, ಊಟೋಪಚಾರಗಳು ಇವೆಲ್ಲವು ಇರುವುದರಿಂದ ಕಾದಂಬರಿಯು ಓದುಗರನ್ನು ಆಕರ್ಷಿಸುತ್ತದೆ.

ಕಾದಂಬರಿಯಲ್ಲಿ ಹಲವು ಭಾಷಿಕ ಪದಗಳು ಕಂಡುಬರುತ್ತವೆ. ಉರ್ದು ಮತ್ತು ಮರಾಠಿ

ಪದಗಳು ಬೈಗುಳಗಳು ಇರುವುದರಿಂದ ಕಾದಂಬರಿಗೆ ಗಟ್ಟಿತನವನ್ನು ತಂದುಕೊಟ್ಟಿವೆ. ಕಾದಂಬರಿಯಲ್ಲಿ ಬರುವಂತಹ ಪ್ರತಿಯೊಂದು ಸನ್ನಿವೇಶವು ಕೂಡ ಕಣ್ಣಿಗೆ ಕಟ್ಟುವಂತೆ ಗೀತಾ ನಾಗಭೂಷಣರವರು ಚಿತ್ರಿಸಿದ್ದಾರೆ.

ಗೀತಾನಾಗಭೂಷಣರವರು 'ಬದುಕು' ಕಾದಂಬರಿಯಲ್ಲಿ ಹೈದರಾಬಾದ್ ಕರ್ನಾಟಕದ ಪ್ರದೇಶದ ಗುಲ್ಬರ್ಗಾ ಜಿಲ್ಲೆಯ ಸುತ್ತಮುತ್ತಲಿನ ಹಳ್ಳಿಗಳ ಭಾಷಾ ಬಳಕೆಯ ಶೈಲಿಯನ್ನು ಬಳಸಿದ್ದಾರೆ. ಇದಕ್ಕೆ ಕೆಲವು ಉದಾಹರಣೆಗಳನ್ನು ಕಾಣಬಹುದು.

ಅ) "ಕಾಶಿ ನಾ ನಿನಗ ಪಿರೀತಿ ಮಾಡ್ತೀನೆ. ನಿನಗ ಬಿಟ್ಟು ನಾ ಇರಂಗಿಲ್ಲ ನಿನ್ ಸಲ್ಯಾಕ ನಾ ಏಳೇಳು ಸಮುದರ ಈಸಿ ಬರ್ತೀನಿ. ನೀ ಕರದರ ಸಾಕು ನಾ ಹಳ್ಳಾಕೊಳ್ಳಾ ಹಾರಿ ಗುಡ್ಡಗಂವಾರ ದಾಟಿ ಹರ್‍ಯಾ ಹಾಂವಿಗಿ ತುಳ್ದು, ಬರಾ ಹುಲಿಗಿ ತುರುಬಿ ನಿನ್ನ ತೋಳಿನ್ಯಾಗ ಓಡಿ ಬರ್ತೀನೆ. ನನ್ ಬಂಗಾರಿ ನೀ ಒಮ್ಮಿ ನನಗ ಕರದರ ನೋಡು ನಿನ್ ಕಾಲೀಗಿ ಚುಕ್ಕೆಗೋಳ ಗೆಜ್ಜೆ ಕಟ್ಟೇನಿ, ನಿನ್ ಕೊಳ್ಳಾಗಿನ ಸರದಾಗ ಆ ಚಂದ್ರಾಮಗ ತಂದು ಪದಕ ಮಾಡಿ ಪೋಣಿಸ್ತೀನಿ. ನಿನ್ ಕೈಯಾಗ ಕೈಲಾಸ ತಂದಿಡ್ತೀನಿ. ನಿನ್ನುಡ್ಯಾಗ ಬಣ್ಣದ ಕನಸಗೋಳ ಉಡಕ್ಕಿ ತುಂಬ್ತೀನಿ. ನಿನ್ ಟೊಂಕಕ್ಕ ಕಾಮನಬಿಲ್ಲಿನ ಡಾಬಾ ಮಾಡಿ ಇಡ್ತೀನಿ. ನಿನ್ ಸೆರಗಿಗಿ ಮುತ್ತಿನ ಗೊಂಡ್ಯಾ ಕಟ್ತೀನಿ, ಕಾಶಿ ನನ್ ಕಾಶೀ".

ಆ) "ಆ ಮಳೆಗಾಲದ ಸೆರಗು ಶಿವಳ್ಳಿಯ ಮೇಲೆ ಆಡಿತು. ರೋಣಿ ಮಳೆ ಹಂದರ ಕಟ್ಟಿ ಒಕ್ಕಲಿಗರಿಗೆ ಆಸೆ ತೋರಿಸಿ ಕೈಕೊಟ್ಟು ಪರಾರಿಯಾಯಿತು. ಮಿರಗಾ ಹೂಡಿತು. ತೆಳು ಮೋಡ ಆಕಾಶದಲ್ಲಿ ಗುಂಪುಗೂಡಿದವು. ಜಡಿಮಳೆ ಸುರುವಾಯಿತು. ಪಡುಗಾಳಿಯ ತಂಪು ಹಸಿ ಚೆಲ್ಲಿದಂಗಾಗಿ ಭೂಮಿಯ ಮಾರಿಗೆ ರಂಗೇರಿತು. ಕಂಡಲ್ಲೆಲ್ಲ ನೆಲ ಹಸುರುಟ್ಟುಕೊಂಡು ತೊನೆದಾಡಿತು. ಹೊಳೆಯಲ್ಲಿ ಹೊಸ ನೀರು ಹರಿದು ಬಂದಿತು".

ಇ) "ಆಕಾಶದಲ್ಲಿ ಜೋತು ಬಿದ್ದಿರುವ ಈಸಲಾಡ ಎಮ್ಮೆಯ ಕೆಚ್ಚಲಿನಂಥ ಮೋಡಗಳಿಂದಾಗಿ ಬಿಸಿಲಿಲ್ಲದ ತಂಪು ವಾತಾವರಣ ಮುದ ನೀಡುತ್ತಿತ್ತು".

ಈ) ಬಿಸಿಲು ಸತ್ತು ಮುಸ್ಸಂಜೆ ಹುಟ್ಟಿ ಮುಗಿಲ ತುಂಬಾ ಕೆಂಬೂದಿ ಚೆಲ್ಲಾಡಿತ್ತು. ಅಡವಿಗಿ ಹೋಗಿದ್ದ ಮಂದೆಲ್ಲ ನೆತ್ತಿ ಮ್ಯಾಲ ಹುಲ್ಲಿನ ಹೊರಿ, ಕಟಗಿ ಹೊರಿ ಹೊತಗೊಂಡು ಮನೀಗಿ ಹೊಳ್ಳಿ ಹೊಂಟಿದ್ದರು. ದನಗೋಳು ದಂಪಾಧೂಳಿ ನೆಲ ತುಳ್ಕೋತ ಊರಕಡಿ ನಡದಾಗ ರಸ್ತಾದ ಧೂಳೆಲ್ಲಾ ಮಂಜಿನಂಗೆ ಆಕಾಸಕ್ಕಡರಲಕತ್ತಿತ್ತು".

ಉ) "ಬೆಳಗು ಮೈ ಒಡೆಮುರಿದು ಆಕಳಿಸಿ ಕಣ್ಣು ತೆರೆಯಿತು. ಕುರುಬರ ಮಾಳವ್ವನ ಗುಡಿಸಿಂದ ಹುಂಜ ಕೂಗಿದ್ದು ಕೇಳಿಬಂತು ರಸ್ತೆಯಂಚಿನಲ್ಲಿ ನಾಯಿಗಳೆರಡು ಬೊಗಳಿದವು".

ಊ) "ರಾತ್ರಿ ಸಬ್ಬಾಗಿತ್ತು. ಕಲಬುರ್ಗಿ ಜೇಲಖಾನ್ಯಾಗ ಎಲ್ಲಾ ಕೈದಿಗಳೂ ನಿದ್ದಿ ತೆಕ್ಯಾಗ

ಮೈಕೊಟ್ಟು ಬಿದ್ದಿದ್ದರು. ತಾಸಿಗೊಮ್ಮೆ ಜೇಲಿನ ದೊಡ್ಡ ಗಡಿಯಾರ ಡಣ್ ಅಂತ ಬಾರಿಸಿ ಅದರ ಗಟ್ಯಾದ ಆವಾಜಿನಿಂದ ಕತ್ತಲೆ ಕಲಕಿದಂಗಾಗಿ ಮತ್ತೆ ಬೆಸೆದುಕೊಳ್ಳುತ್ತಿತ್ತು''.

ಎ) ''ಅಳ್ಳಿನಿಂತ ಕಮಲದ ಹೂವ ಆಗ್ಯಾಳ ಮಗಳು. ಚೆಲು ಚೆಲು ಹುಣ್ಣೀ ಚಂದ್ರಾಮಾಗ್ಯಾಳ ಆಕಿಗಿ ಹ್ಯಾಂಗ ಪಸಂದ ಮಾಡಂಗಿಲ್ಲೋ ತಮ್ಮಾ''.

ಈ ಮೇಲಿನ ಬರವಣಿಗೆ ಶೈಲಿಯು ಸಹೃದಯರಿಗೆ ಇಷ್ಟವಾಗುವಂತೆ ಮನಸ್ಸಿಗೆ ಮುಟ್ಟುವಂತೆ ಒಂದು ಬೃಹತ್ ಕಾದಂಬರಿಯನ್ನಾಗಿ ಗೀತಾನಾಗಭೂಷಣರವರು 'ಬದುಕು' ಕಾದಂಬರಿಯನ್ನು ಚಿತ್ರಿಸಿದ್ದಾರೆ.

ಯಾವುದೇ ಒಬ್ಬ ಲೇಖಕನು ತಾನುಂಡ ಅನುಭವವನ್ನು ಸವಿದ ಸಂವೇದನೆಯನ್ನು ಮತ್ತು ಭಾವನೆಯನ್ನು ಅಭಿವ್ಯಕ್ತಿಸುವುದೇ ಭಾಷೆಯ ಮುಖಾಂತರ ಕೃತಿಯನ್ನು ಬರೆಯುವ ಲೇಖಕ ಆಯಾಯ ಪ್ರಾದೇಶಿಕ್ಕನುಗುಣವಾಗಿ ಭಾಷೆಯನ್ನು ಬಳಸುತ್ತಾನೆ. ರೂಪಕವಾಗಿಯೋ ಸಾಂಕೇತಿಕವಾಗಿಯೋ ಉಪಮೆ-ಪ್ರತಿಮೆಗಳ ಮೂಲಕ ಕೃತಿಯು ರಚಿಸಲ್ಪಟ್ಟಿರುತ್ತದೆ.

ಕುವೆಂಪುರವರು ತಮ್ಮ ಕೃತಿಗಳಲ್ಲಿ ಬಳಸುವ ಪ್ರಾದೇಶಿಕ ಭಾಷೆಯನ್ನು ಗಮನಿಸಿದಾಗ ಸಹೃದಯನಿಗೆ ಸವಿಯುವಷ್ಟು ಕಾಂತೀಯ ಭಾಷೆಯನ್ನು ಉಣಬಡಿಸುತ್ತಾರೆ. ಉದಾಹರಣೆಗಾಗಿ ಅವರ 'ಕಾನೂರ ಹೆಗ್ಗಡತಿ' ಕಾದಂಬರಿಯಲ್ಲಿ ಬಳಸಿರುವ ಭಾಷೆಯನ್ನು ಗಮನಿಸಬಹುದು.

''ಆ ನಸಗೆಂಪು ಬಣ್ಣದ ಹಣೆಯ ಮೇಲೆ ಮೆತ್ತಿದಂತೆ ವಿಕ್ರವಿನ್ಯಾಸದಿಂದ ಶೋಭಿಸುತ್ತಿದ್ದವು. ಆ ನಸುಗೆಂಪು ಬಣ್ಣದ ಹಣೆಯ ಮೇಲೆ ಕಡುಗಪ್ಪು ಬಣ್ಣದ ಬಳ್ಳಿ ಗುರುಗಳು ರಮಣೀಯ ಸೌಂದರ್ಯವನ್ನು ಮನಸ್ಸಿಗೆ ತರುವಂತಿತ್ತು ಅವರ ಮುಖಭಂಗಿಯಲ್ಲಿ ಅಬಲತಾಭಾವ ಲೇಶವಾದರೂ ಇರಲಿಲ್ಲ''.

ಒಂದು ಪ್ರದೇಶದ ಬದುಕನ್ನು ಆ ಪ್ರದೇಶದ ಜನರಾಡುವ ಭಾಷೆಯಂತೆ ಅಭಿವ್ಯಕ್ತಿಸಿದಾಗ ಅವರ ಬದುಕಿನ ಚಿತ್ರಣ ಯಥಾರ್ಥವಾಗಿ ನೈಜವಾಗಿ ಅಭಿವ್ಯಕ್ತಿಗೊಳ್ಳುತ್ತದೆ. ಹೀಗೆ ಪ್ರಾಮಾಣಿಕ ಭಾಷೆಯನ್ನು ತಮ್ಮ ಕಾವ್ಯ ಕೃತಿಗಳಲ್ಲಿ ಅಭಿವ್ಯಕ್ತಿಸಿದ ಸಾಹಿತಿಗಳಲ್ಲಿ ಗೀತಾನಾಗಭೂಷಣರವರು ವಿಶಿಷ್ಟವಾಗಿ ಹೈದರಾಬಾದ್ ಕರ್ನಾಟಕದ ಗುಲ್ಬರ್ಗಾದ ಆಡು ಭಾಷೆಯನ್ನು ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಪ್ರಾದೇಶಿಕ ಕಾದಂಬರಿಗಳೆಂದು ನಾವು ಗುರುತಿಸಿಕೊಳ್ಳಬೇಕಾದರೆ ಕೆಲವು ಆಲೋಚನೆಗಳನ್ನು ಗ್ರಹಿಸಿಕೊಳ್ಳಬೇಕಾದುದು ಅನಿವಾರ್ಯವೆನಿಸುತ್ತದೆ. 'ಬದುಕು' ಕಾದಂಬರಿಯಲ್ಲಿ ಕೆಳಜಾತಿ ಜನಾಂಗದ ಜೀವನದ ರೀತಿ-ನೀತಿಗಳು, ಅವರು ನಂಬಿದ ಮೌಲ್ಯಗಳು, ಅವರು ಆಚರಿಸುವ ಆಚರಣೆಗಳು, ವಿಧಿವತ್ತಾದ ಕ್ರಿಯೆಗಳು, ಇಂಥ ಜೀವ ಸಂಬಂಧಿಯಾದ ವಿವರಗಳನ್ನು ಹೇಗೆ ಮೈಗೂಡಿಸಿಕೊಂಡಿವೆ ಎಂಬುದರ ಮೇಲೆ ಕಾದಂಬರಿಯ ಪ್ರಾದೇಶಿಕತೆಯನ್ನು ನಿರ್ಣಯಿಸುವ ಪ್ರಯತ್ನಗಳು ನಡೆಯುತ್ತವೆ. ಜಾನಪದ ಜೀವನ ವಿಧಾನ, ಸಾಹಿತ್ಯ ಅಭಿವ್ಯಕ್ತಿ ಈ ಅಂಶಗಳನ್ನು ಗೀತಾನಾಗಭೂಷಣರವರು ಈ ಕಾದಂಬರಿಯಲ್ಲಿ ಗಟ್ಟಿಯಾಗಿ

ಉಳಿಸಿಕೊಂಡು ಪ್ರಾದೇಶಿಕ ಕಾದಂಬರಿಯನ್ನಾಗಿ ರಚಿಸಿದ್ದಾರೆ.

4.3 ಪಾತ್ರ ಚಿತ್ರಣ :

ಗೀತಾ ನಾಗಭೂಷಣರವರ 'ಬದುಕು' ಕಾದಂಬರಿಯಲ್ಲಿ ಅನೇಕ ಪಾತ್ರಗಳು ಕಂಡು ಬರುತ್ತವೆ. ಇಲ್ಲಿ ಪ್ರತಿಯೊಂದು ಪಾತ್ರವು ಕೂಡ ಮುಖ್ಯವಾಗಿವೆ. ಈ ಕಾದಂಬರಿಯ ಗ್ರಾಮೀಣ ಪ್ರದೇಶದಲ್ಲಿ ರಚನೆಯಾಗಿರುವುದರಿಂದ ಸನ್ನಿವೇಶಕ್ಕೆ ತಕ್ಕಂತೆ ಪಾತ್ರಗಳು ರಚನೆಯಾಗಿವೆ. ಚಿಕ್ಕ ಮಕ್ಕಳಿಂದ ಹಿಡಿದು ಮುದುಕರವರೆಗೆ ಹಲವು ವಯೋಮಾನದ ಪಾತ್ರಗಳಿವೆ. ದುಷ್ಟರಿದ್ದಾರೆ. ಆದರ್ಶವಾದಿಗಳಿದ್ದಾರೆ. ಮಹಿಳೆಯರಿದ್ದಾರೆ. ಪುರುಷರಿದ್ದಾರೆ. ಬೇರೆ ಬೇರೆ ಧರ್ಮದ ಮತ್ತು ಜಾತಿಯ ಜನರು ಇದ್ದಾರೆ. ಸಂಪ್ರದಾಯವಾದಿಗಳಿದ್ದಾರೆ. ಇವೆಲ್ಲವು ಜೀವಂತವಾದ ಪಾತ್ರಗಳಾಗಿವೆ. ಗೀತಾನಾಗಭೂಷಣರವರು ಕಾದಂಬರಿಯಲ್ಲಿ ಈ ಪಾತ್ರಗಳನ್ನು ಅವುಗಳೇ ಆಡುವ ಮಾತುಗಳಿಂದ ಚಿತ್ರಿಸಿದ್ದಾರೆ. ತಮ್ಮ ನಿರೂಪಣೆಯಿಂದ ವಿವರಣೆ ವಿಶ್ಲೇಷಣೆಗಳಿಂದ ಚಿತ್ರಿಸಿದ್ದಾರೆ.

ಈ ಕಾದಂಬರಿಯಲ್ಲಿ ಬಹಳಷ್ಟು ಪಾತ್ರಗಳನ್ನು ಕಾಣಬಹುದು. ಜಮಾದಾರ ಮಲ್ಲಪ್ಪ, ಲಿಂಗರಾಜ, ಫತರೂ, ಮಲ್ಲವ್ವ, ನಾಗವ್ವಾಯಿ, ಹಾಲಪ್ಪ, ಕಲ್ಯಾಣಿ, ಮಾರ್ತಾಂಡ, ಕಾಶಮ್ಮ, ಶರಣಮ್ಮ, ನೀಲಮ್ಮ, ನಜಮಾ, ಶೀವು, ಸಣ್ಣಮಲ್ಲು, ಸಾಬಯ್ಯ, ಹೀಗೆ ಹಲವಾರು ಪಾತ್ರಗಳನ್ನು ಕಾಣಬಹುದು. ಕಾದಂಬರಿಯಲ್ಲಿ ವಿಶೇಷವಾಗಿ ಕಾಣುವ ಪಾತ್ರವೆಂದರೆ ಕಾಶಮ್ಮನ ಪಾತ್ರ. ಈ ಪಾತ್ರವು ಕಾದಂಬರಿಯ ಉದ್ದಕ್ಕೂ ಕಾಣಿಸಿಕೊಳ್ಳುತ್ತದೆ. ಇನ್ನು ಉಳಿದ ಪಾತ್ರಗಳು ಕೂಡ ಕಾದಂಬರಿಗೆ ಜೀವ ತುಂಬಿವೆ. ಗೀತಾನಾಗಭೂಷಣರವರು ಕಾದಂಬರಿಯಲ್ಲಿ ಪಾತ್ರಗಳನ್ನು ಯಾವ ರೀತಿಯಾಗಿ ಚಿತ್ರಿಸಿದ್ದಾರೆ ಎಂಬುದನ್ನು ಕಾಣಬಹುದು.

ಅ) ಪುರುಷ ಪಾತ್ರಗಳು :

ಜಮಾದಾರ ಮಲ್ಲಪ್ಪ

ಈತನು ಜಮಾದಾರ ಕೆಲಸವನ್ನು ಮಾಡುತ್ತಿರುತ್ತಾನೆ. ಈ ಕೆಲಸ ಮಾಡುವುದರಿಂದ ಸರಕಾರ ಕಡೆಯಿಂದ ಇನಾಮಿ ಜಮೀನು ಸಿಕ್ಕಿತ್ತು. ಈತನಿಗೆ ಮಲ್ಲವ್ವಳಿಂದ ವಿವಾಹವಾಗಿ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗುವಿದ್ದು ಸುಖಕರ ಜೀವನವನ್ನು ನಡೆಸುತ್ತಾನೆ. ಇತನು ಬಹು ರಸಿಕನಾಗಿದ್ದನು. ಕೊರವರ ಈರಮ್ಮನೊಂದಿಗೆ ಅನೈತಿಕ ಸಂಬಂಧವನ್ನು ಇಟ್ಟುಕೊಂಡಿದ್ದನು. ಕಾದಂಬರಿಯು ಈ ಪಾತ್ರದ ಮೂಲಕ ಬಿಚ್ಚಿಕೊಳ್ಳುತ್ತದೆ. ಜಮಾದಾರ ಮಲ್ಲಪ್ಪ ಎಲ್ಲಾ ತರಹದ ಹಬ್ಬಗಳನ್ನು ಆಚರಿಸುತ್ತಿದ್ದನು. ಎಲ್ಲಾ ಹಬ್ಬಗಳಿಗೆ ಒಂದೊಂದು ಕುರಿಯನ್ನು ಬಲಿಕೊಡುತ್ತಾನೆ. ಮಲ್ಲಪ್ಪನ ಹೊಲದ ರಾಶಿ ಎಂದರೆ ಕೆಳಗೇರಿ

ಜನರಿಗೆಲ್ಲ ಸುಗ್ಗಿ. ಇತನು ಮನೆಯಲ್ಲಿ ಯಾವುದೇ ಕಾರ್ಯಗಳು ಮಾಡಿದರೆ ಬೀಗರು ಮತ್ತು ತನ್ನ ಗೆಳೆಯರನ್ನು ಕರೆಸಿ ಮಾಡುತ್ತಿದ್ದನು. ಜಮಾದಾರಕೆ ಕೆಲಸ ಮಾಡುವುದರಿಂದ ಕೆಳಗೇರಿಯಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತಿದ್ದ ರಸ್ತೆಯ ಮೇಲೆ ಹೋಗಿ ಬರುವವರ ಸಲಾಂ ಸ್ವೀಕರಿಸುತ್ತಿದ್ದನು. ಇತನು ಎಲ್ಲಾ ಜನರಿಗೆ ಬೇಕಾದವನಾಗಿದ್ದನು. ಬರಗಾಲ ಬಿದ್ದಾಗ ತನ್ನ ಅಂಗಳದಲ್ಲಿಯ ಹಗೆ ತೆಗೆಸಿ ಹೊಲ ಮಾದಿಗರನ್ನದೆ ಊರ ಬಡವರಿಗೆಲ್ಲ ಜ್ವಾಳ ಹಂಚಿದ್ದ. ಈತನ ಎರಡು ಎತ್ತುಗಳು ಕಾರ ಹುಣ್ಣಿಮೆಯಲ್ಲಿ ಒಳ್ಳೆಯ ಹೆಸರುಗಳಿಸಿದ್ದವು. ಮನೆಯಲ್ಲಿ ಇಬ್ಬರು ಆಳುಗಳು ಇದ್ದು ಕೆಳಗೇರಿಯಲ್ಲಿ ಒಳ್ಳೆಯ ಜೀವನವನ್ನು ನಡೆಸುತ್ತಾನೆ. ಇತನ ಸಣ್ಣ ಮಗಳಾದ ಕಾಶಮ್ಮಳನ್ನು ಮಾರ್ತಾಂಡನ ಜೊತೆ ವಿವಾಹ ಮಾಡಿಕೊಟ್ಟಿರುತ್ತಾನೆ. ಆದರೆ ಕಾಶಮ್ಮ ತಾನು ಮೊದಲು ಪ್ರೀತಿಸಿದ ಲಿಂಗರಾಜನಲ್ಲಿ ಸೇರುತ್ತಾಳೆ. ಈ ವಿಷಯ ತಿಳಿದು ತನ್ನ ಮನೆಯ ಮರ್ಯಾದೆಗೆ ಅಂಜಿ ಹೊಳೆ ಹಾರಿ ಸಾಯುತ್ತಾನೆ. ಹೀಗೆ ಕಾದಂಬರಿಯಲ್ಲಿ ಜಮಾದಾರ ಮಲ್ಲಪ್ಪನ ಪಾತ್ರ ವಿಶಿಷ್ಟತೆಯಿಂದ ಕೂಡಿದೆ.

ಕಲ್ಯಾಣಿ :

ಇತನು ಜಮಾದಾರ ಮಲ್ಲಪ್ಪನ ಮಗನಾಗಿರುತ್ತಾನೆ. ತಂದೆಯಂತೆಯೇ ಒಳ್ಳೆಯ ಮನುಷ್ಯನಾಗಿ ಜಮಾದಾರಕೆ ಕೆಲಸ ಮಾಡಲು ಮನಸಿಲ್ಲವಾದಾಗ ಇನಾಮಿ ಜಮೀನು ವಾಪಾಸುಕೊಟ್ಟು ಉಳಿದ ಹೊಲದಲ್ಲಿ ಕೆಲಸ ಮಾಡುತ್ತ ಜೀವಿಸುತ್ತಾನೆ. ಇತನು ತನ್ನ ದೊಡ್ಡ ಅಕ್ಕಳ ಮಗಳಾದ ಬೆಳ್ಳಿಯನ್ನು ಮದುವೆಯಾಗಿ ಒಂದು ಗಂಡು ಮತ್ತು ಹೆಣ್ಣು ಮಗಳಾದ ಬೆಳ್ಳಿಯನ್ನು ಮದುವೆಯಾಗಿ ಒಂದು ಗಂಡು ಮತ್ತು ಹೆಣ್ಣು ಮಗಳನ್ನು ಪಡೆದಿರುತ್ತಾನೆ. ತಂದೆಯನ್ನು ಕಳೆದುಕೊಂಡ ನಂತರ ಅನೇಕ ಕಷ್ಟಗಳಿಗೆ ಈಡಾಗುತ್ತಾನೆ. ಅಕ್ಕ ಕಾಶಮ್ಮ ಮತ್ತು ಲಿಂಗರಾಜ ಒಂದಾದ ವಿಷಯ ತಿಳಿದು ತಲೆ ಕೆಟ್ಟು ಹೋದ ಸಂದರ್ಭದಲ್ಲಿ ಒಂದು ಸಂಜೆ ಕುಡಿಯಲಿಕ್ಕೆ ಕುಂತಾಗ ತನ್ನಕ್ಕ ಕಾಶಿ ವಿಷಯದಲ್ಲಿ ಜಂಬಗಿ ಮುಕುಡಪ್ಪ ಆಡಿದ ಮಾತು ಕೇಳಿ ಸಿಟ್ಟಿಗೆದ್ದು ಅವನಿಗೆ ದಬ್ಬಿಸಿದ್ದುದಕ್ಕೆ ಅವನ ತಲೆಗೆ ಕಲ್ಲು ಬಡಿದು ಸತ್ತುದಕ್ಕೆ ಹದಿನಾಲ್ಕು ವರ್ಷ ಜೈಲು ಶಿಕ್ಷೆ ಅನುಭವಿಸುತ್ತಾನೆ. ಇವನು ಜೈಲು ಸೇರಿದಾಗ ಇವನ ಕುಟುಂಬವು ಪಡಬಾರದ ಕಷ್ಟ ಪಡುತ್ತದೆ. ಇತನು ಜೈಲು ಶಿಕ್ಷೆ ಅನುಭವಿಸಿ ಬಂದನಂತರ ಮಗ ಸೇರುವುದಿಲ್ಲ. ಹೊಲದಲ್ಲಿ ದುಡಿಯುತ್ತ ಮತ್ತೆ ಬೇರೆ ಹೊಲವನ್ನು ದಾಣಿಗೆ ತೆಗೆದುಕೊಂಡು ಒಳ್ಳೆಯ ಬೆಳೆಯನ್ನು ಬೆಳೆಸುತ್ತಾನೆ.

ಇತನ ಮನೆಯಲ್ಲಿ ತನ್ನ ಅಣ್ಣನಂತೆ ನೆಲೆಸಿರುವ ಫತರೂಗೆ ಒಂದು ಭಾಗ ಹೊಲವನ್ನು ಕೊಡುತ್ತಾನೆ. ಒಂದು ಬಾರಿ ಕಲ್ಯಾಣಿ ಮತ್ತು ತನ್ನ ಹೆಂಡತಿಯಾದ ಬೆಳ್ಳಿಯು ಇಬ್ಬರು ಶ್ರೀಶೈಲ ಮಲ್ಲಯ್ಯನ ದರ್ಶನ ಪಡೆದುಕೊಂಡು ವಾಪಸ್ಸು ಬರುವಾಗ ಅವರ ಬಸ್ಸು ಎಕ್ಸಿಡೆಂಟಾಗಿ ಮಲ್ಲಯ್ಯನ ಪಾದ ಸೇರಿಕೊಂಡಿರುತ್ತಾರೆ.

ಹೀಗೆ ಕಲ್ಯಾಣಿಯ ಪಾತ್ರವು ಕಾದಂಬರಿಯಲ್ಲಿ ಒಳ್ಳೆಯ ಪಾತ್ರವಾಗಿ ಕಾಣಿಸಿಕೊಳ್ಳುತ್ತದೆ.

ಫತರೂ :

ಇತನು ಸುಲ್ತಾನಬೀಯ ಮಗನಾಗಿರುತ್ತಾನೆ. ಸುಲ್ತಾನಬೀಗೆ ಹಾವು ಕಚ್ಚಿ ಸಾಯುವ ಸಂದರ್ಭದಲ್ಲಿ ಮಗ ಫತರೂನನ್ನು ಮಲ್ಲಪ್ಪ ಜಮಾದಾರನ ಕೈಗೊಪ್ಪಿಸಿ ಸತ್ತು ಹೋಗಿರುತ್ತಾಳೆ. ಇತನು ಮಲ್ಲಪ್ಪ ಜಮಾದಾರನ ಮನೆಯಲ್ಲಿ ಪ್ರಾಮಾಣಿಕವಾಗಿ ಮನೆಯ ಮಗನಂತೆ ಕೆಲಸ ಮಾಡುತ್ತಾನೆ. ಮಲ್ಲಪ್ಪನ ಮನೆಯಲ್ಲಿ ಕಷ್ಟ ಸುಖಗಳು ಬಂದಾಗ ಸರಿ ಸಮಾನಾಗಿ ಅಂಚಿಕೊಂಡು ಕೆಲಸ ಮಾಡುತ್ತಾನೆ. ಈ ಮನೆಯಲ್ಲಿ ಯಾವುದೇ ಹಬ್ಬಗಳನ್ನು ಆಚರಿಸಿದರೆ ಈತನೇ ಹೋಗಿ ಎಲ್ಲಾರನ್ನು ಕರೆದುಕೊಂಡು ಬರುತ್ತಿದ್ದನು. ಮೊಹರಂ ಹಬ್ಬದಲ್ಲಿ ಹುಲಿವೇಷ ಧರಿಸಿಕೊಂಡು ಟೊಂಕಕ್ಕೆ ಗೆಜ್ಜೆಸರ ಬಿಗಿದುಕೊಂಡು ಕೈಯಲ್ಲಿಯ ಬಾರುಕೋಲಿನಿಂದ ಮಂದಿಯನ್ನು ಸರಿಸುತ್ತ ಕುಣಿಯುವುದು ವಿಶೇಷವಾಗಿ ಕಂಡು ಬರುತ್ತಾನೆ. ಜಾತಿಯಲ್ಲಿ ಮುಸ್ಲಿಂನಾದರೂ ಕೂಡ ಮಲ್ಲಪ್ಪ ಜಮಾದಾರನ ಮನೆಯಲ್ಲಿ ದಕ್ಷತೆಯಿಂದ ನೆಲೆಸಿರುತ್ತಾನೆ. ಮಲ್ಲಪ್ಪ ಜಮಾದಾರನು ಸತ್ತ ನಂತರ ಇತನ ಮಗನಾದ ಕಲ್ಯಾಣಿಯಲ್ಲಿ ನೆಲೆಸಿರುತ್ತಾನೆ. ಕಲ್ಯಾಣಿಯು ಜೈಲು ಸೇರಿದಾಗ ಫತರೂ ಮತ್ತು ಇತನ ಹೆಂಡತಿಯಾದ ನಜಮಾ ಇಬ್ಬರು ಕಲ್ಯಾಣಿಯ ಹೊಲದಲ್ಲಿ ದುಡಿಯುತ್ತಾರೆ. ಕಲ್ಯಾಣಿಯು ಇತನಿಗೆ ಮದುವೆ ಮಾಡಿ ಒಂದು ಭಾಗದಷ್ಟು ಹೊಲ ಕೊಡುತ್ತಾನೆ. ಎಲ್ಲಾರನ್ನು ಪ್ರೀತಿಯಿಂದ ಮಾತನಾಡಿಸುವ ಗುಣವನ್ನು ಫತರೂ ಹೊಂದಿದ್ದನು. ಕಲ್ಯಾಣಿ ಮತ್ತು ಫತರೂ ಅಣ್ಣತಮ್ಮಂದಿರಂತೆ ಆತ್ಮೀಯವಾಗಿ ನೆಲೆಸಿದ್ದರು. ಮಲ್ಲಪ್ಪ ಜಮಾದಾರನ ಕುಟುಂಬದುದ್ದಕ್ಕೂ ಕಾಣಿಸಿಕೊಳ್ಳುವ ಫತರೂನ ಪಾತ್ರವು ಇಡೀ ಕಾದಂಬರಿಯಲ್ಲಿಯೇ ಗಮನ ಸೆಳೆಯುವ ಪಾತ್ರವಾಗಿದೆ.

ಹಾಲಪ್ಪ :

ಇತನು ಜಮಾದಾರ ಮಲ್ಲಪ್ಪನ ಅಕ್ಕನ ಮಗ ಮತ್ತು ಅಳಿಯ ಕೂಡ ಆಗಿರುತ್ತಾನೆ. ಗಿರಣಿಯ ಕೆಲಸವನ್ನು ಮಾಡಿ ತನ್ನ ಕುಟುಂಬವನ್ನು ನಡೆಸುತ್ತಾನೆ. ಶರಣಮ್ಮನ ಜೊತೆ ಮದುವೆಯಾಗಿ ಒಂದು ಹೆಣ್ಣು ಮತ್ತು ಒಂದು ಗಂಡು ಮಗುವಿದ್ದು ಕಲಬುರ್ಗಿಯಲ್ಲಿ ನೆಲೆಸಿರುತ್ತಾನೆ. ಇತನ ಜೀವನದಲ್ಲಿ ಎಷ್ಟು ಕಷ್ಟಗಳು ಬಂದರೂ ಕೂಡ ಎದುರಿಸಿ ಜೀವನ ನಡೆಸುತ್ತಾನೆ. ಮನಸ್ಸಿಗೆ ಬೇಸರವಾದಾಗ ಸೇಂದಿ ಕುಡಿಯುತ್ತಿದ್ದನು. ತನ್ನ ಮಾವನ ಮನೆಯಲ್ಲಿ ಯಾವುದೇ ಹಬ್ಬಗಳು ಆಚರಿಸಲಿ ಹೋಗುತ್ತಿದ್ದನು. ಹಾಲಪ್ಪ ಶರಣಬಸಪ್ಪನ ಜಾತ್ರೆಗೆ ತನ್ನ ಗೆಳೆಯರನ್ನು ಮತ್ತು ತನ್ನ ಮಾವನ ಮನೆಯವರನ್ನು ಕರೆಸಿ ಬಹಳ ಸಂತೋಷದಿಂದ ಆಚರಿಸುತ್ತಾನೆ. ತನ್ನ ಮಾವನ ಮಗಳಾದ ಕಾಶಮ್ಮಳನ್ನು ತಾನು ನೋಡಿದ ಸೊಲ್ಲಾಪುರದ ಮಾರ್ತಾಂಡನ ಜೊತೆ ವಿವಾಹ ಮಾಡಿಸುತ್ತಾನೆ. ಇತನು ಎಲ್ಲಾರಿಗೆ ಸಹಾಯ ಮಾಡುವಂತಹ ಗುಣವನ್ನು ಹೊಂದಿದ್ದನು. ತನ್ನ ಮಗಳಾದ ಬೆಳ್ಳಿಯನ್ನು ತನ್ನ ಮಾವನ ಮಗನಾದ ಕಲ್ಯಾಣಿಯೊಂದಿಗೆ ಮದುವೆ

ಮಾಡಿಕೊಡುತ್ತಾನೆ. ಬೆಳ್ಳಿಯ ಕುಟುಂಬವು ಕಷ್ಟದಲ್ಲಿದ್ದಾಗ ಶಿವಳ್ಳಿಗೆ ಹೋಗಿ ಸಹಾಯ ಮಾಡುತಿತದ್ದನು. ಅಳಿಯ ಕಲ್ಯಾಣಿಯು ಜೈಲು ಸೇರಿದಾಗ ಬಹಳಷ್ಟು ಪ್ರಯತ್ನ ಪಟ್ಟು ಹೊರಗಡೆ ಬಿಡಿಸುತ್ತಾನೆ. ತನ್ನ ಮಗಳು ಸುಖವಾಗಿರಲಿ ಎಂದು ಕಣ್ಣಲ್ಲಿ ಕಣ್ಣಿಟ್ಟು ಕಾಪಾಡಿಕೊಳ್ಳುತ್ತಾನೆ. ಹಾಲಪ್ಪ ತನ್ನ ಮಗನಾದ ಶಿವುನನ್ನು ಮದುವೆ ಮಾಡುತ್ತೇನೆ ಎಂದು ಕೇಳಿದಾಗ ಅವನು ಬೇಡ ನಾನು ಸನ್ಯಾಸಿಯಾಗಿ ಬಾಳುತ್ತೇನೆ ಎಂದು ಹೇಳುವುದರ ಮೂಲಕ ಮನಸ್ಸನ್ನು ನೋಯಿಸಿರುತ್ತಾನೆ. ಹಾಲಪ್ಪ ದಿನಗಳು ಕಳೆದಂತೆ ಮೆತ್ತಗಾಗಿರುತ್ತಾನೆ. ಗಿರಣಿ ಕೆಲಸಕ್ಕೆ ಹೋಗುತ್ತಿರಲಿಲ್ಲ. ಕೆಲಸದಿಂದ ಬಿಟ್ಟುಕೊಟ್ಟು ಕಳಿಸುವಾಗ ಗಿರಣಿ ಮಾಲಿಕರು ಒಂದೀಸು ರೊಕ್ಕ ಕೊಟ್ಟಿದ್ದರು. ಯಾವದೋ ಫಂಡು ಅಂತ ಅದೇ ರೊಕ್ಕ ಬ್ಯಾಂಕಿನಲ್ಲಿಟ್ಟು ಬಡ್ಡಿ ತಿನ್ನುತ್ತಿದ್ದನು. ಹೀಗೆ ಹಾಲಪ್ಪನ ಪಾತ್ರವು ಕಾದಂಬರಿಯಲ್ಲಿ ಸಹಾಯಕ ಪಾತ್ರವಾಗಿ ಕಾಣಿಸಿಕೊಳ್ಳುತ್ತದೆ.

ಲಿಂಗರಾಜ

ಇತನ್ನು ಸಾವ್ಕಾರ ಗುರುಲಿಂಗಪ್ಪನ ಮಗನಾಗಿರುತ್ತಾನೆ. ಕಲಬುರ್ಗಿಯಲ್ಲಿ ಓದು ಮುಗಿಸಿ ಶಿವಳ್ಳಿಗೆ ಬಂದಿರುತ್ತಾನೆ. ಕೆಳಜಾತಿ ಕಾಶಮ್ಮನನ್ನು ಪ್ರೀತಿಸಿ ಮದುವೆಯಾಗುತ್ತೇನೆ ಎಂದು ಭರವಸೆ ಕೊಟ್ಟಿರುತ್ತಾನೆ. ಈ ಪ್ರೀತಿಯ ವಿಷಯ ತಿಳಿದು ಇಬ್ಬರ ತಂದೆಯರು ಜಗಳವಾಡಿ ದೂರ ಮಾಡಿರುತ್ತಾರೆ. ಲಿಂಗರಾಜ ಕಾಶಮ್ಮನ ವಿಷಯದಲ್ಲಿ ತಲ್ಲಿನನಾಗಿರುತ್ತಾನೆ. ಆದರೆ ತಂದೆ ಗುರುಲಿಂಗಪ್ಪ ಸಾವ್ಕಾರ ಕೆರೆ ಭಾಸಗಿ ಹಳ್ಳಿಯ ಗೌಡನ ಹಿರೇ ಮಗಳಾದ ನೀಲಮ್ಮನೊಂದಿಗೆ ವಿವಾಹ ಮಾಡುತ್ತಾನೆ. ಲಿಂಗರಾಜ ಒಂದು ಗಂಡು ಮಗುವನ್ನು ಪಡೆದಿರುತ್ತಾನೆ. ಲಿಂಗರಾಜ ಕಾಶಮ್ಮನನ್ನು ತನ್ನ ಮನದಿಂದ ದೂರ ಮಾಡಿಕೊಂಡಿರುತ್ತಾನೆ. ಕಾಶಮ್ಮ ಸೊಲ್ಲಪುರದ ಮಾರ್ತಾಂಡನ ಜೊತೆ ಮದುವೆಯಾಗಿ ಆಗಾಗ ಶಿವಳ್ಳಿಗೆ ಬಂದು ತನ್ನ ಗೆಳತಿ ಲಕ್ಕಿಯ ಜೊತೆ ಹೋಗಿ ಲಿಂಗರಾಜನನ್ನು ಬೇಟಿಯಾಗುತ್ತಿದ್ದಳು. ಆದ್ದರಿಂದ ಲಿಂಗರಾಜನಿಗೆ ಕಾಶಮ್ಮನ ಮೇಲೆ ಮತ್ತೆ ಪ್ರೀತಿ ಹೆಚ್ಚಾಗುತ್ತದೆ. ತನ್ನ ತಂದೆಯ ಅಧಿಕಾರ ಕೈಗೆ ಬಂದಾಗ ಕಾಶಮ್ಮನ ಮನೆಗೆ ಹೋಗಿ ಅವಳ ಗಂಡನಿಗೆ ಹೇಳಿ ಕಾಶಮ್ಮನನ್ನು ಕರೆದುಕೊಂಡು ಬಂದು ತನ್ನ ಊರ ಹೊರಗಿನ ತೋಟದ ಮನೆಯಲ್ಲಿ ತಾಳಿ ಕಟ್ಟದೆ ಇಟ್ಟುಕೊಳ್ಳುತ್ತಾನೆ. ಈ ಘಟನೆ ಇಡೀ ಶಿವಳ್ಳಿಯಲ್ಲೇ ಒಂದು ದೊಡ್ಡ ಗದ್ದಲವನ್ನು ಎರಡು ಕುಟುಂಬಗಳಲ್ಲಿ ಕಾರ್ಮೋಡವನ್ನು ಸೃಷ್ಟಿಸುತ್ತದೆ. ಈ ವಿಷಯ ತಿಳಿದು ಹೆಂಡತಿ ನೀಲಮ್ಮ ಸಿಟ್ಟಿಗೇಳುತ್ತಾಳೆ. ಲಿಂಗರಾಜ ನೀಲಮ್ಮನ ಕೈ ಹಿಡಿದು "ನನಗ ಕಾಶಮ್ಮಗ ಬಿಟ್ಟು ಇರಾದಾಗಂಗಿಲ್ಲ... ನಾನು ಮಾಡಾದು ತಪ್ಪಂತ ನಿಮಗೆಲ್ಲಾ ಅನಸ್ತದ ಖರೇ... ಆದರ ನಾನೇನು ಮಾಡ್ಲಿ? ನನ್ನ ಮನದ ಕೈಯಾಗ ನಾ ಮಜಬೂರ ಆಗೀನಿ... ನಿನಗ ಕೈ ಮುಗಿದು ಕೇಳ್ಕೋತೀನಿ. ನಿನಗ ಏನೂ ಕಮ್ಮಿ ಆಗದಂಗ ನೋಡ್ಕೋತೀನಿ. ತ್ವಾಟದ ಮನ್ಯಾಗ ಇರ್ತಾಳ. ಆಕೀಗಿ ಮಾತು ಕೊಟ್ಟೇನಿ" ಎಂದು ಹೇಳಿ ಸಮಾಧಾನ ಪಡಿಸುತ್ತಾನೆ. ಮುಂದೆ ನೀಲಮ್ಮಳಿಗಿಂತ ಹೆಚ್ಚಾಗಿ ಕಾಶಮ್ಮನನ್ನು ಪ್ರೀತಿಯಿಂದ ನೋಡಿಕೊಂಡು ಜೀವನ ನಡೆಸುತ್ತಾನೆ.

ಹೀಗೆ ಲಿಂಗರಾಜನ ಪಾತ್ರವು ಕಾದಂಬರಿಯಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ.

ಮಾರ್ತಾಂಡ :

ಇತನು ಸೊಲ್ಲಪುರದಲ್ಲಿ ಬಟ್ಟೆ ಗಿರಣಿಯಲ್ಲಿ ಕೆಲಸ ಮಾಡುವಂತ ವ್ಯಕ್ತಿ. ಇತನು ತಂದೆ ತಾಯಿಗಳನ್ನು ಕಳೆದುಕೊಂಡು ಒಬ್ಬನೇ ಜೀವನ ನಡೆಸುತ್ತಿರುತ್ತಾನೆ. ಹಾಲಪ್ಪನ ಗೆಳೆಯ ಶಂಭಣ್ಣನ ಸಹಾಯದಿಂದ ಕಾಶಮ್ಮನನ್ನು ನೋಡಲು ಬಟ್ಟೆ ಗಿರಣಿಗೆ ರಜೆ ಹಾಕಿ ಕಲಬುರ್ಗಿಗೆ ಬಂದಿರುತ್ತಾನೆ. ಕಾಶಮ್ಮನನ್ನು ನೋಡಿ ಮೆಚ್ಚುಕೊಂಡು ವಾಪಸು ಹೋಗುತ್ತಾನೆ. ಈ ವಿಷಯವನ್ನು ಶಂಭಣ್ಣನಿಂದ ಹೇಳಿಕಳಿಸುತ್ತಾನೆ. ಹಾಲಪ್ಪನಿಗೆ ಸಂತೋಷವಾಗುತ್ತದೆ. ಕಾಶಮ್ಮಳು ಕೂಡ ಮಾರ್ತಾಂಡನನ್ನು ವಪ್ಪುತ್ತಾಳೆ. ಇನ್ನೊಂದು ದಿನ ಮಾರ್ತಾಂಡನನ್ನು ಕರಿಸಿದಾಗ ಜಮಾದಾರ ಮಲ್ಲಪ್ಪ ಮತ್ತು ಮಲ್ಲವ್ವ ನೋಡಿ ಮೆಚ್ಚಿಕೊಂಡು ಮದುವೆಯ ನಿಶ್ಚಿತಾರ್ಥ ಕಾರ್ಯಕ್ರಮವನ್ನು ಮುಗಿಸುತ್ತಾರೆ.

ಮಾರ್ತಾಂಡನು ಒಳ್ಳೆಯ ಗುಣವನ್ನು ಹೊಂದಿದ ವ್ಯಕ್ತಿಯಾಗಿದ್ದನು. ಮುಂದೆ ಒಂದೇ ತಿಂಗಳಿನಲ್ಲಿ ಕಲಬುರ್ಗಿಯ ಶರಣಬಸ್ಸಪ್ಪನ ಗುಡಿಯಲ್ಲಿ ಮದುವೆಯಾಗುತ್ತದೆ. ಮಾರ್ತಾಂಡನಿಗೆ ತನ್ನ ಮನೆಯವರು ಯಾರು ಇಲ್ಲದ ಕಾರಣ ಹಾಲಪ್ಪನೇ ಎರಡು ಕಡೆ ಇದ್ದು ಮದುವೆ ಮಾಡುತ್ತಾನೆ. ಈ ಮದುವೆಗೆ ಮಾರ್ತಾಂಡನ ಹತ್ತಾರು ಗೆಳೆಯರು ಬಂದಿದ್ದರು ಮತ್ತು ಹಾಲಪ್ಪನ ಗೆಳೆಯರು ಕೂಡ ಬಂದಿದ್ದರು. ಶಿವಳ್ಳಿಯಿಂದ ಜಮಾದಾರ ಮಲ್ಲಪ್ಪನಿಗೆ ತೀರ ಹತ್ತಿರದ ಜನ ಮಾತ್ರ ಬಂದಿದ್ದರು. ಮರುದಿನ ಹಾಲಪ್ಪ, ಶಾಣಮ್ಮ, ಮಾರ್ತಾಂಡ, ಕಾಶಮ್ಮ ಎಲ್ಲಾರು ಒಂದು ಕೂಡಿ ಬಜಾರಕ್ಕೆ ಹೋಗಿ ಬಟ್ಟೆ, ಬಂಗಾರದ ಒಡವೆಗಳನ್ನು ತರುತ್ತಾರೆ. ಇವೆಲ್ಲವನ್ನು ಮಾರ್ತಾಂಡ ಮತ್ತು ಕಾಶಮ್ಮಳಿಗೆ ಕೊಡಿಸುತ್ತಾರೆ. ಮಾರ್ತಾಂಡನು ಮದುವೆಯ ಎಲ್ಲಾ ಕಾರ್ಯಗಳನ್ನು ಮುಗಿಸಿಕೊಂಡು ಕಾಶಮ್ಮನನ್ನು ಕರೆದುಕೊಂಡು ಸೊಲ್ಲಾಪುರಕ್ಕೆ ಹೋಗುತ್ತಾನೆ. ಕಾಶಮ್ಮನನ್ನು ಪ್ರೀತಿಯಿಂದ ನೋಡಿಕೊಂಡು ಸಂಸಾರ ಸಾಗಿಸುತ್ತಾನೆ. ಮಾರ್ತಾಂಡ ಮೆತ್ತನ ಸ್ವಭಾವದವನಾಗಿರುವುದರಿಂದ ಕಾಶಮ್ಮ ಹೇಳಿದ ಹಾಗೆ ಕೇಳುತ್ತಿದ್ದನು. ಇತನು ಕಾಶಮ್ಮನನ್ನು ಮನೆಯಲ್ಲಿಯೇ ಬಿಟ್ಟು ಕೆಲಸಕ್ಕೆ ಹೋಗುತ್ತಿದ್ದನು. ಇವನು ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಾನೆ. ತನ್ನ ಬದುಕಿನಲ್ಲಿ ಬಡತನವಿದ್ದರು ಕೂಡ ಹೆಂಡತಿಯ ಪ್ರೀತಿಯ ವಿಷಯದಲ್ಲಿ ಶ್ರೀಮಂತಿಕೆಯನ್ನು ತೋರಿಸುತ್ತಾನೆ.

ಹಾಲಪ್ಪನ ಮಗಳು ಬೆಳ್ಳಿಯು ಮೈನೆರೆದಾಗ ಮಾರ್ತಾಂಡ ಮತ್ತು ಕಾಶಮ್ಮ ಇಬ್ಬರು ಕಲಬುರ್ಗಿಗೆ ಹೋಗಿ ಬಂದಿದ್ದರು. ಕಾಶಮ್ಮ ಶಿವಳ್ಳಿಯ ಕಾರ ಹುಣ್ಣಿಮೆ ಹಬ್ಬಕ್ಕೆ ಹೋದಾಗ ತನ್ನ ಗೆಳತಿಯ ಸಹಾಯದಿಂದ ತಾನು ಮೊದಲು ಪ್ರೀತಿಸಿದ ಲಿಂಗರಾಜನನ್ನು ಭೇಟಿಯಾಗಿ ಬಂದಿದ್ದಳು. ಒಂದು ದಿನ ಲಿಂಗರಾಜನು ಕಾಶಮ್ಮನ ಮನೆಗೆ ಹೋಗಿ ಮಾರ್ತಾಂಡನಿಗೆ ಹೇಳಿ ಕಾಶಮ್ಮನನ್ನು ಕರೆದುಕೊಂಡು ಹೋಗುತ್ತಾನೆ. ಕೆಲವು ದಿನಗಳ ನಂತರ ಮಾರ್ತಾಂಡ ಹಾಲಪ್ಪನ ಸಹಾಯದಿಂದ ಕಾಶಮ್ಮನನ್ನು ಭೇಟಿಯಾಗುತ್ತಾನೆ. "ಕಾಶೀ....

ನನ್ ಕಾಶೀ.... ನಿನಗ ಬಿಟ್ಟು ನನಗ ಬದಕಲಕ್ಕ ಆಗಂಗಿಲ್ಲೇ ನನ್ನರಗಿಣೇ.... ಆದದ್ದಾಯ್ತು.... ಈಗನೂ ಏನೂ ರಿಪೇರಿ ಆಗಲಾರದೋಟೇನೂ ಬಿಗಡಾಸಿಲ್ಲ! ವಾಪಸ್ಸು ನನ ಮನೀಗಿ ಬಂದು ಬಿಡೇ ಕಾಶೀ... ಅದು ನಿಂದೇ ಮನಿ ಅದಾ.... ನಾ ಕರ್ಝೊಂಡೋಗ್ತಿನೀ... ನಿನಗ ಕಣ್ಣಾಗಿನ ಗೊಂಬಿ ಹಂಗ ಜತನ ಮಾಡ್ತಿನಂತ. ಕಾಶೀ ನನ್ ಮ್ಯಾಲ ದಯಾ ತೋರೂ... ನೀ ಇಲ್ಲದರ ನಾ ಬದಕಂಗಿಲ್ಲೇ...'' ಎಂದು ಬಿಕ್ಕಿ ಬಿಕ್ಕಿ ಅಳತೊಡಗುತ್ತಾನೆ. ಆದರೆ ಕಾಶಮ್ಮ ಮಾರ್ತಾಂಡನ ಜೊತೆ ಬರುವುದಿಲ್ಲ. ಕೊನೆಗೆ ಮಾರ್ತಾಂಡ ಪಡಬಾರದ ಕಷ್ಟ ಪಟ್ಟು ಹುಚ್ಚನಂತೆ ಗಡ್ಡ ಬಿಟ್ಟು ಹಳ್ಳದ ದಂಡೆಗೆ ಹೋಗಿ ಪ್ರಾಣ ಬಿಡುತ್ತಾನೆ. ಹೀಗೆ ಮಾರ್ತಾಂಡನ ಪಾತ್ರವು ಕಾದಂಬರಿಯಲ್ಲಿ ಅಮಾಯಕನ ಪಾತ್ರವಾಗಿ ಕಾಣಿಸಿಕೊಳ್ಳುತ್ತದೆ.

ಮುದಕಪ್ಪ :

ಕಲಬುರ್ಗಿಯ ಮಾರುತಿ ಝೋಪಡಪಟ್ಟಿಯಲ್ಲಿ ಹಿರಿಯ ವ್ಯಕ್ತಿಯಾಗಿದ್ದನು. ಈ ಕೇರಿಯ ಯಾವುದೇ ಗುಡಿಸಲಲ್ಲಿ ಜಗಳ, ಜೂಟೆ ಆದರೆ ಇತನೆ ನ್ಯಾಯ ಪಂಚೇತಿ ಬಗೆಹರಿಸುತ್ತಿದ್ದನು. ಈ ಗುಡಿಸಲುಗಳಲ್ಲಿ ಯಾವುದೇ ಕಾರ್ಯಗಳನ್ನು ಮಾಡಿದರೆ ಮುದಕಪ್ಪನನ್ನು ಕರೆಯುತ್ತಿದ್ದರು. ಇತ ಎಲ್ಲಾರನ್ನು ಒಳ್ಳೆಯ ಗುಣದಿಂದ ನೋಡಿಕೊಳ್ಳುತ್ತಿದ್ದನು. ಧೈರ್ಯವಂತ ವ್ಯಕ್ತಿಯಾಗಿದ್ದನು ಮತ್ತು ಬೇರೆಯವರಿಗೆ ಆಗಾಗ ಸಹಾಯ ಮಾಡುತ್ತಿದ್ದನು. ಹೀಗೆ ಮುದಕಪ್ಪನ ಪಾತ್ರವು ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತದೆ.

ಸಣ್ಣ ಮಲ್ಲು :

ಇತನು ಕಲ್ಯಾಣಿಯ ಮಗನಾಗಿರುತ್ತಾನೆ. ತಂದೆ ಜೈಲು ಸೇರಿದಾಗ ಮನೆಯಲ್ಲಿ ತಾಯಿ ಪಡಬಾರದ ಕಷ್ಟಪಟ್ಟು ಜೀವಿಸುತ್ತಾಳೆ. ಆಗ ಇತನನ್ನು ತನ್ನ ಅಜ್ಜಿಯ ಊರಾದ ಕಲಬುರ್ಗಿಯಲ್ಲಿ ಓದಲು ಬಿಟ್ಟಿರುತ್ತಾಳೆ. ಸಣ್ಣ ಮಲ್ಲುನಿಗೆ ಕಾಲೇಜು ಹುಡುಗರು ನೀನು ಕೊಲೆಗಡುಕನ ಮಗ ಎಂದು ಹೇಳುವುದು ಕೇಳಿ ಸಾಕಾಗಿತ್ತು. ಮುಂದೆ ತಂದೆ ಕಂಡರೆ ಸೇರುವುದಿಲ್ಲ. ಇಂತವರ ಮಗನಾಗಿ ಇರುವುದು ಬೇಡವೆಂದು ತನ್ನ ಪಾಲಿಗಿದ್ದ ಆಸ್ತಿಯನ್ನು ತಂಗಿ ಸುಖದೇವಿ ಹೆಸರಿಗೆ ಮಾಡಿ ಮುಂದೆ ಊರಿಗೆ ಬರುವುದನ್ನು ಬಿಟ್ಟಿರುತ್ತಾನೆ. ತಾನು ಕೆಲಸ ಮಾಡುವ ಕಚೇರಿಯಲ್ಲಿದ್ದ ಮರಾಠಿ ಹುಡಿಗಿಯ ಜೊತೆ ಪ್ರೇಮ ವಿವಾಹವಾಗಿ ಜೀವನ ನಡೆಸುತ್ತಾನೆ. ಕಾದಂಬರಿಯು ಈಗಿನ ಯುವಕರ ಮನಃಸ್ಥಿತಿ ಏನೆಂಬುದನ್ನು ಸಣ್ಣ ಮಲ್ಲು ಪಾತ್ರದ ಮೂಲಕ ತೋರಿಸುತ್ತದೆ.

ಆ) ಮಹಿಳಾ ಪಾತ್ರಗಳು

ಮಲ್ಲವ್ವ :

ಮಲ್ಲವ್ವ ಜಮಾದಾರ ಮಲ್ಲಪ್ಪನ ಹೆಂಡತಿಯಾಗಿದ್ದಳು. ಬಹಳ ಮೆತ್ತನ ಸ್ವಭಾವದವಳಾಗಿದ್ದಳು. ಮಕ್ಕಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು. ಮಕ್ಕಳೆಂದರೆ ಪಂಚಪ್ರಾಣ. ಯಾವುದೇ ಹಬ್ಬಗಳನ್ನು

[illegible]

ಆಚರಿಸಿದರೂ ಮಕ್ಕಳನ್ನು ಬಿಟ್ಟು ಮಾಡುತ್ತಿರಲಿಲ್ಲ. ಜಮಾದಾರ ಮಲ್ಲಪ್ಪ ಮಲ್ಲವ್ವನನ್ನು ಮನಸ್ಸು ನೋಯಿಸದ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು. ಇವರ ಕುಟುಂಬವು ಕೆಳಗೇರಿಯಲ್ಲಿ ಹೆಸರುವಾಸಿಯಾಗಿತ್ತು. ಸಣ್ಣ ಮಗಳು ಕಾಶಮ್ಮ ಲಿಂಗರಾಜನನ್ನು ಪ್ರೀತಿಸುತ್ತಾಳೆ. ಈ ವಿಷಯ ತಿಳಿದು ಮಲ್ಲವ್ವ ಕಾಶಮ್ಮನನ್ನು ಮನಸ್ಸಿಗೆ ಬಂದ ಹಾಗೆ ಬಯ್ಯುತ್ತಾಳೆ. ಮಗಳು ಕೆಟ್ಟದಾರಿ ಹಿಡಿಯುತ್ತಾಳೆ ಎಂದು ಯೋಚಿಸಿ ಗಂಡನಿಗೆ ಹೇಳಿ ದೊಡ್ಡ ಮಗಳಾದ ಶಾರಣಮ್ಮನಲ್ಲಿ ಬಿಟ್ಟು ಮಾರ್ತಾಂಡನ ಜೊತೆ ವಿವಾಹ ಮಾಡಿಕೊಡುತ್ತಾರೆ.

ಜಮಾದಾರ ಮಲ್ಲಪ್ಪ ಕೊರವರ ಈರಮ್ಮನೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿರುವ ವಿಷಯ ತಿಳಿದರು ಕೂಡ ಮಲ್ಲವ್ವ ಸುಮ್ಮನಿದ್ದು ಈರಮ್ಮಳಿಂದ ಅಕ್ಕ ಎಂದು ಕರೆಸಿಕೊಳ್ಳುತ್ತಾಳೆ. ಮೊಮ್ಮಗಳು ಮೈನೆರೆದಾಗ ಇಬ್ಬರು ಕಲಬುರ್ಗಿಗೆ ಹೋಗಿ ಬಂದಿರುತ್ತಾರೆ. ಮಗ ಕಲ್ಯಾಣಿಗೆ ಮೊಮ್ಮಗಳಾದ ಬೆಳ್ಳಿಯ ಜೊತೆ ವಿವಾಹ ಮಾಡುತ್ತಾರೆ. ಮೊಮ್ಮಗಳು ಬಂದ ನಂತರ ಮನೆಯ ಕೆಲಸ ಮಲ್ಲವ್ವಳಿಗೆ ಕಡಿಮೆಯಾಗುತ್ತದೆ. ಮನೆಯ ಅಂಗಳದಲ್ಲಿ ಬೆಳ್ಳಿಯು ಕಾಲಿಗೆ ಚೈನ ಹಾಕಿಕೊಂಡು ತಿರುಗುವುದನ್ನು ಕಂಡು ಮಲ್ಲವ್ವ ಸೊಸೆಯನ್ನು ಅಕ್ಕರೆಯಿಂದ ಕಾಣತೊಡಗುತ್ತಾಳೆ. ಹೀಗೆ ಇವರ ಕುಟುಂಬವು ಹಾಲು ಜೇನಿನಂತೆ ಇರುತ್ತದೆ.

ಫತರೂ ಮನೆಯ ಮಗನಂತೆ ನೆಲೆಸಿರುತ್ತಾನೆ. ಕಾಶಮ್ಮ ಗಂಡನನ್ನು ಬಿಟ್ಟು ತಾನು ಮೊದಲು ಪ್ರೀತಿಸಿದ ಲಿಂಗರಾಜನಲ್ಲಿ ಸೇರಿರುತ್ತಾಳೆ. ಈ ವಿಷಯ ತಿಳಿದು ಮಲ್ಲವ್ವ ಕಂಗಾಲಾಗುತ್ತಾಳೆ. ಮಲ್ಲಪ್ಪನು ಕೂಡ ಈ ವಿಷಯ ತಿಳಿದು ತನ್ನ ಮನೆಯ ಮರ್ಯಾದೆಗೆ ಅಂಜಿ ಸಾಯುತ್ತಾನೆ. ಆಗ ಮಲ್ಲವ್ವ ಪಡಬಾರದ ಕಷ್ಟ ಪಡುತ್ತಾಳೆ. ಮಗ ಕಲ್ಯಾಣಿಯು ಜೈಲು ಸೇರಿದಾಗ ಮಲ್ಲವ್ವ ಚಿಂತಿಸುತ್ತ ಮನಸ್ಸಿಗೆ ದೆವ್ವ ಬಡಿದಂತಾಗಿ ಸತ್ತು ಹೋಗುತ್ತಾಳೆ. ಹೀಗೆ ಮಲ್ಲವ್ವಳ ಪಾತ್ರವು ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತದೆ.

ಶರಣಮ್ಮ :

ಶರಣಮ್ಮ ಜಮಾದಾರ ಮಲ್ಲಪ್ಪನ ಮೊದಲನೆಯ ಮಗಳು. ಹಾಲಪ್ಪನಿಂದ ಮದುವೆಯಾಗಿ ಇಬ್ಬರ ಮಕ್ಕಳನ್ನು ಪಡೆದು ಜೀವಿಸುತ್ತಿದ್ದಳು. ತನ್ನ ತವರು ಮನೆಯವರು ಯಾವುದೇ ಹಬ್ಬಗಳನ್ನು ಆಚರಿಸಿದರೆ ಇವಳನ್ನು ಕರೆದು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಗಂಡ ಗಿರಿಣಿಯ ಕೆಲಸ ಮಾಡಿ ಸಂಸಾರವನ್ನು ನಡೆಸುತ್ತಿದ್ದನು. ಕಲಬುರ್ಗಿಯ ಶರಣಬಸವಪ್ಪನ ಜಾತ್ರೆಗೆ ತನ್ನ ತವರು ಮನೆಯವರನ್ನು ಕರೆಸಿ ಬಹಳ ಸಂಭ್ರಮದಿಂದ ಆಚರಿಸುತ್ತಾಳೆ. ಶರಣಮ್ಮ ತನ್ನ ಗಂಡ ಹೇಳಿದ ಹಾಗೆ ಕೇಳುತ್ತಿದ್ದಳು. ಇವರ ಕುಟುಂಬವು ಬಹಳ ಅನೋನ್ಯವಾಗಿತ್ತು. ಶರಣಮ್ಮ ತನ್ನ ಮಕ್ಕಳಾದ ಬೆಳ್ಳಿ ಮತ್ತು ಶಿವುನನ್ನು ಪ್ರೀತಿಯಿಂದ ಬೆಳೆಸಿದ್ದಳು. ತನ್ನ ತವರು ಮನೆಯ ಸಂಬಂಧ ಗಟ್ಟಿಯಾಗಿ ಬೆಳೆಯಲಿ ಎಂದು ತನ್ನ ಮಗಳು ಬೆಳ್ಳಿಯನ್ನು ತನ್ನ ತಮ್ಮನಾದ ಕಲ್ಯಾಣಿಗೆ ಮದುವೆ ಮಾಡಿಕೊಡುತ್ತಾಳೆ. ಬೆಳ್ಳಿ ಗಂಡನ ಮನೆಯಲ್ಲಿ ಕೆಲವು ದಿನ ಸುಖವಾಗಿ ನೆಲೆಸುತ್ತಾಳೆ. ಕಲ್ಯಾಣಿ ಜೈಲು ಸೇರಿದಾಗ ಬೆಳ್ಳಿಯು ಮಕ್ಕಳನ್ನು ಬೆಳೆಸುತ್ತ ಪಡಬಾರದ ಕಷ್ಟ

ಪಟ್ಟು ಜೀವಿಸುತ್ತಿರುವಾಗ ಶರಣಮ್ಮ ಆಗಾಗ ಬಂದು ಸಹಾಯ ಮಾಡುತ್ತಾಳೆ. ಮೊಮ್ಮಗ ಸಣ್ಣ ಮಲ್ಲುನನ್ನು ಕಲಬುರ್ಗಿಗೆ ಕರೆದುಕೊಂಡು ಹೋಗಿ ಓದಿಸುತ್ತಾಳೆ.

ಶರಣಮ್ಮ ತನ್ನ ತವರು ಮನೆಯ ಸಂಬಂಧವನ್ನು ಕೊನೆಯವರೆಗೆ ಉಳಿಸಿಕೊಳ್ಳುತ್ತಾಳೆ. ಕಲ್ಯಾಣಿಯು ಜೈಲುನಿಂದ ಬಂದು ಬೆಳ್ಳಿಯನ್ನು ಸೇರಿದಾಗ ಮಗಳ ಕಷ್ಟ ದೂರವಾಯಿತು ಎಂದು ಸಂತೋಷಪಡುತ್ತಾಳೆ. ಆದರೆ ತಾನು ಬೆಳೆಸಿದ ಮೊಮ್ಮಗ ಸಣ್ಣಮಲ್ಲು ತಾನು ಕೆಲಸ ಮಾಡುವ ಕಚೇರಿಯಲ್ಲಿದ್ದ ಮರಾಠಿ ಹುಡಿಗಿಯ ಜೊತೆ ಮದುವೆಯಾಗಿದ್ದು ಗೊತ್ತಾಗಿ ನೊಂದುಕೊಳ್ಳುತ್ತಾಳೆ. ಮಗ ಶಿವು ಕೂಡ ಮದುವೆಯೇ ಬೇಡ ನಾನು ಸನ್ಯಾಸಿಯಾಗಿ ಬಾಳುತ್ತೇನೆ ಎಂದು ಮನಸ್ಸು ನೋಯಿಸಿರುತ್ತಾನೆ. ಹೀಗೆ ಶರಣಮ್ಮಳ ಪಾತ್ರವು ಕಾದಂಬರಿಯಲ್ಲಿ ಸಹಾಯಕ ಪಾತ್ರವಾಗಿ ಕಾಣಿಸಿಕೊಳ್ಳುತ್ತದೆ.

ಕಾಶಮ್ಮ :

ಕಾದಂಬರಿಯಲ್ಲಿ ಕಾಶಮ್ಮನ ಪಾತ್ರವು ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ. ಕಾಶಮ್ಮ ಜಮಾದಾರ ಮಲ್ಲಪ್ಪನ ಎರಡನೆಯ ಮಗಳು. ಇವಳು ವಯಸ್ಸಿಗೆ ಬಂದಾಗ ಹಲವಾರು ಕನಸುಗಳು, ಕಲ್ಪನೆ, ಆಸೆ ಬಯಕೆಗಳು ಮನಸ್ಸಿಗೆ ಕಾಡುತ್ತಿದ್ದವು. ಕಾಶಮ್ಮ ಊರಿನ ಸಾಹುಕಾರ ಮಗನಾದ ಲಿಂಗರಾಜನನ್ನು ಮನಸಾರೆ ಪ್ರೀತಿಸುತ್ತಿದ್ದಳು. ಲಿಂಗರಾಜ ಜಾತಿ ಅಂತಸ್ತುಗಳನ್ನು ಮರೆತು ಮದುವೆ ಮಾಡಿಕೊಳ್ಳುತ್ತೇನೆ ಎಂದು ಭರವಸೆ ಕೊಟ್ಟಿರುತ್ತಾನೆ. ಈ ಪ್ರೀತಿಯ ವಿಷಯ ಕಾಶಮ್ಮನ ಮನೆಯವರಿಗೆ ಗೊತ್ತಾಗಿ ದೊಡ್ಡ ಗದ್ದಲ ಉಂಟಾಗುತ್ತದೆ. ತಾಯಿ ಮಲ್ಲವ್ವ ಕಾಶಮ್ಮನನ್ನು ಮನಸ್ಸಿಗೆ ಬಂದ ಹಾಗೆ ಬಯ್ಯುತ್ತಾಳೆ. ಕಾಶಮ್ಮ ಮತ್ತು ಲಿಂಗರಾಜ ಬೇರೆ ಬೇರೆ ಜಾತಿಯವರು ಎಂಬ ಒಂದು ಕಾರಣಕ್ಕಾಗಿಯೇ ಇವರ ಇಬ್ಬರ ಮನೆಯವರು ಜಗಳವಾಡಿ ಮದುವೆಯನ್ನು ಮುರಿದು ಬಿಟ್ಟಿರುತ್ತಾರೆ. ಮುಂದೆ ಜಮಾದಾರ ಮಲ್ಲಪ್ಪ ತನ್ನ ಮಗಳು ಕಾಶಮ್ಮನನ್ನು ಕಲಬುರ್ಗಿಯಲ್ಲಿರುವ ಅಳಿಯ ಹಾಲಪ್ಪನಲ್ಲಿ ಬಿಟ್ಟು ಬರುತ್ತಾನೆ. ಹಾಲಪ್ಪ ತನ್ನ ಗೆಳೆಯರಿಗೆ ಕಾಶಮ್ಮಳಿಗೆ ಒಂದು ಒಳ್ಳೆಯ ವರ ನೋಡಿ ಎಂದು ಹೇಳಿದಾಗ ಗೆಳೆಯ ಶಾಂಭಣ್ಣ ಸೊಲ್ಲಪುರದ ಮಾರ್ತಾಂಡನನ್ನು ಕರೆತಂದು ತೋರಿಸುತ್ತಾನೆ. ಆಗ ಕಾಶಮ್ಮಳಿಗೂ, ಮಾರ್ತಾಂಡನಿಗೂ ಇಷ್ಟವಾಗುತ್ತದೆ. ಈ ವಿಷಯವನ್ನು ಕಾಶಮ್ಮನ ಮನೆಯವರಿಗೆ ತಿಳಿಸಿ ಒಂದೇ ತಿಂಗಳಿನಲ್ಲಿ ಕಲಬುರ್ಗಿಯ ಶರಣ ಬಸ್ಸಪ್ಪನ ಗುಡಿಯಲ್ಲಿ ಮದುವೆ ಮಾಡುತ್ತಾರೆ. ಈ ಮದುವೆಗೆ ಮಾರ್ತಾಂಡನ ಮನೆಯವರು ಇಲ್ಲದ ಕಾರಣ ಹಾಲಪ್ಪನೇ ಎರಡು ಕಡೆ ಇದ್ದು ಮದುವೆ ಮಾಡಿರುತ್ತಾನೆ. ಮಾರ್ತಾಂಡ ಮದುವೆಯ ಎಲ್ಲಾ ಕಾರ್ಯಗಳನ್ನು ಮುಗಿಸಿಕೊಂಡು ಕಾಶಮ್ಮನನ್ನು ಸೊಲ್ಲಪುರಕ್ಕೆ ಕರೆದುಕೊಂಡು ಹೋಗುತ್ತಾನೆ. ಕಾಶಮ್ಮನನ್ನು ಮಾರ್ತಾಂಡ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು. ಕಾಶಮ್ಮ ತನ್ನ ತವರು ಮನೆಯವರು ಹಬ್ಬಕ್ಕೆ ಕರೆದುಕೊಂಡು ಹೋದಾಗ ಗೆಳತಿ ಲಕ್ಕಿಯ ಸಹಾಯದಿಂದ ತಾನು ಮೊದಲು ಪ್ರೀತಿಸಿದ ಲಿಂಗರಾಜನನ್ನು ಭೇಟಿಯಾಗಿ

ಬಂದಿರುತ್ತಾಳೆ. ಇನ್ನೊಂದು ಬಾರಿ ತನ್ನ ತಮ್ಮ ಕಲ್ಯಾಣಿಯ ಮದುವೆಗೆ ಹೋದಾಗ ಮತ್ತೆ ಲಿಂಗರಾಜನನ್ನು ಭೇಟಿಯಾಗಿ ಬಂದಿರುತ್ತಾಳೆ. ಆಗ ಇವರಿಬ್ಬರ ನಡುವೆ ಮತ್ತೆ ಪ್ರೀತಿ ಚಿಗುರೊಡಿಯುತ್ತದೆ. ಒಂದು ದಿನ ಲಿಂಗರಾಜನು ಕಾಶಮ್ಮನ ಮನೆಗೆ ಹೋಗಿ ಮಾರ್ತಾಂಡನಿಗೆ ಹೇಳಿ ಕಾಶಮ್ಮನನ್ನು ಕರೆದುಕೊಂಡು ತನ್ನ ಊರ ಹೊರಗಿನ ತೋಟದ ಮನೆಯಲ್ಲಿ ತಾಳಿ ಕಟ್ಟದೆ ಇಟ್ಟುಕೊಳ್ಳುತ್ತಾನೆ. ಈ ವಿಷಯ ಇಡೀ ಶಿವಳ್ಳಿಗೆ ಗೊತ್ತಾಗುತ್ತದೆ. ಕಾಶಮ್ಮನ ತಂದೆ ಜಮಾದಾರ ಮಲ್ಲಪ್ಪ ತನ್ನ ಮರ್ಯಾದೆಗೆ ಅಂಜಿ ಸಾಯುತ್ತಾನೆ.

ಕಾದಂಬರಿಯಲ್ಲಿ ಕಾಶಮ್ಮನ ಪಾತ್ರವು ಅದ್ಭುತವಾಗಿ ಕಾಣಿಸಿಕೊಳ್ಳುತ್ತದೆ. ಈ ಪಾತ್ರದ ಸುತ್ತ ಹಲವಾರು ಪಾತ್ರಗಳು ಕೆಲಸ ಮಾಡುತ್ತವೆ. ಕಾಶಮ್ಮನನ್ನು ಮಾರ್ತಾಂಡ ಮತ್ತೆ ಸೊಲ್ಲಪುರಕ್ಕೆ ಕರೆದುಕೊಂಡು ಹೋಗುತ್ತೇನೆ ಎಂದು ಕೇಳಿದಾಗ ಕಾಶಮ್ಮ ನಾನು ಬರುವುದಿಲ್ಲ ಎಂದು ಹೇಳಿಕಳಿಸಿರುತ್ತಾಳೆ. ಕಾಶಮ್ಮ ಲಿಂಗರಾಜನ ಜೊತೆ ಇದ್ದು ಹಾಯಾಗಿ ಸಂಸಾರ ನಡೆಸುತ್ತಾಳೆ. ತನ್ನ ತಮ್ಮ ಕಲ್ಯಾಣಿಯು ಜೈಲು ಸೇರಿದಾಗ ಹೊರಗಡೆ ತರಲು ಹಣ ಸಹಾಯ ಮಾಡಿರುತ್ತಾಳೆ. ಹೀಗೆ ಕಾಶಮ್ಮನ ಪಾತ್ರವು ಕಾದಂಬರಿಯಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ.

ನಜಮಾ :

ರುಕ್ಮುದ್ದೀನನ ಹಿರೇ ಮಗಳು ಮತ್ತು ಫತರೂನ ಪತ್ನಿಯಾಗಿದ್ದಳು. ನಜಮಾನನ್ನು ಫತರೂ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು. ಫತರೂ ಜಮಾದಾರ ಮಲ್ಲಪ್ಪನ ಮನೆಯಲ್ಲಿ ಮನೆಯ ಮಗನಂತೆ ನೆಲೆಸಿದ್ದನು. ನಜಮಾ ಮತ್ತು ಫತರೂ ಮಲ್ಲಪ್ಪನ ಮನೆಯ ಒಂದು ಕೊಲ್ಲಿಯಲ್ಲಿ ಜೀವನ ನಡೆಸುತ್ತಿದ್ದರು. ಫತರೂ ಆಗಾಗ ಸೇಂದಿ ಕುಡಿಯುತ್ತಿದ್ದನು. ಕಲ್ಯಾಣಿನ ಹೆಂಡತಿ ಬೆಳ್ಳಿಗೂ ನಜಮಾಗೂ ಒಳ್ಳೆಯ ಸಲಿಗೆ ಬೆಳೆದಿತ್ತು. ಕೆಲವು ದಿನ ಇವರೆಲ್ಲಾರು ಒಳ್ಳೆಯ ಜೀವನ ನಡೆಸುತ್ತಾರೆ. ಕಲ್ಯಾಣಿಯು ಜೈಲು ಸೇರಿದಾಗ ಮನೆಯಲ್ಲಿ ಬೆಳ್ಳಿಯು ತೋಟದ ಹೊಲದಲ್ಲಿ ದುಡಿಯುತ್ತಿರುವಾಗ ನಜಮಾ ಮತ್ತು ಫತರೂ ಇಬ್ಬರು ಬೆಳ್ಳಿಯ ಜೊತೆ ಕೆಲಸ ಮಾಡುತ್ತಾರೆ. ಹೀಗೆ ನಜಮಾ ಮಾತ್ರವು ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತದೆ.

ನಾಗವ್ವಾಯಿ :

ಕಾದಂಬರಿ ಉದ್ದಕ್ಕೂ ನಾಗವ್ವಾಯಿ ಪಾತ್ರವು ಕಾಣಿಸಿಕೊಳ್ಳುತ್ತದೆ. ನಾಗವ್ವಾಯಿ ಗಂಡನನ್ನು ಕಳೆದುಕೊಂಡು ನಾಲ್ಕು ವರ್ಷದ ರಾಮನನ್ನು ಬೆಳೆಸುತ್ತ ಜೀವನ ಸಾಗಿಸುತ್ತಾಳೆ. ಈಳಿಗೇರ ಸಾಬಯ್ಯನಿಂದ ಅನೈತಿಕ ಸಂಬಂಧ ಇಟ್ಟುಕೊಂಡಿದ್ದಳು. ಮಗ ರಾಮನು ವಯಸ್ಸಿಗೆ ಬಂದಾಗ ದ್ಯಾಪಿಯ ಜೊತೆ ಮದುವೆ ಮಾಡುತ್ತಾಳೆ. ದ್ಯಾಪಿ ಸೊಕ್ಕಿನ ಸ್ವಭಾವದವಳು. ನಾಗವ್ವಾಯಿಯ ಅನೈತಿಕ ಸಂಬಂಧ ತಿಳಿದು ಗಂಡನಿಗೆ ಹೇಳಿ ಮನೆಯಿಂದ ಹೊರಗೆ ಹಾಕಿಸುತ್ತಾಳೆ. ನಾಗವ್ವಾಯಿ ಬೇರೆ ಗುಡಿಸಲು ಹಾಕಿಕೊಂಡು ಇದ್ದ ಸ್ವಲ್ಪ ಹೊಲವನ್ನು ಮಗನಿಂದ ಪಡೆದುಕೊಂಡು ಕೂಲಿನಾಲಿ ಮಾಡುತ್ತ ಜೀವನ ನಡೆಸುತ್ತಾಳೆ. ಜಮಾದಾರ

ಮಲ್ಲಪ್ಪನ ಮನೆಗೆ ಆಗಾಗ ಹೋಗುತ್ತಿದ್ದಳು. ಜಮಾದಾರ ಮಲ್ಲಪ್ಪನ ಕುಟುಂಬದವರು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಇವರ ಮನೆಗೆ ಹೋದಾಗ ಸಂಜೆ ಕತ್ತಲಾದರೆ ಅಲ್ಲಿಯೇ ಉಂಡು ಮಲಗುತ್ತಿದ್ದಳು. ನಾಗವ್ವಾಯಿ ವಯಸ್ಸು ಕಳೆದಂತೆ ಮುದುಕಿಯಾಗುತ್ತಾಳೆ. ಜಮಾದಾರ ಮಲ್ಲಪ್ಪನ ಮನೆಯಲ್ಲಿ ಹೆಚ್ಚು ಕಾಲ ಕಳೆಯುತ್ತ ಇವರ ಕುಟುಂಬದುದ್ದಕ್ಕೂ ಕಾಣಿಸಿಕೊಳ್ಳುವ ಪಾತ್ರವಾಗಿದೆ.

ತುಳಜಾ :

ಕೆಳಜಾತಿಯ ಪರಪ್ಪನ ಮಗಳು. ತುಳಜಾಗೆ ಜೋಗಣಿಯಾಗುವ ಮನಸ್ಸಿಲ್ಲದಿದ್ದರು ತಂದೆಯ ಒತ್ತಾಯದಿಂದ ಚುಂಚೂರು ದೇವಿಯ ಸೇವೆಗೆ ಬಲಿಯಾಗಿ ಜೋಗಿಣಿಯಾಗುತ್ತಾಳೆ. ಆರೆಂಟು ತಿಂಗಳಾದರೂ ತುಳಜಾಗೆ ಈ ಜೋಗಿಣಿ ಕೆಲಸ ಇಷ್ಟವಾಗಲಿಲ್ಲ. ಇಲ್ಲದ ಮನಸ್ಸಿನಿಂದ ತಲೆಯ ಮೇಲೆ ಪರಡಿ ಹೊತ್ತು ಜೋಗ ಬೇಡಲು ಊರೂರು ತಿರುಗುತ್ತಿದ್ದಳು. ಒಂದು ದಿನ ಕಲಬುರ್ಗಿ ಸಂತೆಯಲ್ಲಿ ದೇವಿಯ ಮಹಿಮೆಯ ಹಾಡು ಹೇಳುತ್ತಾ ನರ್ತಿಸುತ್ತಿರುತ್ತಾಳೆ. ಆಗ ಇವಳ ಧ್ವನಿಗೆ ಸೌಂದರ್ಯಕ್ಕೆ ಮಾರುಹೋದ ಹುಸೇನಪ್ಪ ಇವಳನ್ನು ಮಾತನಾಡಿಸಿ ಮದುವೆಯಾಗಲು ಕೇಳುತ್ತಾನೆ. ಆಗ ತುಳಜಾಕೂಡ 'ಜೋಗಿಣಿ' ದಂದೆ ಬಿಟ್ಟು ಹುಸೇನಪ್ಪನ ಕೂಡ ಮದುವೆಯಾಗುತ್ತಾಳೆ. ತುಳಜಾ ಹುಸೇನಪ್ಪನ ಜೊತೆ ಮುಂಬೈಗೆ ಹೋಗಿ ಸಂಸಾರ ನಡೆಸಿ ಒಂದು ಮಗುವನ್ನು ಪಡೆದಿರುತ್ತಾಳೆ. ಮೂರು ವರ್ಷದ ನಂತರ ತನ್ನ ತಂದೆ ತಾಯಿಗಳನ್ನು ನೋಡಲು ತವರೂರಿಗೆ ಗಂಡನನ್ನು ಕರೆದುಕೊಂಡು ಬರುತ್ತಾಳೆ. ಅವಳ ಸ್ಥಿತಿಯನ್ನು ನೋಡಿ ಊರ ಹಿರಿಯರು ಪಂಚಾಯತಿ ನಡೆಸುತ್ತಾರೆ. ಪೂಜಾರಪ್ಪ ಅವಳಿಗೆ ಬುದ್ಧಿ ಕಲಿಸಬೇಕೆಂದು ಅವಳ ತಂದೆಯನ್ನು ಕರೆಸಿ ಛೀಮಾರಿ ಹಾಕುತ್ತಾರೆ. ಪಂಚಾಯತಿ ಹಿರಿಯರು ಶಿಕ್ಷೆಗೆ ಒಳಪಡಿಸಿದಾಗ ತುಳಜಾ ಪ್ರತಿಭಟಿಸಿ ತನ್ನ ತಂದೆಯನ್ನು ಬೇರೆ ಊರಿಗೆ ಕರೆದುಕೊಂಡು ಹೋಗುತ್ತಾಳೆ. ಹೀಗೆ ಕಾದಂಬರಿಯು ತುಳಜಾ ಪಾತ್ರದ ಗಟ್ಟಿತನವನ್ನು ತೋರಿಸಿಕೊಡುತ್ತದೆ.

ನೀಲಮ್ಮ :

ನೀಲಮ್ಮ ಲಿಂಗರಾಜನ ಹೆಂಡತಿಯಾಗಿ ಒಂದು ಗಂಡು ಮಗುನನ್ನು ಪಡೆದಿರುತ್ತಾಳೆ. ಆದರೆ ಲಿಂಗರಾಜ ಕೆಲವು ವರ್ಷಗಳ ನಂತರ ತಾನು ಮೊದಲು ಪ್ರೀತಿಸಿದ ಕಾಶಮ್ಮನನ್ನು ಕರೆದುಕೊಂಡು ಬಂದು ತನ್ನ ಹೊಲದಲ್ಲಿ ತಾಳಿ ಕಟ್ಟದೆ ಇಟ್ಟುಕೊಳ್ಳುತ್ತಾನೆ. ಈ ವಿಷಯ ತಿಳಿದು ನೀಲಮ್ಮ ಸಂಕಟ ಪಡುತ್ತಾಳೆ. ತನ್ನ ತವರು ಮನೆಗೆ ಹೋಗದೆ ಇಲ್ಲಿಯೇ ಕಾಲ ಕಳೆಯುತ್ತಾಳೆ. ಊರ ಹಿರಿಯರಿಂದ ಲಿಂಗರಾಜನಿಗೆ ಬುದ್ಧಿಮಾತುಗಳನ್ನು ಹೇಳಿಸುತ್ತಾಳೆ. ಆದರೆ ಲಿಂಗರಾಜ ಕಾಶಮ್ಮನನ್ನು ದೂರ ಮಾಡಿಕೊಳ್ಳುವುದಿಲ್ಲ ಎಂದು ಹೇಳಿ ನೀಲಮ್ಮನ ಮನಸ್ಸನ್ನು ನೋಯಿಸಿರುತ್ತಾನೆ. ನೀಲಮ್ಮ ಗಂಡನಿದ್ದು ಸುಖವಾಗಿ ಬಾಳಲಾರದೇ ವಿಧವೆಯಂತೆ ಬಾಳುತ್ತಾಳೆ.

4.4. ನಿರೂಪಣಾ ವಿಧಾನ :

ಒಬ್ಬ ಕಾದಂಬರಿಕಾರನಿಗೆ ತನ್ನ ಕೃತಿಯಲ್ಲಿ ವಿಷಯಗಳ ಅಭಿವ್ಯಕ್ತಿಗಾಗಿ ಬಳಸುವ ಭಾಷೆಯು ಎಷ್ಟು ಮುಖ್ಯವಾಗಿರುತ್ತದೆಯೋ ನಿರೂಪಣ ತಂತ್ರವು ಅಷ್ಟೇ ಮುಖ್ಯವಾಗಿರುತ್ತದೆ. ಅದನ್ನು ನಿರೂಪಣಾ ವಿಧಾನ ಎಂದು ಕರೆಯಬಹುದು. ಈ ತಂತ್ರ ಪಕ್ವವಾಗಿಲ್ಲದಿದ್ದಲ್ಲಿ ಆ ಕೃತಿಯು ಓದಿನಲ್ಲಿ ಯಶಸ್ಸು ಕಾಣದು ಹಾಗೆಯೇ ಓದುಗರನ್ನು ಅದು ತಲುಪಲಾರದು. ಆದ್ದರಿಂದಲೇ ಯಾವುದೇ ಸಾಹಿತ್ಯ ಕೃತಿಯ ಬರಹದಲ್ಲಿ ಅಥವಾ ಕಾದಂಬರಿಯಲ್ಲಿ ನಿರೂಪಣ ತಂತ್ರ ಬಹಳ ಪ್ರಮುಖವಾದದ್ದು.

ಗೀತಾನಾಗಭೂಷಣರವರ 'ಬದುಕು' ಕಾದಂಬರಿಯು ಕನ್ನಡದ ಉತ್ತಮ ಕಾದಂಬರಿಗಳಲ್ಲಿ ಒಂದೆಂದು ಹೇಳಬಹುದು. ಕಾದಂಬರಿಯಲ್ಲಿ ಕಂಡುಬರುವ ಪಾತ್ರಗಳಾಗಲಿ ಅವರು ಬಳಸುವ ಭಾಷೆಯಾಗಲಿ ಪ್ರಾದೇಶಿಕತೆಯ ವಿವರಗಳು ಬಹು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡು ಕಾದಂಬರಿಯು ಇಂದಿನ ತನಕವು ಅತ್ಯುತ್ತಮ ಎಂಬ ಹಣೆಪಟ್ಟಿಯನ್ನು ಕಟ್ಟಿ ಕೊಂಡಿದೆಯೆಂದು ಭಾವಿಸಬಹುದು.

ಗೀತಾನಾಗಭೂಷಣರವರ ಕಾದಂಬರಿಗಳ ಬಗ್ಗೆ ಮತ್ತೆ ಮತ್ತೆ ಕೇಳಿಬರುವ ಮಾತುಗಳೆಂದರೆ ಅವರು ಭಾಷೆಯನ್ನು ವಿಶೇಷವಾಗಿ ಹೈದರಬಾದ್ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡಿರುವುದು. ಕಾದಂಬರಿಯನ್ನು ನೋಡಿದಾಗ ಭಾಷೆ ಹಾಗೂ ನಿರೂಪಣ ತಂತ್ರ ಬಿಟ್ಟು ಅದಕ್ಕೆ ಅನ್ಯಮಾರ್ಗವೇ ಇಲ್ಲ. ಇಂತ ಗಟ್ಟಿತನವನ್ನು ಸಮರ್ಥವಾಗಿ ತೋರಿಸಬಲ್ಲ ಭಾಷೆ ಹಾಗೂ ನಿರೂಪಣಾ ತಂತ್ರಗಳು ತಮ್ಮ ಕೆಲಸವನ್ನು ಸಮರ್ಪಕವಾಗಿಯೇ ನೆರವೇರಿಸಿವೆ ಎಂಬುದು ಕಾಣುತ್ತದೆ. ಭಾಷೆ ಹಾಗೂ ತಂತ್ರಗಳು ಕೇವಲ ಸಾಮಗ್ರಿಯ ವ್ಯವಸ್ಥೆಗೆ ಮಾತ್ರ ಸೀಮಿತವಾಗಿಲ್ಲ. ಲೇಖಕರ ದೃಷ್ಟಿಕೋನದ ಭಾಗವೇ ಆಗಿದೆ. ಒಬ್ಬ ಲೇಖಕನ ಭಾಷೆ ಹಾಗೂ ತಂತ್ರಗಳು ಸಾಕಷ್ಟು ಮಹತ್ವಕಾಂಕ್ಷೆಯಾಗಿಲ್ಲವೆಂದು ಹೇಳುವಾಗ ಅವನ ದೃಷ್ಟಿಕೋನಕ್ಕೂ ಭಾಷೆ ತಂತ್ರಗಳಿಗೂ ಇರುವ ಸಂಬಂಧವನ್ನು ಮರೆತೆ ಬಿಡುತ್ತೇವೆ. ಆದ್ದರಿಂದ ಗೀತಾನಾಗಭೂಷಣರವರ ಭಾಷೆ ಹಾಗೂ ನಿರೂಪಣ ವಿಧಾನ ಬಗ್ಗೆ ಮಾಡುವ ತೀರ್ಮಾನ ಅವರ ದೃಷ್ಟಿಕೋನದ ಮೇಲೆ ಮಾಡಿದ ತೀರ್ಮಾನವಾಗಿ ಪರಿಗಣಿಬಹುದೆಂದು ಭಾವಿಸುತ್ತೇನೆ.

'ಬದುಕು' ಕಾದಂಬರಿಯು ಜಮಾದಾರ ಮಲ್ಲಪ್ಪನ ಕುಟುಂಬದಿಂದ ಬಿಚ್ಚಿಕೊಂಡರು ಇದರ ಸುತ್ತ ಹಲವಾರು ಪಾತ್ರಗಳ ಜೀವನ ಕ್ರಮವು ಇದೆ. ಈ ಕಾದಂಬರಿಯ ವಿಶೇಷ ಎಂದರೆ ಹೈದರಾಬಾದ್ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಸುತ್ತಮುತ್ತಲ್ಲಿ ಜನರ ಬದುಕು, ಅದರಲ್ಲೂ ಕೆಳವರ್ಗದ ದಲಿತರ ಬದುಕು ಅತ್ಯಂತ ವಾಸ್ತವಿಕ ನೆಲೆಯಲ್ಲಿ ಚಿತ್ರಣಗೊಂಡಿದೆ. ಶಿವಳ್ಳಿಯ ಕೆಳ ಜಾತಿ ಜನರ ನಂಬಿಕೆಗಳು, ಆಚರಣೆ ಸಂಪ್ರದಾಯಗಳು, ಹಬ್ಬ ಹರಿದಿನಗಳು, ಜೀವನದ ಬಗೆಗಿನ ನಿಲುವುಗಳು, ದೇವರು ದೆವ್ವಗಳ ಕುರಿತ ನಂಬಿಕೆಗಳು ಇಡಿಯಾಗಿ

ಚಿತ್ರಣಗೊಂಡಿವೆ. ಮತ್ತು ಈ ಪ್ರದೇಶದ ಭಾಷೆಯನ್ನು ತರುವುದರಿಂದ ಹೆಚ್ಚಿನ ಪ್ರಮುಖ್ಯತೆಯನ್ನು ಪಡೆದಿದೆ. ಕಾದಂಬರಿಯಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುವ ಪಾತ್ರವೆಂದರೆ ಕಾಶಮ್ಮನ ಪಾತ್ರ. ಈ ಪಾತ್ರದ ಸುತ್ತ ಹಲವಾರು ಪಾತ್ರಗಳು ಕೆಲಸ ಮಾಡುತ್ತವೆ. ಕಾಶಮ್ಮ ಮೇಲು ಜಾತಿಯ ಲಿಂಗರಾಜನನ್ನು ಪ್ರೀತಿಸಿರುವುದರಿಂದ ಮನೆಯ ಹಿರಿಯರಿಗೆ ತಿಳಿದು ಮಾರ್ತಾಂಡನ ಜೊತೆ ವಿವಾಹ ಮಾಡುತ್ತಾರೆ. ಮಾರ್ತಾಂಡ ಕಾಶಮ್ಮನನ್ನು ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ನೋಡಿಕೊಳ್ಳುತ್ತಾನೆ. ಆದರೆ ಕಾಶಮ್ಮ ಮಾರ್ತಾಂಡನ ಬಾಳನ್ನು ನುಚ್ಚುನೂರಾಗುವಂತೆ ಮಾಡಿ ಮೊದಲು ಪ್ರೀತಿಸಿದ ಲಿಂಗರಾಜನಲ್ಲಿ ಸೇರುತ್ತಾಳೆ. ಕಾಶಮ್ಮನನ್ನು ಬಿಟ್ಟಿರಲಾರದೆ, ಊರೂರು ಅಲೆದು ಸಾಧುವಿನಂತಾಗಿ, ಕೊನೆಗೆ ಕಾಶಮ್ಮನ ಮುಖವನ್ನು ಒಮ್ಮೆ ನೋಡಿ ಸತ್ತು ಬಿಡುವ ಮಾರ್ತಂಡನ ಪಾತ್ರವು ಓದುಗನ ಮನಸ್ಸನ್ನು ಕಲಕುವಂತೆ ಗೀತಾನಾಗಭೂಷಣರವರು ಚಿತ್ರಿಸಿದ್ದಾರೆ.

ಕಾದಂಬರಿಯಲ್ಲಿ ಕೆಳ ಜಾತಿ ಜನರ 'ಜೋಗಿಣಿ ' ಸಂಪ್ರದಾಯವನ್ನು ಗೀತಾನಾಗಭೂಷಣರವರು ವಿವರವಾಗಿ ತೆರೆದಿಟ್ಟಿದ್ದಾರೆ. ಈ 'ಜೋಗಿಣಿ ' ಪದ್ಧತಿಗೆ ಕೆಳ ಜಾತಿ ಜನರ ಹೆಣ್ಣುಮಕ್ಕಳು ಮೇಲು ಜಾತಿಯ ಗಂಡಸರ ಕಾಮಕ್ಕೆ ಬಲಿಯಾಗುತ್ತಾರೆ. ಇಲ್ಲಿನ ಹೆಣ್ಣುಮಕ್ಕಳು ಗರತಿಯ ಹಾಗೆ ಬಾಳಬೇಕು ಎನ್ನುವ ಆಸೆ ಇದ್ದರೂ ತಂದೆ ತಾಯಿಗಳ ಹರಕೆಗಾಗಿ ಜೋಗಿಣಿಯಾಗಿ ಬಾಳಬೇಕಾಗುತ್ತದೆ. ನೀಲವ್ವ ಜೋಗಿಣಿಯಾಗಿ ಸಾಯುವುದಾದರೆ, ತುಳಜಾ ಜೋಗಿಣಿಯಾಗಿ ಮದುವೆ ಮಾಡಿಕೊಂಡು ಪ್ರತಿಭಟಿಸಿ ನಿಲ್ಲುವ ಪಾತ್ರವಾಗಿದೆ. ಈ ಮೂಢ ನಂಬಿಕೆಗಳು ಸಮಾಜದಲ್ಲಿ ಇಂದಿಗೂ ಕೂಡ ಇವೆ ಎಂಬುದನ್ನು ಗೀತಾನಾಗಭೂಷಣರವರು ಈ ಕಾದಂಬರಿಯ ಮೂಲಕ ತೋರಿಸಿಕೊಟ್ಟಿದ್ದಾರೆ.

ಜಮಾದಾರ ಮಲ್ಲಪ್ಪನು ಕೆಳಗೇರಿ ಜನರಲ್ಲಿ ಹೆಸರುವಾಸಿಯಾಗಿದ್ದನು. ಇತನ ಕುಟುಂಬವು ಕಾದಂಬರಿ ಉದ್ದಕ್ಕೂ ಕಾಣಿಸಿಕೊಳ್ಳುತ್ತದೆ. ಇತನ ಮನೆಯಲ್ಲಿ ಫತರೂ ಜಾತಿಯಲ್ಲಿ ಮುಸ್ಲಿಂನಾದರು ಕೂಡ ಪ್ರಾಮಾಣಿಕತೆಯಿಂದ ನೆಲೆಸಿರುತ್ತಾನೆ. ಇತನ ಮಗ ಕಲ್ಯಾಣಿಯು ಬೆಳ್ಳಿಯನ್ನು ಮದುವೆ ಮಾಡಿಕೊಂಡು ಜೀವಿಸುತ್ತಾನೆ. ಕಲ್ಯಾಣಿಯು ಜೈಲು ಸೇರಿದಾಗ ಬೆಳ್ಳಿಯು ಪಡಬಾರದ ಕಷ್ಟಪಟ್ಟು ಜೀವಿಸುತ್ತಾಳೆ. ಹೀಗೆ ಶಿವಳ್ಳಿಯ ಕೆಳ ಜಾತಿ ಜನರ ಪ್ರತಿಯೊಬ್ಬರ ಬದುಕಿನ ಬಗ್ಗೆ ಕಾದಂಬರಿಯಲ್ಲಿ ಚಿತ್ರಣಗೊಂಡಿದೆ.

ಕಾದಂಬರಿಯು ಕಲಬುರ್ಗಿ ನಗರದ ದಲಿತ ಬದುಕಿನ ಚಿತ್ರಣವು ಸೇರಿಕೊಂಡಿದೆ. ಜಮಾದಾರ ಮಲ್ಲಪ್ಪನ ದೊಡ್ಡ ಮಗಳು ಶಾರಣಮ್ಮ ಮತ್ತು ಹಾಲಪ್ಪ ಮಾರುತಿ ಝೋಪಡಪಟ್ಟಿಯಲ್ಲಿ ವಾಸವಾಗಿದ್ದರು. ಮಾರುತಿ ಝೋಪಡ ಪಟ್ಟಿಯ ದಲಿತ ಜನರು ನೀರಿಗಾಗಿ ಬಡಿದಾಡುವುದು, ಇವರು ಒಗ್ಗಟ್ಟಿನಿಂದ ಬಾಳುವುದು, ಕಿಸೆಗಳ್ಳ ನಾಗ್ಯನನ್ನು ಪೋಲಿಸರು ಹುಡುಕುತ್ತ ಬಂದಾಗ ದೊಡ್ಡ ದಾಂಧಲೆ ಉಂಟಾಗುವುದು, ಇಲ್ಲಿ ಮುದುಕಪ್ಪ ಮುಂದಾಳತ್ವವಹಿಸುವುದು. ಹೀಗೆ ಮಾರುತಿ ಝೋಪಡಿಪಟ್ಟಿಯ ಪ್ರತಿಯೊಬ್ಬರ ಜೀವನ ವಿವರವನ್ನು ಕಾದಂಬರಿಯಲ್ಲಿ ಗೀತಾನಾಗಭೂಷಣರವರು ಚಿತ್ರಿಸಿದ್ದಾರೆ.

ಕಾದಂಬರಿಯ ಮಹತ್ವವೆಂದರೆ ದೇಸೀತನದಿಂದ. ಒಂದು ಸಂಸ್ಕೃತಿಯು ಬೆಳೆಯ ಬೇಕಾದರೆ ಅದು ಜನಾಂಗದಿಂದ ಅನಾವರಣಗೊಳ್ಳುತ್ತದೆ. ಈ ನೆಲೆಯಲ್ಲಿ ಕಾದಂಬರಿಯಲ್ಲಿ ಬರುವ ಕೆಳ ಜಾತಿ ಜನರು ಆಚರಿಸುವ ಕಾರಹುಣ್ಣಿಮೆಯ ಕರಿ ಹರಿಯುವ ಸಂಪ್ರದಾಯ, ಹೋಳೀ ಹುಣ್ಣಿವೆಯ ಆಚರಣೆ, ಮೊಹರಂ ಹಬ್ಬದ ಆಚರಣೆ, ಈ ಎಲ್ಲಾ ಹಬ್ಬಗಳನ್ನು ಈ ಜನರು ಆಚರಿಸುವುದನ್ನು ತರುವುದರಿಂದ ಕಾದಂಬರಿಯು ಮಹತ್ವವನ್ನು ಪಡೆದುಕೊಂಡಿದೆ.

'ಬದುಕು ' ಕಾದಂಬರಿಯ ಪ್ರಮುಖ ವೈಶಿಷ್ಟವೆಂದರೆ ಅದರ ಸರಳ ನಿರೂಪಣಾ ವಿಧಾನ. ನೇರವಾಗಿ ದಲಿತ ಬದುಕಿನ ವಿವರವನ್ನು ಗೀತಾನಾಗಭೂಷಣರವರು ನೀಡುತ್ತಾ ಹೋಗುತ್ತಾರೆ. ಆದರೂ ಇದೊಂದು ವರದಿಯಾಗದೆ, ಬೇಸರ ಹುಟ್ಟಿಸದೆ, ನೀರಸವೆನ್ನಿಸದೆ ಕಾದಂಬರಿ ಸಾಗುತ್ತದೆ. ಕಾದಂಬರಿಯು ಸಹೃದಯರಿಗೆ ಆಕರ್ಷಿಸುವಂತೆ ರಚನೆಯಾಗಿದೆ. ಇಷ್ಟೆಲ್ಲ ಯಶಸ್ಸು ಕಾದಂಬರಿಗೆ ದಕ್ಕುವುದಕ್ಕೆ ಮುಖ್ಯ ಕಾರಣ ಭಾಷೆ. ಈ ಭಾಷೆಯು ಹೈದರಬಾದ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಸುತ್ತಮುತ್ತಲಿನ ಹಳ್ಳಿಗಳ ಜನರ ಭಾಷೆಯಾಗಿದೆ. ಈ ಭಾಷೆಯನ್ನು ಇಲ್ಲಿನ ಗ್ರಾಮೀಣ ಜನರು ತಮ್ಮ ಬದುಕಿನುದ್ದಕ್ಕೂ ಬಳಸಿಕೊಂಡಿದ್ದಾರೆ. ಕಾದಂಬರಿಯು ಗ್ರಾಮೀಣ ಪ್ರದೇಶದಲ್ಲಿ ರಚನೆಯಾಗಿರುವುದರಿಂದ ಸನ್ನಿವೇಶಕ್ಕೆ ತಕ್ಕಂತೆ ಪಾತ್ರಗಳು ರಚನೆಯಾಗಿವೆ. ಈ ಪಾತ್ರಗಳ ಸಂಭಾಷಣೆಯಷ್ಟೇ ಅಲ್ಲದೇ, ನಿರೂಪಣೆಯಲ್ಲೂ ಈ ದೇಸೀತನದ ಸೊಗಸು ಮೆರೆದಿದೆ.

ಗೀತಾ ನಾಗಭೂಷಣರವರು 'ಬದುಕು ' ಕಾದಂಬರಿಯಲ್ಲಿ ಕೆಳ ಜಾತಿ ಜನರ ಜೀವನ ಕ್ರಮವನ್ನು ಮತ್ತು ಇವರು ಆಚರಿಸುವಂತ ಹಬ್ಬಗಳನ್ನು, ಜೋಗಿಣಿ ಪದ್ಧತಿಯನ್ನು, ಈ ಜನರು ಆಡುವ ಭಾಷೆಯನ್ನು ಇವೆಲ್ಲವನ್ನು ತರುವುದರಿಂದ ಬದುಕು ಕಾದಂಬರಿಯನ್ನು ಒಂದು ಬೃಹತ್ ಕಾದಂಬರಿಯನ್ನಾಗಿ ಮಾಡಿದ್ದಾರೆ.

ಅಡಿ ಟಿಪ್ಪಣಿ :

1) ಗೀತಾನಾಗಭೂಷಣ, 'ಬದುಕು', 2005, ಪು. 126

2) ಅದೇ ಪು. 218

3) ಅದೇ ಪು. 241

4) ಅದೇ ಪು. 221

5) ಅದೇ ಪು. 441

6) ಅದೇ ಪು. 12

7) ಅದೇ ಪು. 71

8) ಅದೇ ಪು. 160

9) ಅದೇ ಪು. 266

10) ಅದೇ ಪು. 205

11) ಅದೇ ಪು. 341

12) ಅದೇ ಪು. 452

13) ಅದೇ ಪು. 467

14) ಕುವೆಂಪು, ಕಾನೂರ ಹೆಗ್ಗಡಿತಿ, 2007, ಪು. 1

15) ಗೀತಾನಾಗಭೂಷಣ, ಬದುಕು, 2005, ಪು. 309

16) ಅದೇ ಪು. 325

ಅಧ್ಯಾಯ - 5

ಸಮಾರೋಪ

ಅಧ್ಯಾಯ -5

ಸಮಾರೋಪ

ಗೀತಾನಾಗಭೂಷಣರವರು ಹೈದರಾಬಾದ್ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಪ್ರತಿಭಾನ್ವಿತ ಕಾದಂಬರಿಕಾರರಲ್ಲಿ ಒಬ್ಬರಾಗಿದ್ದಾರೆ. ಇವರು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಗ್ರಾಮೀಣ ಪ್ರದೇಶದಿಂದ ಬಂದವರಾಗಿದ್ದರಿಂದ ಗ್ರಾಮೀಣ ಪ್ರದೇಶದ ಕೆಳಜಾತಿ ಜನರ ಜೀವನ ಕ್ರಮವನ್ನು 'ಬದುಕು' ಕಾದಂಬರಿಯಲ್ಲಿ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಇಲ್ಲಿ ಜನರು ಆಚರಿಸುವ ಹಬ್ಬ ಹರಿದಿನಗಳು, ಜಾತ್ರೆ ಉತ್ಸವಗಳು, ಮೂಢನಂಬಿಕೆಗಳು, ಮದುವೆ ಮಂಗಲ ಕಾರ್ಯಗಳು, ಹಾದರ, ಕಳವು, ಮೋಸವಂಚನೆ, ನಂಬಿಕೆ, ಪ್ರೀತಿ, ವಿಶ್ವಾಸ ಈ ಮುಂತಾದ ಅಂಶಗಳನ್ನು ಕುರಿತು ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಗೀತಾನಾಗಭೂಷಣರವರು ವಿಶೇಷವಾಗಿ ಹೈದರಾಬಾದ್ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಸುತ್ತಮುತ್ತಲಿನ ಹಳ್ಳಿಯ ಜನರು ಬಳಸುವ ಭಾಷೆಯನ್ನು ಕಾದಂಬರಿಯಲ್ಲಿ ತರುವುದರಿಂದ ಮಹತ್ವವನ್ನು ಪಡೆದುಕೊಂಡಿದೆ.

ಕಾದಂಬರಿಯಲ್ಲಿ ಸಾಂಸ್ಕೃತಿಕವಾಗಿ ಹಲವಾರು ಅಂಶಗಳು ಒಳಗೊಂಡಿವೆ. ಹಬ್ಬ, ಜಾತ್ರೆ ಉತ್ಸವಗಳು ಮತ್ತು ಜನರ ಜೀವನ, ಸ್ಥಳೀಯ ಭಾಷೆ ಮುಂತಾದವುಗಳು ಕಾದಂಬರಿಯಲ್ಲಿ ಸೊಗಸಾಗಿ ನಿರೂಪಿತವಾಗಿವೆ. ಕಾದಂಬರಿಯಲ್ಲಿ ಬರುವ ಪ್ರಮುಖವಾದ ಪಾತ್ರಗಳು ಜಮಾದಾರ ಮಲ್ಲಪ್ಪ, ಕಾಶಮ್ಮ, ಲಿಂಗರಾಜ, ಮಾರ್ತಂಡ ಈ ನಾಲ್ಕು ಪಾತ್ರಗಳು ಇಡೀ ಕಾದಂಬರಿಯಲ್ಲಿ ಮಿಂಚುತ್ತವೆ. ಇಲ್ಲಿಯ ಪಾತ್ರಗಳ ಚಿತ್ರಣವನ್ನು ಗೀತಾನಾಗಭೂಷಣರವರು ಬಹಳ ಸೊಗಸಾಗಿ ಚಿತ್ರಿಸಿರುವುದರಿಂದ ಕೃತಿಗೆ ಹೆಚ್ಚು ಮಾನ್ಯತೆ ಲಭಿಸಿದೆ. ಕಾದಂಬರಿಯಲ್ಲಿ ವ್ಯಕ್ತವಾದ ಗುಲ್ಬರ್ಗಾ ಪ್ರಾಂತೀಯ ಭಾಷೆಯು ಎಲ್ಲಿಯೂ ಸ್ವಲ್ಪವು ಕೃತಕವಾಗಿ ಕಂಡು ಬರುವುದಿಲ್ಲ. ಇದರ ಜೊತೆಗೆ ಕೆಳಜಾತಿ ಜನರು ಆಚರಿಸುವ ಜೋಗಿಣಿ ಸಂಪ್ರದಾಯವನ್ನು ವಿವರವಾಗಿ ತೆರೆದಿಟ್ಟಿದ್ದಾರೆ. ಈ ಕಾದಂಬರಿಯಲ್ಲಿ ಕಂಡುಬರುವ ಉರ್ದು ಪದಗಳು, ಬೈಗಳು, ಗಾದೆ,

ಒಗಟುಗಳು ಇವೆಲ್ಲವನ್ನು ತರುವುದರಿಂದ ಕಾದಂಬರಿಯು ಸಹೃದಯರಿಗೆ ಆಕರ್ಷಿಸುವಂತೆ ಮಾಡುತ್ತದೆ.

ಈ ಎಲ್ಲಾ ಅಂಶಗಳನ್ನು ಒಳಗೊಂಡ ಇಂತಹ ಕೃತಿಯನ್ನು ಕನ್ನಡ ಕಾದಂಬರಿಯ ದೃಷ್ಟಿಯಿಂದ ನೋಡಿದಾಗ 'ಬದುಕು' ಕಾದಂಬರಿಗೆ ಮಹತ್ವದ ಸ್ಥಾನವಿದೆ. ಅದು ತನ್ನದೇ ಆದ ವಿಶಿಷ್ಟತೆಯನ್ನು ಉಳಿಸಿಕೊಂಡ ಕಾದಂಬರಿಯಾಗಿದೆ. ತನ್ನ ಪ್ರದೇಶದ ಕೆಳಜಾತಿ ಜನರ ಜೀವನ ಪದ್ಧತಿಯನ್ನು ಮೈಗೂಡಿಸಿಕೊಂಡು ಅರಳಿದ ಕಾದಂಬರಿಯಾಗಿದೆ. ಹೊಸದಾದ ಚಿಂತನೆಯ ಮೂಲಕ ಕನ್ನಡ ಕಾದಂಬರಿಯಲ್ಲಿ ಭಿನ್ನವಾಗಿ ಕಾಣಿಸಿಕೊಂಡಿದೆ. ಈ ಅಧ್ಯಯನದ ಹೊಸ ಹೆಜ್ಜೆಗಳನ್ನು ಹೀಗೆ ಕಲೆಹಾಕಲಾಗಿದೆ.

★ ಮೊದಲನೆಯದಾಗಿ 'ಬದುಕು' ಕಾದಂಬರಿಯ ಪ್ರಮುಖ ವೈಶಿಷ್ಟ್ಯವೆಂದರೆ ಭಾಷೆ. ಈ ಭಾಷೆಯು ಹೈದರಾಬಾದ್ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಪ್ರದೇಶದ ಆಡು ಭಾಷೆಯನ್ನು ಗೀತಾನಾಗಭೂಷಣರವರು ಬಳಸಿರುವುದರಿಂದ ಓದುಗರಿಗೆ ಆಕರ್ಷಿಸುವಂತಿದೆ.

★ ಗೀತಾ ನಾಗಭೂಷಣರವರು ಗ್ರಾಮೀಣ ಪರಿಸರದಿಂದ ಬಂದವರಾಗಿದ್ದರಿಂದ ಗ್ರಾಮೀಣ ಪರಿಸರದಲ್ಲಿ ಕಂಡಂತಹ ಘಟನೆಗಳು, ಅನ್ಯಾಯ ಅಕ್ರಮಗಳು, ಮೂಢ ನಂಬಿಕೆಗಳು, ಮೊದಲಾದವುಗಳನ್ನು ಚಿತ್ರಿಸುವುದರಲ್ಲಿ ತಮ್ಮದೇ ಆದ ಪ್ರಾವಿಣ್ಯತೆಯನ್ನು ಸಾಧಿಸಿರುವಂತೆ ನಗರ ದಲಿತ ಜೀವನದ ಚಿತ್ರಣವನ್ನು ಕಾದಂಬರಿಯಲ್ಲಿ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

★ ಕಾದಂಬರಿಯಲ್ಲಿ ಗ್ರಾಮೀಣ ಭಾಗದ ಜನರಲ್ಲಿ ಇಂದಿಗೂ ಮೂಢನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳು ಹೇಗೆ ಅಸ್ತಿತ್ವದಲ್ಲಿವೆ ಎಂಬುದನ್ನು ಕಾದಂಬರಿಯಲ್ಲಿ ವಾಸ್ತವವಾದಿ ನೆಲೆಯಲ್ಲಿ ಕಾಣಿಸಿದ್ದಾರೆ.

★ ಗೀತಾನಾಗಭೂಷಣರವರು 'ಬದುಕು' ಕಾದಂಬರಿಯಲ್ಲಿ ಕೆಳಜಾತಿ ಜನರು ತಮಗೆ ಕಷ್ಟಬಂದಾಗ ಹೆಣ್ಣು ಮಕ್ಕಳನ್ನು ಹರಕೆಯ ರೂಪದಲ್ಲಿ ಜೋಗಿಣಿಯಾಗಿ ಬಿಡುವುದು ಮೂಢನಂಬಿಕೆಗಳಂತಹ ಅಂಶವನ್ನು ಯಾವ ತೆರನಾಗಿ ನಂಬಿಕೆಯನ್ನಿಟ್ಟಿದ್ದರು ಮತ್ತು ಶೋಷಣೆ, ಧರ್ಮದ ಹೆಸರಿನಲ್ಲಿ ಮೋಸ ಮಾಡುವುದು ಈ ಮುಂತಾದ ಅಂಶಗಲನ್ನು ಕಾದಂಬರಿಯಲ್ಲಿ ಕಾಣಬಹುದು.

★ ಕಾದಂಬರಿಯು ಗ್ರಾಮೀಣ ಪ್ರದೇಶದಲ್ಲಿ ರಚನೆಯಾಗಿರುವುದರಿಂದ ಪುರುಷ ಪಾತ್ರಗಳನ್ನು ಸಮಯ, ಸಂದರ್ಭ, ಸನ್ನಿವೇಶಕ್ಕೆ ಅನುಗುಣವಾಗಿ ಚಿತ್ರಿಸಿರುವಂತೆ ಮಹಿಳಾ ಲೋಕವನ್ನು ಕೂಡಾ ಅಗತ್ಯಕ್ಕೆ ತಕ್ಕಂತೆ ಚಿತ್ರಿಸಿ ಕಾದಂಬರಿಯ ಮುಂದುವರಿಕೆಯಲ್ಲಿ ತಮ್ಮದೇ ಆದ ವಿಶಿಷ್ಟತೆಯನ್ನು ತೋರಿಸಿದ್ದಾರೆ.

★ 'ಬದುಕು' ಕಾದಂಬರಿಯ ಇನ್ನೊಂದು ವೈಶಿಷ್ಟ್ಯವೆಂದರ ಅದರ ಸರಳ ನಿರೂಪಣಾ ಶೈಲಿ. ನೇರವಾಗಿ ದಲಿತ ಬದುಕಿನ ವಿವರವನ್ನು ಗೀತಾನಾಗಭೂಷಣರವರು ನೀಡುತ್ತಾ ಹೋಗುತ್ತಾರೆ. ಬೇಸರ

ಹುಟ್ಟಿಸದೆ, ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ.

★ ಕಾದಂಬರಿಯಲ್ಲಿ ಕಾಮ ಕೆಳಗೇರಿ ಜನರ ಬದುಕಿನ ಅವಿಭಾಜ್ಯ ಅಂಗಗಳಲ್ಲಿ ಒಂದು. ಅನೈತಿಕ ಸಂಬಂಧಗಳು, ಪ್ರೀತಿ, ಪ್ರೇಮದ ಪ್ರಸಂಗಗಳು ಈ ಎಲ್ಲಾ ಅಂಶಗಳನ್ನು ಕಾದಂಬರಿಯಲ್ಲಿ ಚರ್ಚೆಯಾಗಿರುವುದನ್ನು ಕಾಣಬಹುದು.

★ ಕಾದಂಬರಿಯಲ್ಲಿ ಸಹಜತೆ, ಸ್ವಭಾವೋಕ್ತಿ ತಂದದ್ದು ಬದುಕು ಕಾದಂಬರಿಯ ವೈಶಿಷ್ಟತೆಯಾಗಿದೆ. ಪಾತ್ರ ಪಾತ್ರಗಳ ಸಂಭಾಷಣೆಯ ಮೂಲಕ ಭಾವವನ್ನು ವ್ಯಕ್ತಿತ್ವವನ್ನು ಅದರ ಅಂತಸತ್ವವನ್ನು ಹೊರ ಹಾಕುವ ಗುಣವನ್ನು ಅವರು ಸೃಷ್ಟಿಸುವ ಸಂಭಾಷಣೆಯಲ್ಲಿ ಕಾಣುತ್ತೇವೆ. ಇದು 'ಬದುಕು' ಕಾದಂಬರಿಯಲ್ಲಿ ಕಾಣಿಸುವ ಮುಖ್ಯ ನೆಲೆಯಾಗಿದೆ.

★ ಕಾದಂಬರಿಯಲ್ಲಿ ಬರುವ ಅಡುಗೆ ತಯಾರು ಮಾಡುವ ವೈಭವದ ವರ್ಣನೆ, ಅಲ್ಲಿಯ ಗ್ರಾಮೀಣ ಬೈಗಳುಗಳು, ಸಂಪ್ರದಾಯಗಳು, ಹರಟೆ, ನಗೆಚಾಟಿಕೆ, ಸತ್ತಾಗ ಅಳುವ ಪರಿ, ಸಾಂತ್ವನ ಹೇಳುವವರ ಆಳವಾದ ಲೋಕಜ್ಞಾನ ಒಟ್ಟಾರೆ ಅಲ್ಲಿಯ ಘಟನಾವಳಿಗಳು ಕಾದಂಬರಿಯ ಓದಿಗೆ ಮಹತ್ತರವಾದ ಶಕ್ತಿಯನ್ನು ತುಂಬಿವೆ.

★ ಕಾದಂಬರಿಯಲ್ಲಿ ಮಾರುತಿ ಝೋಪಡಪಟ್ಟಿ ಬೆಳೆದು ಬಂದ ಬಗೆ, ಇಲ್ಲಿನ ಜನರ ಬದುಕು, ನೀರಿಗಾಗಿ ಬಡಿದಾಟ, ಪರಸ್ಪರ ಒಗ್ಗಟ್ಟಿನಿಂದ ಬಾಳುವುದು, ಅವರ ಅತ್ಯಾಚಾರ, ದೌರ್ಜನ್ಯಗಳು ಪರಿಣಾಮಕಾರಿಯಾಗಿ ಗೀತಾನಾಗಭೂಷಣರವರು ಚಿತ್ರಿಸಿದ್ದಾರೆ.

★ ಸಮಾಜದಲ್ಲಿ ಮೇಲ್‌ಸ್ಥರದ ಜನ ಕೆಳಸ್ಥರದಲ್ಲಿರುವ ಜನರನ್ನು ಯಾವ ರೀತಿಯಲ್ಲಿ ಕಾಣುತ್ತಾರೆ ಮತ್ತು ಅವರ ಮೇಲೆ ಯಾವ ರೀತಿಯಲ್ಲಿ ಶೋಷಣೆಗೆ ಒಳಪಡಿಸುತ್ತಾರೆಂಬುದನ್ನು ಸಾಮಾಜಿಕ ಪ್ರಜ್ಞೆ ಅಥವಾ ಮಾನವೀಯ ನೆಲೆಯಲ್ಲಿ ಗುರುತಿಸುವುದು ಕಾದಂಬರಿಯ ಪ್ರಮುಖವಾದ ವಿಚಾರವಾಗಿದೆ.

★ ಕಾದಂಬರಿಯ ಮಹತ್ವವೆಂದರೆ ದೇಸೀತನದಿಂದ. ಒಂದು ಸಂಸ್ಕೃತಿಯು ಬೆಳೆಯಬೇಕಾದರೆ ಅದು ಜನಾಂಗದಿಂದ ಅನಾವರಣಗೊಳ್ಳುತ್ತದೆ. ಕೆಳಜಾತಿ ಜನರ ಬದುಕಿನ ವಿವರವನ್ನು ಕಾದಂಬರಿಯುದ್ದಕ್ಕೂ ತರುವುದರಿಂದ ವಿಶಿಷ್ಟ ರೂಪದಲ್ಲಿ ಚಿತ್ರಿಸಿದ್ದಾರೆ.

ಒಟ್ಟಾರೆಯಾಗಿ ಈ ಮೇಲಿನ ಎಲ್ಲಾ ಅಂಶಗಳನ್ನು 'ಬದುಕು' ಕಾದಂಬರಿಯಲ್ಲಿ ತರುವುದರಿಂದ ಒಂದು ಬೃಹತ್ ಕಾದಂಬರಿಯನ್ನಾಗಿ ಗೀತಾನಾಗಭೂಷಣರವರು ಸೃಷ್ಟಿಸಿದ್ದಾರೆ. ಇವರು ಬಂಡಾಯ ಲೇಖಕಿಯಾಗಿದ್ದು ಕನ್ನಡ ಕಾದಂಬರಿ ಸಾಹಿತ್ಯಕ್ಕೆ ಇವರ ಕೊಡುಗೆ ವಿಶಿಷ್ಟವಾಗಿದೆ.

ಅನುಬಂಧಗಳು

(ಅ) ಗೀತಾನಾಗಭೂಷಣರವರ ಬದುಕಿನ ವಿವರ

ಹುಟ್ಟೂರು	:	ಗುಲಬರ್ಗಾ ಜಿಲ್ಲೆಯ ಸಾವಳಗಿ ಗ್ರಾಮ
ಹುಟ್ಟಿದ ದಿನಾಂಕ	:	25ನೆಯ ಮಾರ್ಚ್, 1942
ವಿದ್ಯಾಭ್ಯಾಸ	:	ಎಂ.ಎ., ಬಿ.ಎಡ್.
ವೃತ್ತಿ	:	ನಿವೃತ್ತ ಪ್ರಾಂಶುಪಾಲರು, ಶ್ರೀ ನಗರೇಶ್ವರ ಸಂಯುಕ್ತ ಕಿರಿಯ ಮಹಾವಿದ್ಯಾಲಯ, ನೆಹರು ಗಂಜ್, ಗುಲ್ಬರ್ಗಾ.
ಪ್ರವೃತ್ತಿ	:	ಓದುವುದು, ಕಥೆ, ಕಾದಂಬರಿಗಳನ್ನು ಬರೆಯುವುದು.
ತಂದೆಯ ಹೆಸರು	:	ಶಾಂತಪ್ಪ
ತಾಯಿಯ ಹೆಸರು	:	ಶರಣಮ್ಮ
ಚಲನಚಿತ್ರ	:	'ಹೆಣ್ಣಿನ ಕೂಗು' ಎಂಬ ಹೆಸರಿನಲ್ಲಿ ಹಸಿಮಾಂಸ ಮತ್ತು ಹದ್ದುಗಳು ಕಾದಂಬರಿ ಚಲನಚಿತ್ರವಾಗಿದೆ.
ಕಿರುತೆರೆ ಕಂಡ ಕೃತಿಗಳು	:	1) ಜೋಗಿಣಿ 2) ಅವ್ವ 3) ಸತ್ತ ಹೆಣ್ಣಿನ ಸುತ್ತ (ಕಥಾನಾಟಕ) 4) ಜೀವನ ಚಕ್ರ (ಧಾರಾವಾಹಿ) 5) ನೀಲಗಂಗಾ.
ಆಕಾಶವಾಣಿ	:	ಸುಮಾರು 50 ಕಥೆಗಳು, 15 ನಾಟಕಗಳು, ವಿವಿಧ ಕನ್ನಡ ಆಕಾಶವಾಣಿ ಕೇಂದ್ರಗಳಿಂದ ಪ್ರಸಾರವಾಗಿವೆ.
ಸದಸ್ಯತ್ವ	:	1) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯತ್ವ (1992-1994) 2) ಡಾ. ಶಿವರಾಮ ಕಾರಂತ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯತ್ವ (1992) 3) ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯತ್ವ (1992-1995) 4) ಗುಲಬರ್ಗಾ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯತ್ವ (1980-1985) 5) 2000-2001 ನೇ ಸಾಲಿನ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯತ್ವ.
ಅಧ್ಯಕ್ಷರು	:	1) ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ (2005) 2) ಗುಲಬರ್ಗಾ ಜಿಲ್ಲಾ ಐದನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರು (2000) 3) ಅಧ್ಯಕ್ಷರು, 76ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗದಗ (2010)

(ಆ) ಪ್ರಶಸ್ತಿ - ಪುರಸ್ಕಾರಗಳು

1) ಆಘಾತ ಕಾದಂಬರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ಮಲ್ಲಿಕಾ ಪ್ರಶಸ್ತಿ' (1983).

2) ನೋವು ಕಾದಂಬರಿಗೆ 'ಮಾರ್ದನಿ' ಪತ್ರಿಕೆ ಏರ್ಪಡಿಸಿದ್ದ ಕನ್ನಡ ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ.

3) ಗುಲಬರ್ಗಾ ವಿಭಾಗ ಮಟ್ಟದ ಉತ್ತಮ ಉಪನ್ಯಾಸಕಿ ಪ್ರಶಸ್ತಿ (1996)

4) ಧುಮ್ಮಸು ಕಾದಂಬರಿಗೆ ಸಿರಿವಾರದ ಉಮಾಪತಿ ಚುಕ್ಕಿ ಪ್ರತಿಷ್ಠಾನ, ರಾಯಚೂರು ಪ್ರಶಸ್ತಿ (1995).

5) ಗುಲಬರ್ಗಾದ ಎಸ್.ಆರ್.ಪಾಟೀಲ್ ಪ್ರತಿಷ್ಠಾನದ ಸಾಹಿತ್ಯ ಪ್ರಶಸ್ತಿ.

6) ದಂಗೆ ಕಾದಂಬರಿಗೆ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿ (1998)

7) ಕಾಯಕ ರತ್ನ ಪ್ರಶಸ್ತಿ, ಮಹಾಂತ ಜ್ಯೋತಿ ಪ್ರತಿಷ್ಠಾನ (2001)

8) ಕನ್ನಡ ಸಾಹಿತ್ಯ ಪರಿಷತ್ತಿನ ಬಿ. ಸರೋಜಾದೇವಿ ಪ್ರಶಸ್ತಿ (2001)

9) ಬದುಕು ಕಾದಂಬರಿಗೆ

    1) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (2004)

    2) ಮಾಣಿಬಾಯಿ ಪಾಟೀಲ ಪ್ರಶಸ್ತಿ, ಕಲಬುರ್ಗಿ (2001)

    3) ಗೊರೂರು ಸಾಹಿತ್ಯ ಪ್ರಶಸ್ತಿ (2001)

    4) ಸರ್ ಎಂ. ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿ (2002)

10) ಕರ್ನಾಟಕ ಲೇಖಕಿಯರ ಸಂಘದ ಅನುಪಮಾ ಪ್ರಶಸ್ತಿ (2005)

11) ಹಂಪಿ ವಿಶ್ವವಿದ್ಯಾಲಯದ 'ನಾಡೋಜ ಪ್ರಶಸ್ತಿ' (2004)

12) ಗುಲಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ (2008)

13) ಧರ್ಮಸ್ಥಳದ ಸಾಹಿತ್ಯ ಪ್ರಶಸ್ತಿ (2007)

14) ಆಳ್ವಾಸ್ ನುಡಿಸಿರಿಯ ಸಾಹಿತ್ಯ ಪ್ರಶಸ್ತಿ (2006)

15) ಸೀತಾಸುತ ಸಿದ್ದೇಗೌಡ ಸ್ಮಾರಕ ಸಾಹಿತ್ಯ ಪ್ರಶಸ್ತಿ ಮಂಡ್ಯ (2007)

16) ಆರ್ಯಭಟ ಪ್ರಶಸ್ತಿ (2005)

17) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (1998)

18) ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1998)

19) ಕರ್ನಾಟಕ ಸರ್ಕಾರದ 'ದಾನ ಚಿಂತಾಮಣಿ ಅತ್ತಿಮಬ್ಬೆ' ಪ್ರಶಸ್ತಿ (2002)

(ಇ) ಕೃತಿ ಸೂಚಿ

ಕಾದಂಬರಿಗಳು :

1) ತಾವರೆಯ ಹೂವು (1968)
2) ಚಂದನದ ಚಿಗುರು (1969)
3) ಮಹಾಮನೆ (1970)
4) ಮರಳಿನ ಮನೆ (1971)
5) ಸಪ್ತವರ್ಣದ ಸ್ವಪ್ನ (1973)
6) ಮಾಪುರ ತಾಯಿಯ ಮಕ್ಕಳು (1978)
7) ಹಸಿಮಾಂಸ ಮತ್ತು ಹದ್ದುಗಳು (1978/1998)
8) ಆಘಾತ (1980)
9) ಅವಾಂತರ (1982)
10) ಚಿಕ್ಕಿಯ ಹರೆಯದ ದಿನಗಳು (1983)
11) ಬದಲಾಗುವ ಬಣ್ಣಗಳು (1984)
12) ನೀಲಗಂಗಾ (1986)
13) ಪ್ರೀತಿಸಿದ್ದು ನಿನ್ನನ್ನೇ (1983)
14) ಮೋಹ (1986)
15) ನಿನ್ನ ತೋಳುಗಳಲ್ಲಿ (1987)
16) ನಿನ್ನೊಲವ ನನಗಿರಲಿ (1987)
17) ಸವತಿ ಶ್ರೀಗಂಧ (1988)
18) ನನ್ನ ನಿನ್ನ ನಡುವೆ (1992)
19) ಚೈತ್ರದ ಹಾಡು (1993)
20) ಧುಮ್ಮಸ್ಸು (1994)
21) ಏರಿಳಿತಗಳು (1995)
22) ಆಸರೆಗಳು (1996)
23) ನನ್ನ ಒಲವು ನಿನ್ನ ಚೆಲುವು (1997)
24) ದಂಗೆ (1997)
25) ಅಭಿಮಾನ (1998)

26) ಬದುಕು (2001)

27) ಕಾಗೆ ಮುಟ್ಟಿತು (2002)

ಕಥೆಗಳು :

1) ಜ್ವಲಂತ (1989)

2) ಅವ್ವ ಮತ್ತು ಇತರ ಕಥೆಗಳು (1993)

3) ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು (2006)

ಇತರೆ :

1) ದುರಗ ಮುರಗಿಯವರ ಸಂಸ್ಕೃತಿ (1993)
(ಸಾಹಿತ್ಯ ಅಕಾಡೆಮಿ ಪ್ರಕಟಣೆ)

2) ಖೇಮಣ್ಣ (1998)
(ಸಾಹಿತ್ಯ ಅಕಾಡೆಮಿ ಪ್ರಕಟಣೆ)

ಅಭ್ಯಾಸ ಸೂಚಿ

1) ಅನಂತಮೂರ್ತಿ ಯು.ಆರ್. ಸಂಸ್ಕಾರ, ಅಕ್ಷರ ಪ್ರಕಾಶನ ಹೆಗ್ಗೋಡು, 1992.

2) ಅರವಿಂದ ಮಾಲಗತ್ತಿ, ಕಾದಂಬರಿಗಳ ವಿಮರ್ಶೆ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, 2000.

3) ಅ.ನ.ಕೃ. ಹೊಸ ಸುಗ್ಗಿ, ಎಸ್.ಆರ್. ಪ್ರಕಾಶನ ಬೆಂಗಳೂರ, 1972.

4) ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, 1967.

5) ಕುವೆಂಪು, ಕಾನೂರು ಹೆಗ್ಗಡಿತಿ, ಉದಯರವಿ ಪ್ರಕಾಶ, ಮೈಸೂರು, 2007.

6) ಗವಿಸಿದ್ಧಪ್ಪ ಎಚ್.ಪಾಟೇಲ್, ಸಾಹಿತ್ಯ ಸಂಕಥನ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಸರಸ್ವತಿ ಗೋದಾಮ, ಗುಲಬರ್ಗಾ , 2005.

7) ಗವಿಸಿದ್ಧಪ್ಪ ಎಚ್.ಪಾಟೇಲ್, ಪುರಸ್ಕೃ ತ ಕೃತಿಗಳ ಸಮೀಕ್ಷೆ, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, 2005

8) ಗಾಯಿತ್ರಿ.ಎನ್. ಗೀತಾನಾಗಭೂಷಣ, ನವಕರ್ನಾಟಕ ಪ್ರಕಾಶನ, ಬೆಂಗಳೂರು 2009.

9) ಗಿರಡ್ಡಿ ಗೋವಿಂದರಾಜ, ಕಾದಂಬರಿ ವಸ್ತು ಮತ್ತು ತಂತ್ರ, ಸ್ನೇಹ ಪ್ರಕಾಶನ, ಬೆಂಗಳೂರು 1987.

10) ಗೀತಾನಾಗಭೂಷಣ, ಬದುಕು, ಲೋಹಿಯಾ ಪ್ರಕಾಶನ, ಬಳ್ಳಾರಿ, 2005.

11) ಗುಲ್ವಾಡಿ ವೆಂಕಟರಾವ್, ಇಂದಿರಾಬಾಯಿ, ಕನ್ನಡ ಮತ್ತು ಸಂಸ್ಕೃ ತಿ ನಿರ್ದೇಶನಾಲಯ, ಬೆಂಗಳೂರು, 1985.

12) ಚದುರಂಗ, ಹೆಜ್ಜಾಲ, ಪುಸ್ತಕ ಪ್ರಕಾಶನ, ಮೈಸೂರು, 1998.

13) ಚಂದ್ರಕಾಂತ ಕುಸನೂರ, ಕೈಫಿಯತ್ ಪ್ರಕಾಶಕರು ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, 2007.

14) ಚಂದ್ರಶೇಖರ ಕಂಬಾರ, ಶಿಖರಸೂರ್ಯ, ಅಕ್ಷರ ಪ್ರಕಾಶನ ಹೆಗ್ಗೋಡ, 2006.

15) ಚಿದಾನಂದಮೂರ್ತಿ.ಎಂ., ಸಂಶೋಧನೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, 1984.

16) ಜಂಬಣ್ಣ ಅಮರಚಿಂತ, ಕುರುಮಯ್ಯ ಮತ್ತು ಅಂಕುಶದೊಡ್ಡಿ, ಬಸಂತಕುಮಾರ ಸುಣಗಾರ ಎಲ್.ಆಯ್.ಜಿ. ಪ್ರಕಾಶಕರು, ಗುಲಬರ್ಗಾ, 1994.

17) ದಸ್ತಗೀರಸಾಬ್ ದಿನ್ನಿ, ದಿನ್ನಿ ತಾಳಪಲ್ಲಿ ವೆಂಕಯ್ಯ, ಯುವಕರ ಸಂಘ ಪ್ರಕಾಶನ, ಹಗರಿಬೊಮ್ಮನಹಳ್ಳಿ 2004.

18) ನಿರಂಜನ, ರಂಗಮ್ಮನ ವಠಾರ, ಪ್ರಸಾದ ಅಂಡ್ ಕಂಪನಿ, ಬೆಂಗಳೂರು 1977.

19) ಪುಟ್ಟಣ್ಣ ಎಂ.ಎಸ್., ಮಾಡಿದ್ದುಣ್ಣೋ ಮಹಾರಾಯ, ಕಾವ್ಯಾಲಯ, ಮೈಸೂರು, 1967.

20) ಪೂರ್ಣಚಂದ್ರ ತೇಜಸ್ವಿ, ಕರ್ವಾಲೋ, ಪುಸ್ತಕ ಪ್ರಕಾಶನ, ಸರಸ್ವತಿ ಪುರಂ, ಮೈಸೂರು, 2007.

21) ಬರಗೂರ ರಾಮಚಂದ್ರಪ್ಪ, ಶಬರಿ, ಅಂಕಿತ ಪುಸ್ತಕ ಪ್ರಕಾಶಕರು, ಬೆಂಗಳೂರು, 2005.

22) ಬಸವರಾಜ ಕಟ್ಟೀಮನಿ, ಮಾಡಿ ಮಡಿದವರು, ಕನ್ನಡ ಮತ್ತು ಸಂಸ್ಕೃ ತಿ ನಿರ್ದೇಶನಾಲಯ, ಬೆಂಗಳೂರು, 1985.

23) ಬಸವರಾಜ ಪೋಲೀಸ್ ಪಾಟೀಲ, ನಾಗತಿಹಳ್ಳಿ ಚಂದ್ರಶೇಖರ ಸಾಹಿತ್ಯ, ಅಮರ ಪ್ರಕಾಶನ, ಗುಲಬರ್ಗಾ, 2006.

24) ಮಲ್ಲಿಕಾ ಘಂಟಿ, ಧರಣಿಯ ಮೇಲೊಂದು, ಗೌತಮ ಪ್ರಕಾಶನ, ಬಾಗಲಕೋಟೆ, 2005.

25) ಮಹಾಬಲೇಶ್ವರ ರಾವ್, ಸಂಶೋಧನ ಮಾರ್ಗ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 1996.

26) ಮಿರ್ಜಿ ಅಣ್ಣರಾಯ, ನಿಸರ್ಗ, ಮನೋಹರ ಗ್ರಂಥಮಾಲಾ, ಧಾರವಾಡ, 1962.

27) ರಾಜಪ್ಪ ದಳವಾಯಿ, ಕನ್ನಡ ಸಾಹಿತ್ಯಕೋಶ, ಕದಿರು ಪ್ರಕಾಶನ, ಮೈಸೂರು, 2000.

28) ರಾಮಚಂದ್ರನ್.ಸಿ.ಎನ್., ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,1997.

29) ರಾವ್ ಬಹದ್ದೂರ್, ಗ್ರಾಮಾಯಣ, ಮನೋಹರ ಗ್ರಂಥಮಾಲಾ, ಧಾರವಾಡ, 1957.

30) ಲಂಕೇಶ.ಪಿ., ಮುಸ್ಸಂಜೆಯ ಕಥಾಪ್ರಸಂಗ, ಕನ್ನಡ ಮತ್ತು ಸಂಸ್ಕೃ ತಿ ನಿರ್ದೇಶನಾಲಯ, ಬೆಂಗಳೂರು, 1990.

31) ವಿಜಯಶ್ರೀ ಸಬರದ, ಅನುಪಮಾ ನಿರಂಜನ ಅವರ ಕಾದಂಬರಿಗಳು, ಪ್ರಕಾಶಕರು, ಡಿ.ವಿ.ಕೆ. ಮೂರ್ತಿ, ಮೈಸೂರು, 1994.

32) ಷರೀಫಾ. ಕೆ. – ಬಸವರಾಜ ಸೂಳಿಭಾವಿ, ಗೀತಾ ನಾಗಭೂಷಣ ಮಹಿಳಾ ಮಾರ್ಗ, ಲಡಾಯಿ ಪ್ರಕಾಶನ, ಗದಗ, 2010.

33) ಶಂಕರ್ ಮೊಕಾಶಿ ಪುಣೇಕರ್, ಗಂಗವ್ವ ಗಂಗಾಮಾಯಿ, ಸುರುಚಿ ಪ್ರಕಾಶನ, ಮೈಸೂರು, 1975.

34) ಶಾಂತರಸ, ಸಣ್ಣ ಗೌಡಸಾನಿ, ಪ್ರಕಾಶಕರು ನೃಪತುಂಗ ಅಧ್ಯಯನ ಸಂಸ್ಥೆ, ಸೇಡಂ, 1988.

35) ಶಾಸ್ತ್ರೀ. ಪಿ.ವಿ. , ಸಾಹಿತ್ಯದ ಪ್ರಕಾರಗಳು, ಪ್ರತಿಭಾ ಗ್ರಂಥಮಾಲೆ, ಧಾರವಾಡ, 1991.

36) ಶಿವರಾಮ ಕಾರಂತ, ಚೋಮನದುಡಿ, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, 1975.

37) ಶಿವರಾಮ ಕಾರಂತ, ಮರಳಿ ಮಣ್ಣಿಗೆ, ಹರ್ಷ ಪ್ರಕಟಣಾಲಯ, ಪುತ್ತೂರು, 1960.

38) ಶಿವರುದ್ರ. ಕೆ. ಕಲ್ಲೋಳಿಕರ, ಹೊಲಗೇರಿಯ ರಾಜಕುಮಾರ, ಅರ್‌ಹತ್ ಪ್ರಕಾಶನ, ಧಾರವಾಡ, 2008.

39) ಶಿವಾನಂದ ಬೇಕಲ್, ಸಾಹಿತ್ಯ ಸಮೀಕ್ಷೆ, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. 2005.

40) ಶಿರೂರ. ಬಿ.ವಿ., ಸಂಶೋಧನ ಸ್ವರೂಪ, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, 1992.

41) ಶ್ರೀನಿವಾಸ ವೈದ್ಯ, ಹಳ್ಳ ಬಂತು ಹಳ್ಳ, ಮನೋಹರ ಗ್ರಂಥಮಾಲಾ, ಧಾರವಾಡ, 2004.

42) ಶೇಷಗಿರಿರಾವ್. ಎಲ್.ಎಸ್., ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, 2008.

43) ಸರಸ್ವತಿ ಚಿಮ್ಮಲಗಿ, ಗೀತಾ ನಾಗಭೂಷಣ ಕಲಬುರ್ಗಿಯ ಸ್ಪಂದನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, 2004.

44) ಸಂಗಮೇಶ ಸವದತ್ತಿಮಠ, ಸಾಹಿತ್ಯ ಸಂಶೋಧನ ಮಾರ್ಗ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ, 1998.